ಸಂಪುಟ: 05 ಸಂಚಿಕೆ: 298 ಪುಟಗಳು: 08 ಭಾನುವಾರ 11 ಜನವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಇತರರಿಗಾಗಿ ನಿಮ್ಮ ಸ್ವಂತಿಕೆಯನ್ನು ಎಂದಿಗೂ ಬಿಟ್ಟುಕೊಡಬೇಡಿ. ಏಕೆಂದರೆ ಈ ಪ್ರಪಂಚದಲ್ಲಿ ನಿಮ್ಮ ಪಾತ್ರವನ್ನು ನಿಮಗಿಂತ ಚೆನ್ನಾಗಿ ಯಾರೂ ನಿಭಾಯಿಸಲು ಸಾಧ್ಯವಿಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರಾಜ್ಯದಾದ್ಯಂತ ಎಲ್ಲಾ ಕಾಂಗ್ರೆಸ್ ಕಚೇರಿಗಳ ಮುಂದೆ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ನರೇಗಾ) ಬದಲಿಗೆ, ವಿಕಸಿತ ಭಾರತ ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದನ್ನು ವಿರೋಧಿಸಿ. ಜನವರಿ 11ರಂದು ರಾಜ್ಯದಾದ್ಯಂತ ಎಲ್ಲಾ ಕಾಂಗ್ರೆಸ್ ಕಚೇರಿಗಳ ಮುಂದೆ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಮತ್ತು ಉಪವಾಸ ಸತ್ಯಾಗ್ರಹ ಮಾಡುತ್ತೇವೆ' ಎಂದು ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಗೋಪಿನಾಥ ಪಳನಿಯಪ್ಪನ್ ಹೇಳಿದರು.

'ಹೊಸ ಕಾಯ್ದೆ ರದ್ದುಪಡಿಸುವವರೆಗೆ ನಾವು ಹೋರಾಟ ಮಾಡುತ್ತೇವೆ. ನ್ಯಾಯಾಲಯದ ಮೊರೆ ಹೋಗುವ ಜತೆಗೆ, ಜ.12ರಿಂದ 29ರವರೆಗೆ ದೇಶದಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದ ಜನಸಂಪರ್ಕ ಕಾರ್ಯಕ್ರಮ ಆಯೋಜಿಸುತ್ತೇವೆ. ಜ.31ರಿಂದ ಫೆ.6ರವರೆಗೆ ಜಿಲ್ಲಾಮಟ್ಟದಲ್ಲಿ ಪ್ರತಿಭಟನೆ ಮತ್ತು ಫೆ.16ರಿಂದ 24ರವರೆಗೆ ವಿಭಾಗೀಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು. ರಾಜ್ಯದಲ್ಲಿ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಕಚೇರಿಗಳ ಬಳಿ ಪ್ರತಿಭಟನೆ ನಡೆಸುತ್ತೇವೆ' ಎಂದರು.

## ಮಲಯಾಳ ಭಾಷಾ ಮಸೂದೆ ಕುರಿತ ಕಳವಳದಲ್ಲಿ ಸಂತ್ಯಾಂಶವಿಲ್ಲ

• ಉದಯವಾಹಿನಿ, ಬೆಂಗಳೂರು

ಕೇರಳದ ಕನ್ನಡ ಶಾಲೆಗಳಲ್ಲೂ ಮಲಯಾಳ ಬೋಧಿಸುವ ಉದ್ದೇಶಿತ ಮಲಯಾಳ ಭಾಷಾ ಮಸೂದೆಯ ಕುರಿತಾದ ಕಳವಳಗಳು ಸತ್ಯಾಂಶಗಳನ್ನು ಆಧರಿಸಿಲ್ಲ ಎಂದು ಕೇರಳ ಸಿಎಂ ಪಿಣರಾಯಿ ಹೇಳಿದ್ದಾರೆ. ಮಸೂದೆ ಕುರಿತು ಸಿಎಂ ಸಿದ್ದರಾಮಯ್ಯನವರು ಆಕ್ಷೇಪ ವ್ಯಕ್ತಪಡಿಸಿ ಪತ್ರವನ್ನು ಬರೆದ ಒಂದು ದಿನದ ಬಳಿಕ ಪಿಣರಾಯಿ ಪ್ರತಿಕ್ರಿಯಿಸಿದ್ದಾರೆ. ಭಾಷಾ ಅಲ್ಪಸಂಖ್ಯಾತರು ಮತ್ತು ಭಾರತದ ಬಹುತ್ವದ ನೀತಿಯನ್ನು ರಕ್ಷಿಸುವ ಅಗತ್ಯವನ್ನು ಉಲ್ಲೇಖಿಸಿ, ಈ ಮಸೂದೆಯನ್ನು ಜಾರಿಗೆ ತಂದರೆ, ಕರ್ನಾಟಕವು ಲಭ್ಯವಿರುವ ಎಲ್ಲಾ ಸಾಂವಿಧಾನಿಕ ವಿಧಾನಗಳನ್ನು ಬಳಸಿಕೊಂಡು ಅದನ್ನು ವಿರೋಧಿಸುತ್ತದೆ ಎಂದು ಸಿದ್ದರಾಮಯ್ಯ ತಮ್ಮ ಪತ್ರದಲ್ಲಿ ಎಚ್ಚರಿಸಿದ್ದರು. ಇದಕ್ಕೂ ಮೊದಲು, ಕನ್ನಡ ಮಾಧ್ಯಮ ಶಾಲೆಗಳಲ್ಲಿಯೂ ಪ್ರಥಮ ಭಾಷೆಯನ್ನಾಗಿ ಮಲಯಾಳ ಕಲಿಸುವುದನ್ನು ಕಡ್ಡಾಯಗೊಳಿಸುವ ಮೂಲಕ ಮಲಯಾಳ ಭಾಷಾ ಮಸೂದೆಯು ಭಾಷಾ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುತ್ತದೆ. ವಿಶೇಷವಾಗಿ ಕಾಸರಗೋಡಿನ ಮೂಲ ವಾಸ್ತವಗಳನ್ನು ನಿರ್ಲಕ್ಷಿಸುತ್ತದೆ ಎಂದು ಅವರು ಟೀಕಿಸಿದ್ದರು.

## ಮುಂದಿನ 24 ಗಂಟೆ ಹುಷಾರು, ಭಾರೀ ಚಳಿ ಕಾಡಬಹುದು

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಉತ್ತರ ಒಳನಾಡು ಭಾಗದಲ್ಲಿ ಮುಂದಿನ 24 ಗಂಟೆಗಳಲ್ಲಿ ಶೀತಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ಮುನ್ಸೂಚನೆ ನೀಡಿದೆ. ರಾಜ್ಯದ ಒಳನಾಡು ಪ್ರದೇಶಗಳಲ್ಲಿ ಕನಿಷ್ಠ ತಾಪಮಾನವು ಸಾಧಾರಣಕ್ಕಿಂತಲೂ ಮೂರರಿಂದ ಆರು ಸೆಲ್ಸಿಯಸ್‌ನಷ್ಟು ಕುಸಿಯಲಿದೆ. ಹಲವೆಡೆ ಮಂಜು ಮುಸುಕಿದ ವಾತಾವರಣ ಇರಲಿದೆ ಎಂದು ತಿಳಿಸಿದೆ. ವಿಜಯಪುರದಲ್ಲಿ ಕಳೆದ 24 ಗಂಟೆಗಳಲ್ಲಿ ಚಳಿ ಗಾಳಿ ವಿಪರೀತ ಇದೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ. ಏತನ್ಮಧ್ಯೆ, ಬಂಗಾಳಕೊಲ್ಲಿಯ ನೈರುತ್ಯ ಹಾಗೂ ಶ್ರೀಲಂಕಾದ ಈಶಾನ್ಯ ಕರಾವಳಿಯಲ್ಲಿ ಬೆಳಿಗ್ಗೆ ವಾಯುಭಾರ ಕುಸಿತ ಉಂಟಾಗಿದ್ದು, ಉತ್ತರ ವಾಯವ್ಯ ದಿಕ್ಕಿಗೆ ಮಾರುತಗಳು ಚಲಿಸುತ್ತಿವೆ. ಇದರಿಂದ ಕರ್ನಾಟಕದ ಮಳೆ ಮಾದರಿಯ ಮೇಲೆ ಪರಿಣಾಮವಾಗಬಹುದು ಎಂದು ಅಂದಾಜಿಸಲಾಗಿದೆ.

## ಎಂಎನ್‌ಆರ್‌ಇಜಿ ಕುರಿತು ವಿಶೇಷ ಅಧಿವೇಶನ, ಪಾದಯಾತ್ರೆ

• ಉದಯವಾಹಿನಿ, ಮಂಗಳೂರು

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಎಂಎನ್‌ಆರ್‌ಇಜಿ) ಯೋಜನೆಯನ್ನು ಕೇಂದ್ರವು ರದ್ದುಪಡಿಸಿದ ಬಗ್ಗೆ ಜನಜಾಗೃತಿ ಮೂಡಿಸಲು ರಾಜ್ಯದಲ್ಲಿ ವಿಭಿನ್ನ ಕಾರ್ಯಕ್ರಮ ಹಮ್ಮಿಕೊಳ್ಳಲು ಚಿಂತನೆ ನಡೆಸಿದ್ದೇವೆ.

ಈ ಬಗ್ಗೆ ಚರ್ಚಿಸಲು ವಿಧಾನಮಂಡಲದ ವಿಶೇಷ ಅಧಿವೇಶನ ನಡೆಸಲಿದ್ದೇವೆ. ಇದೇ 26ರಿಂದ ಫೆ. 2ರವರೆಗೆ ಪ್ರತಿ ವಿಧಾನ ಕ್ಷೇತ್ರದಲ್ಲಿ 5 ಕಿ.ಮೀ.ಯಿಂದ 10 ಕೀ.ಮೀ ಪಾದಯಾತ್ರೆ ನಡೆಸಿ ಜನಜಾಗೃತಿ ಮೂಡಿಸಲಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಪಾದಯಾತ್ರೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿ ಸದಸ್ಯರನ್ನು ಹಾಗೂ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಚೀಟಿ ಪಡೆದ ಕಾರ್ಮಿಕರನ್ನು ತೊಡಗಿಸಿಕೊಳ್ಳಲಿದ್ದೇವೆ' ಎಂದರು.

# ದಾಖಲೆ ನೋಡಿ ಬಾಡಿಗೆ ಕೊಡಿ ಪರಂ ಕಿಡಿ

"ಬಾಂಗ್ಲಾದವರು ಇಲ್ಲಿ ಇರುವುದು ಕಂಡು ಬಂದರೆ ಗಮನಿಸಿ ಡಿಪೋರ್ಟ್ ಮಾಡ್ತೇವೆ. ದಾಖಲೆ ಪರಿಶೀಲನೆ ಮಾಡಿ ಬಾಡಿಗೆ ಕೊಡಬೇಕು. ಇಲ್ಲವಾದರೆ ಮನೆ ಮಾಲೀಕರ ಮೇಲೆ ಕ್ರಮ ವಹಿಸಲಾಗುವುದು" ಎಂದು ಗೃಹ ಸಚಿವ ಜಿ. ಪರಮೇಶ್ವರ್ ಎಚ್ಚರಿಸಿದ್ದಾರೆ.



**ಪರಮೇಶ್ವರ್ ಖಡಕ್ ವಾರ್ನಿಂಗ್**

## ಮನೆ ಬಾಡಿಗೆ ನೀಡುವವರ ವಿರುದ್ಧವೂ ಕಠಿಣ ಕ್ರಮ

## ಮಹಿಳಾ ಸುರಕ್ಷತೆಯಲ್ಲಿ ದೇಶದಲ್ಲೇ ಬೆಂಗಳೂರು ನಂಬರ್ 1

1 ಬಾಂಗ್ಲಾದವರು ನೆಲೆಸಿದ್ದರೆ ಅದು ಕೇಂದ್ರ ಸರ್ಕಾರದ ವೈಫಲ್ಯ: ಜಮೀರ್


2 ದಲಿತ ನಾಯಕ ಸಿಎಂ ಕೂಗಿನ ಬಗ್ಗೆ ಪರಮೇಶ್ವರ್ ಹೇಳಿಕೆ

3 ರಾಜ್ಯಪಾಲರು ದ್ವೇಷ ಭಾಷಣ ಬಿಲ್ ರಿಜೆಕ್ಟ್ ಮಾಡಿಲ್ಲ

• ಉದಯವಾಹಿನಿ, ಬೆಂಗಳೂರು

ನಾವು ವಶಕ್ಕೆ ಪಡೆದು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಪ್ರತಿಯೊಂದು ಠಾಣೆಗೂ ಸೂಚನೆ ನೀಡಲಾಗಿದೆ. ಐಡೆಂಟಿಫೈ ಮಾಡಿ ಡಿಪೋರ್ಟ್ ಮಾಡಿ ಅಂತ. ಈ ವಿಚಾರದಲ್ಲಿ ಬಹಳ ಕಠಿಣ ಇದ್ದೇವೆ. ಬಾರ್ಡರ್ ಬಗ್ಗೆ ಕೇಂದ್ರ ಗಮನಹರಿಸಬೇಕು. ಗಡಿ ಪ್ರದೇಶದಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಬಿಎಸ್‌ಎಫ್ ಮಿಲಿಟರಿ ಕಾಳಜಿವಹಿಸಬೇಕು. ವಲಸಿಗರು ಹಣ ಕೊಟ್ಟು ಒಳಗಡೆ ಬರ್ತಾರೆ ಅಂದರೆ, ಅಲ್ಲಿ ಎಲ್ಲೋ ಸಮಸ್ಯೆ ಆಗುತ್ತಿದೆ ಎಂದು ಅರ್ಥ. ಗಡಿಯಲ್ಲಿ ಸರಿಯಾಗಿ ಗಮನಿಸುತ್ತಿಲ್ಲ ಎಂದು ಅರ್ಥ ಎಂದರು. ಕೇಂದ್ರ ರಕ್ಷಣಾ ಸಚಿವಾಲಯದ ಜೊತೆ ಚರ್ಚಿಸಬೇಕು. ಬಾರ್ಡರ್ ಕ್ರಾಸ್ ಮಾಡಿ ಹೇಗೆ ಬರ್ತಾರೆ. ದಾಖಲೆ ಪರಿಶೀಲನೆ ಮಾಡಿ ಬಾಡಿಗೆ ಕೊಡಬೇಕು. ಇಲ್ಲವಾದರೆ ಬಾಡಿಗೆ ಕೊಟ್ಟರೆ ಮನೆ ಮಾಲಿಕರು ವಿರುದ್ಧವೂ ಕ್ರಮ ತೆಗೆದು ಕೊಳ್ಳುತ್ತೇವೆ. ಕೊತ್ತನೂರು, ಲಿಂಗರಾಜಪುರದಲ್ಲಿ ಆಫ್ರಿಕನ್ಸ್ ಹೆಚ್ಚಿದ್ದಾರೆ. ಅವರನ್ನು ಗಮನಿಸಲು ಸೂಚಿಸಿದ್ದೇವೆ. ಕೇಂದ್ರದ ನಿಯಮದ ಪ್ರಕಾರ ಕ್ರಮ ಆಗಲಿದೆ ಎಂದು ಸಚಿವರು ತಿಳಿಸಿದರು. ಪರಮೇಶ್ವರ್ ಸಿಎಂ ಆಗಲಿ ಎಂದು ಸರ್ವಧರ್ಮ ಬೆಂಬಲಿಗರ ಪೂಜೆ ವಿಚಾರವಾಗಿ ಪ್ರತಿಕ್ರಿಯಿಸಿ, ಪ್ರತಿಯೊಬ್ಬ ರಾಜಕಾರಣಿಗೆ ಬೆಂಬಲಿಗರಿರ್ತಾರೆ. ಅವರನ್ನು ಇಷ್ಟಪಡುವವರು ಇದ್ದೇ ಇರ್ತಾರೆ. ಇನ್ನು ಎತ್ತರಕ್ಕೆ ಹೋಗಲಿ ಎಂಬ ಬಯಕೆ ಇರುತ್ತದೆ. ಅದು ನಮ್ಮ ಕ್ಷೇತ್ರ, ಸ್ವಾಭಾವಿಕವಾಗಿ ಬಯಸ್ತಾರೆ. ಅದು ತಪ್ಪು ಅಂತ ಹೇಳೋದಿಲ್ಲ ಎಂದು ಬೆಂಬಲಿಗರನ್ನು ಸಮರ್ಥಿಸಿಕೊಂಡರು.

ಮಹಿಳೆಯರಿಗೆ ಬೆಂಗಳೂರು ಸೇಫ್ ಎಂಬ ವರದಿ ಬಗ್ಗೆ ಪ್ರತಿಕ್ರಿಯಿಸುತ್ತಾ, ಬೆಂಗಳೂರು ಟಾಪ್ ಸಿಟಿ ಎಂದು ವರದಿ ತಿಳಿಸಿದೆ. ಬೇರೆ ಬೇರೆ ಪ್ಯಾರಾಮೀಟರ್ ಸೆಟ್ ಮಾಡಿ ಅಧ್ಯಯನ. ಅದನ್ನು ವರದಿಯಲ್ಲಿ ನಿಗದಿ ಪಡಿಸಲಾಗಿದೆ. ಇನ್ಫ್ರಾಸ್ಟ್ರಕ್ಚರ್, ಟೆಕ್ನಾಲಜಿ, ಸೇಫ್ಟಿ ಎಲ್ಲಾ ಪರಿಗಣನೆ. ಖಂಡಿತವಾಗಿ ಇದು ಹೆಮ್ಮೆಯ ವಿಷಯ. ಇದರಲ್ಲಿ ಭಾಗಿಯಾದ ಎಲ್ಲರಿಗೆ ಧನ್ಯವಾದ. ವಿಪಕ್ಷದವರು ಟೀಕೆ ಟಿಪ್ಪಣಿ ಮಾಡ್ತಾರೆ. ನಿನ್ನೆ ಕೂಡ ಬೆಂಗಳೂರಿನ ಬಗ್ಗೆ ಟೀಕೆ ಮಾಡಿದ್ರು. ಪೊಲೀಸರ ವಿಚಾರದಲ್ಲೂ ಇದೇ ರೀತಿ ವರದಿ ಬಂದಿತ್ತು. ಈ ಬಾರಿ ಹೊಸ ವರ್ಷದಲ್ಲಿ ಎಚ್ಚರಿಕೆ ವಹಿಸಿದ್ದೆವು. ಯಾವುದೇ ಸಮಸ್ಯೆಯಾಗದಂತೆ ನೋಡಿದ್ದೆವು. ಪ್ರತಿವರ್ಷ ಆಗುತ್ತಿದ್ದ ಸಾವು ನೋವು ತಪ್ಪಿಸಿದ್ದೆವು. ನಾನು ರಾತ್ರಿ 2 ಗಂಟೆವರೆಗೆ ಕಮಾಂಡ್ ಸೆಂಟರ್‌ನಲ್ಲಿ ಕುಳಿತಿದ್ದೆ. ನಾವು ಬಹಳ ಎಚ್ಚರಿಯನ್ನು ವಹಿಸಿದ್ದೇವೆ ಎಂದರು. ದ್ವೇಷ ಭಾಷಣ ಬಿಲ್‌ಗೆ ಅಂಕಿತ ಬೀಳದ ವಿಚಾರವಾಗಿ ಮಾತನಾಡಿ, ಅವರ ಬಳಿಯೇ ಇಟ್ಟುಕೊಂಡಿದ್ದಾರೆ. ಸ್ವೀಕಾರವನ್ನೂ ಮಾಡಿಲ್ಲ, ತಿರಸ್ಕರಿಸಿಯೂ ಇಲ್ಲ. ಬಿಲ್ ರಿಜೆಕ್ಟ್ ಆದ ಮೇಲೆ ಸರ್ಕಾರದ ತೀರ್ಮಾನ. 22, 25 ಬಿಲ್‌ಗಳನ್ನು ರಾಜ್ಯಪಾಲರಿಗೆ ಕಳಿಸಿದ್ದೆವು. ಸುಮಾರು ಬಿಲ್‌ಗೆ ಸಹಿ ಹಾಕಿದ್ದಾರೆ. ಕೆಲವು ಮಾತ್ರ ಅವರ ಬಳಿಯೇ ಇವೆ. ದಲಿತ ಒಳ ಮೀಸಲಾತಿ ಬಿಲ್‌ಗೆ ವಿವರಣೆ ಕೇಳಿದ್ದಾರೆ. ಬಿಲ್ ಓದಿ ಆಮೇಲೆ



ಅಂಕಿತ ಹಾಕಬಹುದು. ಮುಂದೆ, ಬಳ್ಳಾರಿ, ಹುಬ್ಬಳ್ಳಿ ಪ್ರಕರಣ ಸಿಐಡಿಗೆ ಕೊಡುವ ವಿಚಾರವಾಗಿ ಪ್ರತಿಕ್ರಿಯಿಸಿ, ಸಿಎಂ ಜೊತೆ ಮಾತನಾಡಿದ್ದೆವು. ಆನಂತರ ಆದೇಶ ಹೊರಡಿಸಿದ್ದೇವೆ. ನಾವು ಏನೋ ಮುಚ್ಚಿಡ್ತಿದ್ದೇವೆ ಅಂದುಕೊಂಡಿದ್ದಾರೆ. ವಿಪಕ್ಷದವರು ಆಪಾದನೆ ಮಾಡುತ್ತಾನೆ ಇದ್ದಾರೆ. ಇದೇ ಕಾರಣಕ್ಕೆ ಸಿಐಡಿಗೆ ಕೊಡುತ್ತಿದ್ದೇವೆ. ನಿಜ ಏನು ಅಂತ ಅವರಿಗೂ ಗೊತ್ತಾಗಿದೆ. ಸಾರ್ವಜನಿಕರಿಗೂ ಅದನ್ನೇ ಹೇಳುತ್ತೇವೆ ಎಂದರು.

### ಕಾಸರಗೋಡನ್ನು ರಾಜ್ಯಕ್ಕೆ ಸೇರಿಸುವುದು ದೊಡ್ಡ ವಿಚಾರ

ಕನ್ನಡಿಗರ ಮೇಲೆ ಮಲಯಾಳಂ ಹೇರಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಇದು ನನ್ನ ಅಭಿಪ್ರಾಯದ ಪ್ರಶ್ನೆ ಅಲ್ಲ. ಕನ್ನಡದ ವಿಚಾರವಾಗಿ ಮಾತನಾಡಬೇಕು. ಕನ್ನಡಕ್ಕೆ ತೊಂದರೆ ಆಗದ ಹಾಗೆ ನೋಡಬೇಕು. ಮಂಗಳೂರಿನಲ್ಲಿ ಬಹುತೇಕ ಕಡೆ ಮಲಯಾಳಂನಲ್ಲೇ ಮಾತನಾಡುತ್ತಾರೆ. ಕಾಸರಗೋಡಿಗೆ ಹೋದರೆ ಕನ್ನಡದಲ್ಲಿ ಮಾತನಾಡುತ್ತಾರೆ. ಅಲ್ಲಿ ಹೆಚ್ಚು ಕನ್ನಡಿಗರು ಇದ್ದಾರೆ. ಅವರಿಗೆ ನಾವು ಉತ್ತೇಜನ ಕೊಡಬೇಕು. ಕಾಸರಗೋಡು ರಾಜ್ಯಕ್ಕೆ ಸೇರಿಸೋದು ದೊಡ್ಡ ವಿಚಾರ. ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಭಾಷೆ ಆಧಾರದಲ್ಲೇ ರಾಜ್ಯ ವಿಂಗಡಣೆಯಾಗಿದೆ ಎಂದರು.

**ಬಾಂಗ್ಲಾದವರು ಇಲ್ಲಿ ಇರುವುದು ಕಂಡು ಬಂದರೆ ಗಮನಿಸಿ ಡಿಪೋರ್ಟ್ ಮಾಡ್ತೇವೆ**

### ಆರ್‌ಸಿಬಿ ಮ್ಯಾಚ್‌ಗೆ ಅನುಮತಿ

ರಾಜ್ಯಪಾಲರು ದ್ವೇಷ ಭಾಷಣ ಬಿಲ್ ರಿಜೆಕ್ಟ್ ಮಾಡಿಲ್ಲ, ಸ್ಪಷ್ಟೀಕರಣವನ್ನೂ ಕೇಳಿಲ್ಲ. ಅವರು ಅಧ್ಯಯನ ಮಾಡಲು ಇಟ್ಕೊಂಡಿದ್ದಾರೆ ಅಂತ ಗೃಹ ಸಚಿವ ಪರಮೇಶ್ವರ್ ಹೇಳಿದರು. ಬೆಂಗಳೂರಲ್ಲಿ ಪ್ರತಿಕ್ರಿಯಿಸಿದ ಅವರು, ಸ್ಪಷ್ಟೀಕರಣ ಕೇಳಿದ್ರೆ ಕೊಡ್ತೀವಿ, ರಿಜೆಕ್ಟ್ ಮಾಡಿದ್ರೆ ಮುಂದೇನು ಮಾಡಬೇಕು ತೀರ್ಮಾನ ಮಾಡ್ತೀವಿ. ಒಳಮೀಸಲಾತಿ ಬಗ್ಗೆಯೂ ಸ್ಪಷ್ಟೀಕರಣ ಕೇಳಿದ್ದಾರೆ ಕೊಡ್ತೀವಿ ಅಂದರು. ಬಳ್ಳಾರಿ ಪ್ರಕರಣ, ಸಿಐಡಿಗೆ ಕೊಟ್ಟಿದ್ದೇವೆ. ತನಿಖೆ ನಡೆಯಲಿ, ಸತ್ಯ ಹೊರ ಬರಲಿ ಅಂತಾ ಸ್ಪಷ್ಟಪಡಿಸಿದರು.ಇದೇ ವೇಳೆ ಆರ್‌ಸಿಬಿ ಮ್ಯಾಚ್ ಸ್ಥಳಾಂತರ ವಿಚಾರವಾಗಿ ಪ್ರತಿಕ್ರಿಯಿಸಿದ ಕೆಎಸ್‌ಸಿಎಗೆ ಸೂಚಿಸಿದ್ದೇವೆ, ಕುನ್ಹಾ ಸಮಿತಿ ವರದಿಯಂತೆ ಮಾರ್ಗಸೂಚಿ ಪಾಲಿಸಬೇಕು.



### ಪರಮೇಶ್ವರ್ ಸಿಎಂ ಆಗಲಿ ಎಂದು ಪೂಜೆ

ಪರಮೇಶ್ವರ್ ಸಿಎಂ ಆಗಲಿ ಎಂದು ಪೂಜೆಪರಮೇಶ್ವರ್ ಮುಖ್ಯಮಂತ್ರಿ ಆಗಬೇಕು ಎಂದು ಕೊರಟಗೆರೆಯಲ್ಲಿ ಸರ್ವಧರ್ಮ ಬೆಂಬಲಿಗರಿಂದ ಪೂಜೆ ವಿಚಾರವಾಗಿ ಅವರು ಉತ್ತರಿದರು. ಎಲ್ಲಾ ರಾಜಕಾರಣಿಗಳಿಗೆ ಇದ್ದಂತೆ, ಪ್ರತಿಯೊಬ್ಬ ರಾಜಕಾರಣಿಗೂ ಅವರನ್ನು ಇಷ್ಟಪಡುವ ಬೆಂಬಲಿಗರು ಮತ್ತು ಅಭಿಮಾನಿಗಳು ಇದ್ದೇ ಇರುತ್ತಾರೆ. ಅವರ ನಾಯಕ ಎತ್ತರಕ್ಕೆ ಹೋಗಬೇಕು ಎಂದು ಬಯಸುತ್ತಾರೆ. ಇದನ್ನು ತಪ್ಪು ಅಂತ ಹೇಳುವುದಿಲ್ಲ ಎಂದರು. ಬಳ್ಳಾರಿ ಹಾಗೂ ಹುಬ್ಬಳ್ಳಿ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸುವ ವಿಚಾರದ ಬಗ್ಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಆದೇಶವನ್ನು ಹೊರಡಿಸಿದ್ದೇವೆ. ನಾವು ಏನೋ ಮುಚ್ಚಿಡುತ್ತಿದ್ದೇವೆ ಎಂದು ವಿರೋಧ ಪಕ್ಷದವರು ಅನ್ನಿಸುತ್ತಿದೆ. ಇದೇ ಕಾರಣದಿಂದ ಸಿಐಡಿ ತನಿಖೆಗೆ ವಹಿಸಿದ್ದೇವೆ. ತನಿಖೆಯ ನಂತರ ಸತ್ಯ ಏನು ಎಂಬುದು ಅವರಿಗೂ ಗೊತ್ತಾಗುತ್ತೆ. ಸಾರ್ವಜನಿಕರಿಗೂ ತಿಳಿಸುತ್ತೇವೆ ಎಂದು ಹೇಳಿದರು.

# ಬಸವರಾಜ ರಾಯರೆಡ್ಡಿ ನಡೆ ಪಕ್ಷಕ್ಕೆ ಒಳ್ಳೆಯದಲ್ಲ

## ಸಂಕ್ರಾಂತಿ ಬಳಿಕ ನಾನೂ ಮಾತನಾಡುತ್ತೇನೆ: ಬಸವರಾಜ್ ಶಿವಗಂಗಾ ಗರಂ

• ಉದಯವಾಹಿನಿ, ಬೆಂಗಳೂರು

2028 ರವರೆಗೆ ಸಿದ್ದರಾಮಯ್ಯ ಅವರು ಸಿಎಂ ಆಗಲಿ ಎಂದು ಶಾಸಕ ಬಸವರಾಜ ರಾಯರೆಡ್ಡಿ ಪತ್ರ ಬರೆದಿರುವುದು ಪಕ್ಷಕ್ಕೆ ಒಳ್ಳೆಯದಲ್ಲ ಎಂದು ಡಿಕೆ ಶಿವಕುಮಾರ್ ಆಪ್ತ ವಲಯದಲ್ಲಿ ಗುರುತಿಸಿಕೊಂಡ ಶಾಸಕ ಬಸವರಾಜ್ ಶಿವಗಂಗಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತಾಗಿ ಅವರು ಬೆಂಗಳೂರಿನಲ್ಲಿ ಮಾತನಾಡಿ, ಬಸವರಾಜ ರಾಯರೆಡ್ಡಿ ಹಿರಿಯರಿದ್ದಾರೆ, ಅವರ ಮಾತನ್ನು ಹೈಕಮಾಂಡ್ ಗಮನಿಸಬೇಕಾಗಿದೆ ಎಂದರು.

ಪಕ್ಷದ ಆಂತರಿಕ ಬೆಳವಣಿಗೆಗಳ ಬಗ್ಗೆ ಯಾರೂ ಮಾತನಾಡಬೇಡಿ ಎಂದು ಹೈಕಮಾಂಡ್ ಸೂಚನೆ ನೀಡಿದೆ. ನಾವು ಹೈ ಕಮಾಂಡ್ ತೀರ್ಮಾನಕ್ಕೆ ಬದ್ಧ. ಹಾಗಿರುವಾಗ ರಾಯರೆಡ್ಡಿ ಹೇಳಿಕೆ ಪರಿಗಣಿಸೋದು ಬೇಡ. ಹೈ ಕಮಾಂಡ್ ಕೂಡಾ ಇದನ್ನು ಗಮನಿಸಬೇಕಾಗಿದೆ. ಇದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಅವರೂ ಕೂಡ ಹೈಕಮಾಂಡ್ ಮಾತಿಗೆ ಬದ್ಧ ಎಂದಿದ್ದಾರೆ. ಸಿಎಲ್ ಪಿ ಸಭೆಯಲ್ಲೂ ಈ ವಿಚಾರವನ್ನು ನಾವು ಒಪ್ಪಿಕೊಂಡಿದ್ದೇವೆ. ಪ್ರತಿಯೊಬ್ಬ ಶಾಸಕರಿಗೂ ಅವರದ್ದೇ ಆದ ಗೌರವ ಇದೆ. ಒಬ್ಬರಿಗೊಂದು





ನೋಟಿಸ್ ಕೊಡೋದು ಮತ್ತಿನ್ಯಾರಿಗೋ ಕೊಡಲ್ಲ ಅನ್ನೋದು ಸರಿಯಲ್ಲ ಎಂದು ಅಸಮಾಧಾನ ಹೊರ ಹಾಕಿದರು.

**ಸಂಕ್ರಾಂತಿ ಬಳಿಕ ನಾನು ಮಾತನಾಡುತ್ತೇನೆ!**

ಸಂಕ್ರಾಂತಿ ಬಳಿಕ ನಾನು ಮಾತನಾಡುತ್ತೇನೆ. ಜನವರಿ 17 ರ ಬಳಿಕ ನಾವು ಮಾತನಾಡುತ್ತೇನೆ. ಶಾಸಕ ಕೆ ಎನ್ ರಾಜಣ್ಣ ಅವರು ಎರಡೆರೆಡು ಬಾರಿ ಹೇಳಿಕೆ ನೀಡಿದ್ದಾರೆ.

ನುಡಿದಂತೆ ನಡೆಯಬೇಕು ಅಂತಲೂ ಹೇಳಿದ್ದಾರೆ ಅವರು. ರಾಯರೆಡ್ಡಿ, ರಾಜಣ್ಣ ನಾನು ಯಾರೂ ಹೈ ಕಮಾಂಡ್ ಅಲ್ಲ. 2030 ವರೆಗೂ ಸಿದ್ದರಾಮಯ್ಯ ಸಿಎಂ ಅಂತ ಹೈ ಕಮಾಂಡ್ ಹೇಳಿದ್ರೆ ಅದಕ್ಕೆ ನಾವೂ ಬದ್ದ ಎಂದರು.

ಸದ್ಯ ಸಿಎಂ ಕುರ್ಚಿ ಖಾಲಿ ಇಲ್ಲ. ಹೈ ಕಮಾಂಡ್ ಹೇಳುವ ಎಲ್ಲಾ ಮಾತಿಗೂ ನಾವು ಬದ್ದ. ಡಿಕೆ ಶಿವಕುಮಾರ್ ಅವರನ್ನು ಅಸ್ಸಾಂ ವೀಕ್ಷಕರಾಗಿ ನೇಮಕ ಮಾಡಿರೋದು ಅವರ ಪರಿಶ್ರಮಕ್ಕೆ ಸಿಕ್ಕ ಜಯ. ಅವರಿಗೆ ಸಾಮರ್ಥ್ಯ ಇದೆ ಅಂತಾನೆ ಕೊಟ್ಟಿರೋದು. ಪ್ರತಿಯೊಬ್ಬರಿಗೂ ಕೂಲಿ ಹೈ ಕಮಾಂಡ್ ಕೊಡಬೇಕು. ಹೈ ಕಮಾಂಡ್‌ಗೆ ಎಲ್ಲಾ ಮಾಹಿತಿ ಇದೆ. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ವಿಚಾರವಾಗಿಯೂ ಇದೇ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕೆಪಿಸಿಸಿ ಅಥವಾ ಸಿಎಂ ಕುರ್ಚಿ ವಿಚಾರ ಚರ್ಚೆ ಆಗಿಲ್ಲ ಎಂದರು.

# ನಾಯಕತ್ವ ಬದಲಾವಣೆ: ಡಿಕೆಶಿ ಬಾಯಲ್ಲಿ ನಂಬಿಕೆ, ತಾಳ್ಮೆಯ ಮಾತು

## ■ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಗೊಂದಲ ಇನ್ನೂ ಮುಗಿದಿಲ್ಲ ■ ಕುತೂಹಲ ಕೆರಳಿಸಿದ ಡಿಕೆಶಿ ಮಾತು

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಇನ್ನೂ ಮುಕ್ತಾಯೊಂಡಿಲ್ಲ. ಸುದೀರ್ಘ ಅವಧಿಯ ಸಿಎಂ ಎಂಬ ದಾಖಲೆಯನ್ನು ನಿರ್ಮಿಸಿರುವ ಸಿದ್ದರಾಮಯ್ಯ ಇದೀಗ 17 ನೇ ಬಜೆಟ್ ಮಂಡನೆ ಮಾಡುವ ಸಿದ್ದತೆಯಲ್ಲಿದ್ದಾರೆ. ಈ ನಡುವೆ ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿರುವ ಡಿಕೆ ಶಿವಕುಮಾರ್ ಅವರ ಬಾಯಲ್ಲಿ ನಂಬಿಕೆ, ತಾಳ್ಮೆಯ ಮಾತು ಕೇಳಿ ಬರುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ.

ವಿಜಯಪುರದಲ್ಲಿ ಶುಕ್ರವಾರ ನಡೆದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ಸಮಾರಂಭದಲ್ಲಿ ಡಿಕೆ ಶಿವಕುಮಾರ್ ಮಾತನಾಡುತ್ತಾ, ನಂಬಿಕೆ ಮತ್ತು ತಾಳ್ಮೆಯ ಬಗ್ಗೆ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. ಸಿದ್ದರಾಮಯ್ಯ ಅವರು ಹೈಕಮಾಂಡ್ ಆಶೀರ್ವಾದದ ಬಗ್ಗೆ ತಮ್ಮ ಮಾತುಗಳಲ್ಲಿ ಉಲ್ಲೇಖ ಮಾಡಿದರೆ, ಡಿಕೆಶಿ ನಂಬಿಕೆ ಬಹಳ ಮುಖ್ಯ ಎಂದು ಮಾರ್ಮಿಕವಾಗಿ ಹೇಳುವ ಮೂಲಕ ಕುತೂಹಲ ಕೆರಳಿಸಿದರು. ಅಧಿಕಾರದ ಬಗ್ಗೆ ಡಿಕೆಶಿ ಈ ಹಿಂದೆ 'ಕಿತ್ತು ಪಡೆದುಕೊಳ್ಳಬೇಕು' ಎಂದು ಆಡಿದ್ದ ಮಾತನ್ನು ಉಲ್ಲೇಖಿಸಿ ಬಿಜೆಪಿ ನಾಯಕರು ಪದೇ ಪದೇ ಕಾಲೆಳೆಯುತ್ತಿದ್ದರು. ನಾಯಕತ್ವ ಬದಲಾವಣೆ ವಿಚಾರ ಬಂದಾಗ ಈ ಮಾತು ವಿಪಕ್ಷಗಳ ಬಾಯಲ್ಲಿ ಪದೇ ಪದೇ ಕೇಳಿಬರುತ್ತಿತ್ತು. ಆದರೆ ಇದೀಗ ಡಿಕೆಶಿ ವರಸೆಯಲ್ಲೂ ಬದಲಾವಣೆ ಕಾಣುತ್ತಿದೆ. ಡಿಕೆಶಿ ತಾಳ್ಮೆಯ ಮಾತನ್ನಾಡುತ್ತಿದ್ದಾರೆ.

**ತಾಳ್ಮೆಯೋ ತಂತ್ರಗಾರಿಕೆಯೋ:** ಕಾಂಗ್ರೆಸ್ ಸರ್ಕಾರ ಎರಡುವರೆ ವರ್ಷ ಪೂರ್ಣಗೊಳಿಸಿದ ಸಂದರ್ಭದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಶುರುವಾಗಿದೆ. ಅದು ತೀವ್ರ ಸ್ವರೂಪವನ್ನು ಪಡೆದುಕೊಂಡ ಬಳಿಕ ಹೈಕಮಾಂಡ್ ಮಧ್ಯ ಪ್ರವೇಶ ಮಾಡಿತ್ತು. ಡಿಕೆ ಶಿವಕುಮಾರ್ ಬೆಂಬಲಿಗರಾದ ಇಕ್ಬಾಲ್ ಹುಸೇನ್, ಕುಣಿಗಲ್ ರಂಗನಾಥ್, ಮಾಗಡಿ ಬಾಲಕೃಷ್ಣ ಸೇರಿದಂತೆ ಹಲವು ಶಾಸಕರು ಡಿಕೆಶಿ ಪರವಾಗಿ ವಾದಕ್ಕೆ ಇಳಿದಿದ್ದರು. ಇತ್ತ ಸಿದ್ದರಾಮಯ್ಯ ಅವರೇ ಐದು ವರ್ಷ ಸಿಎಂ ಆಗಿರಲಿ ಎಂದು ಸಿದ್ದರಾಮಯ್ಯ ಬೆಂಬಲಿಗರು ಕೂಡಾ ಅಖಾಡಕ್ಕೆ ಇಳಿದಿದ್ದರು. ಎರಡು ಬಣಗಳ ನಡುವೆ ವಾದ ಪ್ರತಿವಾದ ತೀವ್ರಗೊಂಡಿತ್ತು. ಪ್ರತ್ಯೇಕ ಸಭೆಗಳು, ಡಿನ್ನರ್ ಮೀಟಿಂಗ್‌ಗಳು, ಬ್ರೇಕ್ ಫಾಸ್ಟ್ ಮೀಟಿಂಗ್ ಜೋರಾಗಿತ್ತು. ಈ ಸಂದರ್ಭದಲ್ಲಿ ಹೈಕಮಾಂಡ್ ಎಂಟ್ರಿ ನೀಡುವ ಮೂಲಕ ಗೊಂದಲಕ್ಕೆ ಬ್ರೇಕ್ ಹಾಕುವ ಕೆಲಸ ಮಾಡಿತ್ತು.

**ಕಾದು ನೋಡುವ ತಂತ್ರ:** ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಡಿಕೆ ಶಿವಕುಮಾರ್ ಸದ್ಯಕ್ಕೆ ಕಾದು ನೋಡುವ ತಂತ್ರಕ್ಕೆ ಮೊರೆ ಹೋದಂತಿದೆ. ನಾಯಕತ್ವದ ಬಗ್ಗೆ ರಾಜ್ಯದಲ್ಲಿ ಬೆಂಬಲಿಗರ ಮೂಲಕ ಸದ್ದು ಗದ್ದಲ ಉಂಟು ಮಾಡಿದರೆ ಅದರಿಂದ ಅವರಿಗೆ ಲಾಭಕ್ಕಿಂತ ಕಷ್ಟವೇ ಹೆಚ್ಚು. ಸಿದ್ದರಾಮಯ್ಯ ಪರವಾಗಿರುವ ಹಾಗೂ ಕಾಂಗ್ರೆಸ್‌ಗೆ ಬೆನ್ನೆಲುಬಾಗಿರುವ ಅಹಿಂದ ವರ್ಗದ ವಿರೋಧವನ್ನು ಎದುರಿಸಬೇಕಾದ ಸನ್ನಿವೇಶ ಇದೆ. ಹೀಗಾಗಿ ಡಿಕೆಶಿ ಇದ್ಯಾವುದಕ್ಕೂ ಆಸ್ಪದೆ ಕೊಡದೆ ಎಚ್ಚರಿಕೆಯ ಹೆಜ್ಜೆಯನ್ನು ಇಡಲು ಮುಂದಾಗಿದ್ದಾರೆ.

ಇದೀಗ ಸಿದ್ದರಾಮಯ್ಯ ಹೊಸ ದಾಖಲೆ ಸೃಷ್ಟಿ ಮಾಡುತ್ತಿರುವ ಸಂದರ್ಭದಲ್ಲಿ ಅವರ ಆಪ್ತರು ಇದೇ ಚರ್ಚೆಯನ್ನು ಮುನ್ನೆಲೆಗೆ ತರುತ್ತಿದ್ದಾರೆ. ಸಿದ್ದರಾಮಯ್ಯ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಸಿದ್ದರಾಮಯ್ಯ ಅವರಿಗೆ ಪತ್ರವನ್ನು ಬರೆದಿದ್ದು, 2028 ರವರೆಗೆ ನೀವೇ ಮುಖ್ಯಮಂತ್ರಿ ಆಗಿರಿ ಎಂದಿದ್ದಾರೆ.

ಹೀಗಾಗಿ ಆಪ್ತರ ಒತ್ತಡಕ್ಕೆ ಸಿದ್ದರಾಮಯ್ಯ ಮಣಿದು ಕುರ್ಚಿ ಭದ್ರಗೊಳಿಸುತ್ತಾರಾ ಎಂಬುವುದು ಪ್ರಶ್ನೆಯಾಗಿದೆ.

**ಹೈಕಮಾಂಡ್ ನಡೆ ಕುತೂಹಲ:** ರಾಜ್ಯದಲ್ಲಿ ಏನೇ ಬೆಳವಣಿಗೆ ನಡೆಯುತ್ತಿದ್ದರೂ ಹೈಕಮಾಂಡ್ ನಿರ್ಧಾರ ಅಂತಿಮವಾಗಲಿದೆ. ಸದ್ಯದ ರಾಜ್ಯದ ವಾತಾವರಣ, ರಾಜಕೀಯ ಪರಿಸ್ಥಿತಿಯನ್ನು ತಿಳಿದುಕೊಂಡು ಹೈಕಮಾಂಡ್ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಹೀಗಿರುವಾಗ ಗೊಂದಲಕ್ಕೆ ಅವಕಾಶ ಕೊಡದೆ ಎಚ್ಚರಿಕೆಯ ಹೆಜ್ಜೆಯನ್ನು ಇಡಲು ಡಿಕೆಶಿ ಮುಂದಾಗಿದ್ದಾರೆ. ತಾಳ್ಮೆ ಹಾಗೂ ನಂಬಿಕೆಯ ಮಾತನ್ನಾಡುವ ಮೂಲಕ ತಮ್ಮ ಪರವಾದ ಒಲವಿನ ವಾತಾವರಣ ಸೃಷ್ಟಿಸಲು ಅವರು ಪ್ರಯತ್ನ ನಡೆಸುತ್ತಿದ್ದಂತಿದೆ. ಡಿಕೆಶಿ ಅವರ ಈ ತಂತ್ರಗಾರಿಕೆ ಎಷ್ಟರ ಮಟ್ಟಿಗೆ ಯಶಸ್ವಿ ಆಗಲಿದೆ ಎಂಬುವುದು ಮಾತ್ರ ಸದ್ಯಕ್ಕೆ ಕುತೂಹಲ ಕೆರಳಿಸಿದೆ.

### ದಿಢೀರ್ ಬದಲಾವಣೆಗೆ ಕಾರಣ



### ವಿರೋಧ ಬಣದ ಮನವೊಲಿಕೆ ಸವಾಲು

ಸಿಎಂ ಗಾದಿಯ ಮೇಲೆ ಕಣ್ಣಿಟ್ಟಿರುವ ಡಿಕೆ ಶಿವಕುಮಾರ್ ಅವರಿಗೆ ವಿರೋಧಿ ಬಣವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದೇ ಸವಾಲಾಗಿದೆ. ಸಿದ್ದರಾಮಯ್ಯ ಬಣದಲ್ಲಿ ಗುರುತಿಸಿಕೊಂಡಿರುವ ಸಾಕಷ್ಟು ಶಾಸಕರು ಸಿದ್ದರಾಮಯ್ಯವರೇ 4-5 ವರ್ಷ ಇರಲಿ ಎಂದು ಹೇಳುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಡಿಕೆಶಿ ಸಿಎಂ ಸ್ಥಾನಕ್ಕೆ ಬೇಡಿಕೆ ಇಡುತ್ತಿದ್ದಂತೆ ಪರ್ಯಾಯ ವಾದ ಎಂಬಂತೆ ದಲಿತ ಸಿಎಂ ಚರ್ಚೆಯನ್ನು ಮುನ್ನಲೆಗೆ ತರಲಾಗುತ್ತಿದೆ. ಹೀಗಾಗಿ ಡಿಕೆಶಿಗೆ ವಾತಾವರಣ ಪೂರಕವಾಗಿಲ್ಲ. ಹಾಗಾಗಿ ಡಿಕೆಶಿ ತಾಳ್ಮೆಯ ಮೊರೆ ಹೋಗಿದ್ದಾರೆ. ತಾಳ್ಮೆಯಿಂದಲೇ ವಿರೋಧಿ ಬಣವನ್ನು ಒಲಿಸಿಕೊಳ್ಳುವುದು ತಂತ್ರಗಾರಿಕೆಯಾಗಿದೆ.

### ಡಿಕೆಶಿ ಹೆಜ್ಜೆ ಏನು

ಸಿಎಂ ಸ್ಥಾನಕ್ಕೆ ಕಣ್ಣಿಟ್ಟಿರುವ ಡಿಕೆಶಿ ನಾನಾ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಹಲವು ಸಂದರ್ಭದಲ್ಲಿ ಅವರು ದೆಹಲಿಗೆ ತೆರಳಿದ್ದರೂ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಮತ್ತೊಂದು ಕಡೆಯಲ್ಲಿ ರಾಹುಲ್ ಗಾಂಧಿ ಅವರನ್ನು ಸಿದ್ದರಾಮಯ್ಯ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಹೀಗಾಗಿ ದೆಹಲಿಯಲ್ಲಿ ಡಿಕೆ ಶಿವಕುಮಾರ್ ಪರವಾಗಿ ಹೈಕಮಾಂಡ್ ನಾಯಕರು ಇದ್ದಾರಾ ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ಒಲವು ಪರೋಕ್ಷವಾಗಿ ಡಿಕೆ ಶಿವಕುಮಾರ್ ಅವರ ಜೊತೆಗೆ ಇದೆ ಎಂದು ಹೇಳಲಾಗುತ್ತಿದ್ದರೂ ಒಟ್ಟು ಹೈಕಮಾಂಡ್ ನಾಯಕರು ಏನು ನಿರ್ಧಾರವನ್ನು ಕೈಗೊಳ್ಳುತ್ತಾರೆ ಎಂಬುವುದು ಬಹಳ ಮುಖ್ಯವಾಗಿದೆ.

**ಈ ದಿನದ ದರ** ಪೆಟ್ರೋಲ್: 103.81 ₹/L | ಡೀಸೆಲ್ : 90.99 ₹/L | ಬಂಗಾರ: ₹14,046/Gram24ct ₹12,875/Gram22ct | ಬೆಳ್ಳಿ: ₹260.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಹಣ ಆಸ್ತಿಗಳ ವ್ಯಾಮೋಹ.

ಹಣ ಎಂದರೆ ಹೆಣ ಬಾಯ್ದೆರೆಯುವುದಂತೆ. ಆಸ್ತಿ ಇದ್ದರೆ ಇದ್ದು ಬಿದ್ದವರೆಲ್ಲ ಬಂಧುಗಳಂತೆ. ಚಿಕ್ಕಬಳ್ಳಾಪುರ ಜಿಲ್ಲೆಯ ಕಾಳಾವರದ ಓಂಕಾರ ಜ್ಯೋತಿ ಮಠ ಇಂದು ಇದಕ್ಕೆ ಸಾಕ್ಷಿ. ಮರಿಯಪ್ಪ ಸ್ವಾಮಿಯವರು ಇಲ್ಲಿ ಸ್ವಂತ ಹಣದಿಂದ ಆಸ್ತಿ ಖರೀದಿಸಿ ಮಠ ಕಟ್ಟಿದರು. ಇವರ ಕಾಲಾನಂತರ ಇವರ ಧರ್ಮಪತ್ನಿ ಜಯಮ್ಮ ಮಠ ಮುಂದುವರೆಸಿದರು. ಈಗ ಇಳಿವಯಸ್ಸು. ಮಕ್ಕಳಿಲ್ಲ. ಮಠ ನಡೆಸಲಾಗುತ್ತಿಲ್ಲ. ತಮ್ಮ ಮರಣಾನಂತರವೂ ಮಠ ನಿರಂತರ ಮುಂದುವರೆಯಬೇಕು ಎಂದು ಕಾಳೀತನಯ ಶ್ರೀ ಉಮಾಮಹೇಶ್ವರ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಟ್ರಸ್ಟ್ ರಚಿಸಿ ಆಸ್ತಿಯನ್ನು ವರ್ಗಾಯಿಸಿದರು. ಇದು ಗೊತ್ತಾಗುತ್ತಿದ್ದಂತೆಯೇ ಇದುವರೆಗೆ ಸುಳಿಯದ ರಕ್ತಸಂಬಂಧಿಗಳೆಂಬ ಹೆಸರಿನಲ್ಲಿ ಜನರ ದೊಂಬಿ ಇಂದು ಇದ್ದಕ್ಕಿದ್ದಂತೆ ಆಶ್ರಮದೊಳಕ್ಕೆ ನುಗ್ಗಿತು. ಇಂದೇ ಸ್ವಾಮೀಜಿಯವರ ಹುಟ್ಟುಹಬ್ಬವಾದ್ದರಿಂದ ಹಲವಾರು ಸ್ವಾಮೀಜಿಗಳು ಭಕ್ತಾದಿಗಳು ಸೇರಿದ್ದೆವು. ಇದಾವುದನ್ನೂ ಲೆಕ್ಕಿಸದೇ ಜನ ಉಮಾಮಹೇಶ್ವರ ಸ್ವಾಮೀಜಿಯವರ ಮೇಲೆ ಹಲ್ಲೆನಡೆಸಿ ಬೆದರಿಕೆಯೊಡ್ಡಿ ಒತ್ತಾಯಪೂರ್ವಕವಾಗಿ ಹೇಳಿದಂತೆ ಬರೆಸಿಕೊಂಡು ದೌರ್ಜನ್ಯ ನಡೆಸಿದರು. ಸಾತ್ತ್ವಿಕತೆಗೆ ಬೆಲೆ ಎಷ್ಟು?

# ಎಪಿಐ ಏಕೀಕರಣ ಜಾರಿಗೊಳಿಸುವಂತೆ ಆದೇಶ ಹೊರಡಿಸಿದ ಹೈಕೋರ್ಟ್

## ಇದು ಸಾರ್ವಜನಿಕ ಬೊಕ್ಕಸಕ್ಕೆ ಹಾನಿ, ವ್ಯವಸ್ಥೆಯ ಸಮಗ್ರತೆಗೆ ಧಕ್ಕೆ ತರುತ್ತಿದೆ ಎಂದು ನ್ಯಾಯಾಲಯ ಅಭಿಪ್ರಾಯ

• **ಉದಯವಾಹಿನಿ, ಬೆಂಗಳೂರು**

ಸಾರ್ವಜನಿಕ ಕಾಮಗಾರಿಗಳಿಗೆ ಬಿಡ್‌ಗಳನ್ನು ಸಲ್ಲಿಸುವಾಗ ಅಸ್ತಿತ್ವದಲ್ಲಿರುವ ಇ-ಖರೀದಿ ಪ್ರಕ್ರಿಯೆಗಳಲ್ಲಿನ ನ್ಯೂನತೆಗಳನ್ನು ಗುರುತಿಸಿ, ರಾಜ್ಯದ ಇ-ಖರೀದಿ ಪ್ರಕ್ರಿಯೆಯನ್ನು ತಾಂತ್ರಿಕವಾಗಿ ಪರಿಷ್ಕರಣೆ ಮಾಡುವಂತೆ ಹೈಕೋರ್ಟ್, ಸರಕಾರಕ್ಕೆ ಆದೇಶಿಸಿದೆ.

**ರಿಯಲ್ ಟೈಮ್ ಪರಿಶೀಲನೆ ಕಡ್ಡಾಯ:** ಅಲ್ಲದೆ, ಹಾಲಿ ಪ್ರಕ್ರಿಯೆಯಲ್ಲಿರುವ ವ್ಯವಸ್ಥಿತ ವಂಚನೆ ತೊಡೆದು ಹಾಕಲು ಉನ್ನತ ಮಟ್ಟದ ಸ್ವಯಂಚಾಲಿತ ವ್ಯವಸ್ಥೆ ಮತ್ತು ಟೆಂಡರ್ ದಾಖಲೆಗಳ ರಿಯಲ್ ಟೈಮ್ ಪರಿಶೀಲನೆಯನ್ನು ಕಡ್ಡಾಯಗೊಳಿಸುವಂತೆ ನಿರ್ದೇಶನ ನೀಡಿದೆ. ಕರ್ನಾಟಕದ ಎಲ್ಲಾ ಸಾರ್ವಜನಿಕ ಖರೀದಿ ಪ್ರಕ್ರಿಯೆಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್ ದಾಖಲೆಗಳ ಸಲ್ಲಿಕೆಯನ್ನು ಕಡ್ಡಾಯಗೊಳಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ರಾಜ್ಯ ಸರಕಾರವು ಟೆಂಡರ್ ದಾಖಲೆಗಳನ್ನು ಸ್ವಯಂ ಪರಿಶೀಲಿಸಲು ವಿವಿಧ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುವ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ , ಡೇಟಾಬೇಸ್‌ಗಳ ನಡುವೆ ಅಪ್ಲಿಕೇಶನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್(ಎಪಿಐ)ಗಳನ್ನು ಸ್ಥಾಪಿಸಬೇಕು ಮತ್ತು ಅವುಗಳನ್ನು ಕಾರ್ಯಾಚರಣೆಗೊಳಿಸಬೇಕು ಎಂದು ನ್ಯಾಯಾಲಯ ಆದೇಶಿಸಿದೆ.




**ರಿಯಲ್ ಟೈಮ್ ಪರಿಶೀಲನೆ ಕಡ್ಡಾಯ**

**ಸಾರ್ವಜನಿಕ ಬೊಕ್ಕಸಕ್ಕೆ ಹೇಗೆ ನಷ್ಟ?:** ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕೆಟಿಪಿಪಿ ನಿಯಮದ ಅಡಿಯಲ್ಲಿ ಮಂಗಳೂರು ಪಾಲಿಕೆಗೆ ಬಿಡ್ ಸಲ್ಲಿಸುವಾಗ ನಕಲಿ ಪರವಾನಗಿ, ಅಸ್ತಿತ್ವದಲ್ಲಿಲ್ಲದ ಕಾಮಗಾರಿ ಆದೇಶ ಮತ್ತು ನಿಗದಿಗಿಂತ ಅಧಿಕ ಖರ್ಚಿನ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದಕ್ಕಾಗಿ ಸಾರ್ವಜನಿಕ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ತಮ್ಮನ್ನು ನಿಷೇಧಿಸಿರುವುದನ್ನು ಪ್ರಶ್ನಿಸಿ ಮಂಗಳೂರು ಮೂಲದ ಗುತ್ತಿಗೆದಾರ ಅನಂತಕೃಷ್ಣ ಶೆಟ್ಟಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾ. ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ, ಈ ನಿರ್ದೇಶನ ನೀಡಿದೆ. ಇದು ಒಂದೇ ಒಂದು ಪ್ರಕರಣದಲ್ಲಿ ನಕಲಿ ಟೆಂಡರ್ ದಾಖಲೆಗಳನ್ನು ಸಲ್ಲಿಸಿರುವ ಪ್ರಕರಣವಲ್ಲ ಎಂದು ಹೇಳಿರುವ ನ್ಯಾಯಾಲಯ, ಇಂತಹ ಪ್ರವೃತ್ತಿಯು ಸಾರ್ವಜನಿಕ ಬೊಕ್ಕಸಕ್ಕೆ ಭಾರಿ ನಷ್ಟವನ್ನುಂಟು ಮಾಡಿದೆ.

ಅಲ್ಲದೆ, ಬಿಡ್ಡಿಂಗ್ ವ್ಯವಸ್ಥೆಯ ಸಮಗ್ರತೆಗೆ ಹಾನಿ ಉಂಟು ಮಾಡಿದೆ, ಎಂದು ಹೇಳಿದೆ. ಸಾರ್ವಜನಿಕ ಖರೀದಿಯ ಸಮಗ್ರತೆಯು ಕೇವಲ ಆಡಳಿತಾತ್ಮಕ ಕಡ್ಡಾಯವಲ್ಲ, ಬದಲಾಗಿ ಸಂವಿಧಾನದ 14ನೇ ವಿಧಿ (ಸಮಾನತೆ) ಮತ್ತು 19ನೇ ವಿಧಿಯ ತತ್ವಗಳನ್ನು ಆಧರಿಸಿದ ಸಾಂವಿಧಾನಿಕ ಆದೇಶವಾಗಿದೆ. ಏಕೆಂದರೆ, ಇದು ಸಾರ್ವಜನಿಕ ಕಾಮಗಾರಿಗಳ ಗುಣಮಟ್ಟ, ನಿಯಮಗಳ ಅನುಸರಣೆ, ವ್ಯಾಪಾರ ಮತ್ತು ವೃತ್ತಿ ನಿರ್ವಹಿಸುವ ಸ್ವಾತಂತ್ರ್ಯ ಮತ್ತು ಸಾರ್ವಜನಿಕ ಸಂಪನ್ಮೂಲಗಳ ರಕ್ಷಣೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ, ಎಂದು ನ್ಯಾಯಾಲಯ ತಿಳಿಸಿದೆ.

**ಎಪಿಐ ಏಕೀಕರಣಗೊಳಿಸಿ**

**ಕಂಪನಿಗಳ ನೋಂದಣಿ ಸಂಸ್ಥೆ, ಜಿಎಸ್‌ಟಿ ಇಂಡಿಯಾ ಪೋರ್ಟಲ್, ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು, ನಿಗಮ-ಮಂಡಳಿಗಳು, ಪರಿಸರ ಸಂಸ್ಥೆಗಳು, ಸರಕಾರಿ ಸ್ವಾಮ್ಯದ ಉದ್ಯಮಗಳು, ಸ್ಮಾರ್ಟ್ ಸಿಟಿ ಘಟಕಗಳು, ಮೂಲಸೌಕರ್ಯ ಅಭಿವೃದ್ಧಿ ಮಂಡಳಿಗಳು, ಪುರಸಭೆ, ನಿಗಮಗಳು, ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾಡಳಿತಗಳಂತಹ ಪರವಾನಗಿ ನೀಡುವ ಹಾಗೂ ನಿಯಂತ್ರಣ ಮತ್ತು ಹಣಕಾಸು ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಎಪಿಐ ಏಕೀಕರಣ ಜಾರಿಗೊಳಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.**

## ಶಾಲೆಗೆ ಸೇರಿದ್ದ ರೂ.4 ಕೋಟಿ ದುರ್ಬಳಕೆ: ಪ್ರಕರಣಕ್ಕೆ ಇಬ್ಬರ ಸೆರೆ

• **ಉದಯವಾಹಿನಿ, ಬೆಂಗಳೂರು**


ಕಮಲ ಮುನಿಯಪ್ಪ ಎಜುಕೇಷನಲ್ ಟ್ರಸ್ಟ್‌ನ ಎಡಿಫೈ ಶಾಲೆಗೆ ಸೇರಿದ್ದ ರೂ. 4 ಕೋಟಿ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಲೆಕ್ಕಾಧಿಕಾರಿ ಸೇರಿದಂತೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಶಿಕ್ಷಣ ಸಂಸ್ಥೆಯ ಕೆ.ಎಂ.ಅಶೋಕ್ ಕುಮಾರ್ ಅವರು ದೂರು ನೀಡಿದ್ದರು. ಶಾಲೆಯ ಲೆಕ್ಕಾಧಿಕಾರಿ ಸಾಗರ್, ಶಾಲಾ ಬಸ್ ನಿರ್ವಹಣೆ ಮಾಡುತ್ತಿದ್ದ ಮನೋಜ್ ಎಂಬುವವರನ್ನು ಬಂಧಿಸ ಲಾಗಿದೆ ಎಂದು ಮೂಲಗಳು ಹೇಳಿವೆ. 2017ರಿಂದ ಇದುವರೆಗೂ ರೂ.4 ಕೋಟಿಯನ್ನು ವಂಚಿಸಿದ್ದಾರೆ. ಮುರುಳಿ, ಕಿಶೋರ್, ಸಿ.ಮೋಹನ್ ವಿರುದ್ಧವೂ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ. ಶಾಲಾ ಶುಲ್ಕದ ಹಣವನ್ನು ಸ್ವಂತಕ್ಕೆ ಬಳಸಿದ್ದುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

## ಜಿಬಿಎ: ಐದು ಪಾಲಿಕೆಗಳ 369 ವಾರ್ಡ್ ಕರಡು ಮೀಸಲಾತಿ

• **ಉದಯವಾಹಿನಿ, ಬೆಂಗಳೂರು**

ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಿಗೆ ಕರಡು ಮೀಸಲಾತಿಯನ್ನು ಹೊರಡಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ ಈ ಸಂಬಂಧ ಅಧಿಸೂಚನೆಯನ್ನು ಪ್ರಕಟಿಸಿದೆ.

2011ರ ಜನಗಣತಿಯ ಆಧಾರದ ಮೇಲೆ ಮೀಸಲಾತಿಯನ್ನು ಪ್ರಕಟಿಸಲಾಗಿದೆ. ಈ ಕರಡು ಮೀಸಲಾತಿಗೆ ಸಂಬಂಧಿಸಿದಂತೆ, ಆಕ್ಷೇಪಣೆಯನ್ನು ಸಲ್ಲಿಸಲು ಜನವರಿ 23ರ ದಿನಾಂಕದವರೆಗೆ ಸಮಯಾವಕಾಶವನ್ನು ನೀಡಲಾಗಿದೆ. ಈ ಎಲ್ಲಾ ಪ್ರಕ್ರಿಯೆ ಮುಗಿದ ನಂತರ, ಚುನಾವಣೆ ನಡೆಯಬಹುದು. ಅಂದರೆ, ಏಪ್ರಿಲ್ ಅಂತ್ಯ ಅಥವಾ ಮೇ ಮೊದಲ ವಾರದಲ್ಲಿ ಜಿಬಿಎಗೆ ಚುನಾವಣೆ ನಡೆಯಬಹುದು ಎಂದು ನಿರೀಕ್ಷಿಸಲಾಗಿದೆ.





**ಗ್ರೇಟರ್ ಬೆಂಗಳೂರು ಐದು ನಗರ ಪಾಲಿಕೆಗಳು :** ಬೆಂಗಳೂರು ಪಶ್ಚಿಮ, ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಪೂರ್ವ ಹಾಗೂ ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ-2020ರ ಪ್ರಕಾರ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ2025' ಮೇ 15ರಂದು ಜಾರಿಗೆ ಬಂದಿತ್ತು.

ಇದರ ಅಡಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಐದು ನಗರ ಪಾಲಿಕೆಗಳನ್ನು 2025ರ ಸೆಪ್ಟೆಂಬರ್ 2ರಂದು ರಚಿಸಲಾಗಿತ್ತು.

ಈ ಐದು ನಗರ ಪಾಲಿಕೆಗಳ ವಾರ್ಡ್‌ಗೆ ಸಂಬಂಧಿಸಿದ ಮೀಸಲಾತಿಯನ್ನು ನಿಗದಿಪಡಿಸಲು, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 2025ರ ಸೆಪ್ಟೆಂಬರ್ 29ರಂದು ಒಂದು ಸಮಿತಿಯೊಂದನ್ನು ರಚಿಸಲಾಗಿತ್ತು. ಸೆಪ್ಟೆಂಬರ್ 30ರಂದು ವಾರ್ಡ್‌ಗಳ ಪುನರ್ವಿಂಗಡಣೆ ಮಾಡಿ ಕರಡು ಅಧಿಸೂಚನೆ ಹೊರಡಿಸಲಾಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

## ಆಟೋ ಚಾಲಕರ ಡಿಸ್ ಪ್ಲೇ ಕಾರ್ಡ್ ಪ್ರದರ್ಶನ ಕಡ್ಡಾಯ; ಮತ್ತೆ ಕಟ್ಟುನಿಟ್ಟಾಗಿ ಜಾರಿ!




• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಮಹಾನಗರದಲ್ಲಿ ಆಟೋ ಚಾಲಕರು ಮತ್ತು ಪ್ರಯಾಣಿಕರ ನಡುವಿನ ಗಲಾಟೆ ನಿತ್ಯ ಎಂಬಂತಾಗಿದೆ. ಚಾಲಕರು ಸಾರ್ವಜನಿಕರಿಂದ ನಿಗದಿಗಿಂತ ಅಧಿಕ ಪ್ರಯಾಣ ದರ ವಸೂಲಿ, ಕರೆದ ಜಾಗಕ್ಕೆ ಬಾರದೆ ಉದ್ಧಟತನದಿಂದ ವರ್ತಿಸುತ್ತಿದ್ದಾರೆ.

ಈ ವಿಚಾರವಾಗಿ ಸಾಕಷ್ಟು ದೂರುಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಗರ ಸಂಚಾರ ಪೊಲೀಸರು ಹಳೆಯ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಂದಾಗಿದ್ದಾರೆ.

ಆಟೋರಿಕ್ಷಾಗಳಲ್ಲಿ ಡಿಸ್ ಪ್ಲೇ ಕಾರ್ಡ್ ಪ್ರದರ್ಶನ ಕಡ್ಡಾಯವಾಗಿದೆ. ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಲ್ಲಿ ಆಟೋ ರಿಕ್ಷಾ ಚಾಲಕರು ತಮ್ಮ ಭಾವಚಿತ್ರಗಳನ್ನು ಒಳಗೊಂಡ ಡಿಸ್ ಪ್ಲೇ ಕಾರ್ಡ್ ಪ್ರದರ್ಶನ ಮಾಡುವುದು ಕಡ್ಡಾಯವಾಗಿದೆ. ಡಿಸ್ ಪ್ಲೇ ಅಳವಡಿಸದೇ ಇರುವ ಆಟೋ ಚಾಲಕರ ವಿರುದ್ಧ ನಿಯಮಾನುಸಾರ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಆಟೋ ಡ್ರೈವರ್‌ಗಳು ಸಮವಸ್ತ್ರ ಧರಿಸದಿರುವುದು, ದುಬಾರಿ ದರಗಳು, ಬಾಡಿಗೆಗೆ ಹೋಗಲು ನಿರಾಕರಣೆ ಮತ್ತು ಡಿಸ್ ಪ್ಲೇ ಕಾರ್ಡ್ ಪ್ರದರ್ಶನ ಮಾಡದ ದೂರುಗಳ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ. ವಿಶೇಷವಾಗಿ ಮಹಿಳಾ ಪ್ರಯಾಣಿಕರಿಗೆ ಸುರಕ್ಷತೆಯ ಭಾವವನ್ನು ಸೃಷ್ಟಿಸುತ್ತದೆ ಎಂದು ಪೊಲೀಸರು ಹೇಳಿದ್ದಾರೆ.

**ಈ ನಿಯಮ ಹೊಸದಲ್ಲ, ಆದರೆ ಮಹಿಳೆಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈಗ ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ ಎಂದು ಕಾರ್ತಿಕ್ ರೆಡ್ಡಿ ಹೇಳಿದ್ದಾರೆ. ಇತರ ಜಿಲ್ಲೆಗಳ ನಿರ್ವಾಹಕರು ಸೇರಿದಂತೆ ಪರ್ಮಿಟ್‌ಗಳಿಲ್ಲದ ಆಟೋಗಳ ಕಾರ್ಯಾಚರಣೆಯನ್ನು ತಡೆಯಲು ಈ ಕ್ರಮ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ.**

ಹೊಸ ಕಾರ್ಡ್‌ಗಳ ಕ್ಯು ಕೋಡ್‌ಗಳ ಮೂಲಕ ASTraM ಆ್ಯಪ್‌ನಲ್ಲಿ ಚಾಲಕನ ವಿವರಗಳನ್ನು ಪರಿಶೀಲಿಸಬಹುದು. ಇದು ಹೊಣೆಗಾರಿಕೆ ಸಾರ್ವಜನಿಕ ವಿಶ್ವಾಸವನ್ನು ಬಲಪಡಿಸುತ್ತದೆ.

2025 ರಲ್ಲಿ QR ಬಾಡಿಗೆಗೆ ಹೋಗಲು ನಿರಾಕರಿಸಿದ್ದಕ್ಕಾಗಿ 4,669 ಪ್ರಕರಣಗಳು ಮತ್ತು ದುಬಾರಿ ಶುಲ್ಕ ಕೇಳಿದ್ದಕ್ಕೆ 4,023 ಪ್ರಕರಣಗಳನ್ನು ದಾಖಲಿಸಿತ್ತು ಎಂದು ಹೇಳಿದರು. ಆದರೆ, ಉಚಿತವಾಗಿ ನೀಡಬೇಕಾದ ಡಿಸ್ಪ್ಲೇ ಕಾರ್ಡ್‌ಗಳಿಗೆ ಹಣ ನೀಡುವಂತೆ ಕೆಲವರು ಕೇಳುತ್ತಾರೆ ಎಂದು ಅನೇಕ ಆಟೋ ಚಾಲಕರು ಆರೋಪಿಸಿದರು.

## ಕರ್ಮಣಿ ಉತ್ಸವಕ್ಕೆ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಕರ್ಮಣಿ ಉತ್ಸವ 2026ಕ್ಕೆ ಚಾಲನೆ ನೀಡಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಅಭಿವೃದ್ಧಿ ನಿಗಮ ರಾಜಾಜಿನಗರದ ಶ್ರೀರಾಮಮಂದಿರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಮೂರು ದಿನಗಳ ಉತ್ಸವವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಇದೇ ವೇಳೆ ಮಹಿಳಾ ಉದ್ಯಮಗಳ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಗೃಹ ಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆ್ಯಪ್, ಕರ್ಮಣಿ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಡಿ.ಕೆ.ಶಿವಕುಮಾರ್ ಮಾತನಾಡಿ, ಹೆಣ್ಣು ಕುಟುಂಬದ ಕಣ್ಣು ಎಂದು ಸರ್ಕಾರ ಭಾವಿಸಿ ಶಕ್ತಿ ತುಂಬುವ ಕೆಲಸ ಮಾಡಿದೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಅನೇಕ ಕಾರ್ಯಕ್ರಮ ರೂಪಿಸಲಾಗಿದೆ ಎಂದರು. ಕೆಂಪೇಗೌಡ ಕಟ್ಟಿದ ಬೆಂಗಳೂರಿಗೆ ಹೊಸ ರೂಪ ನೀಡಲಾಗಿದೆ. ಬೆಂಗಳೂರು ನಗರ ಬೆಳೆಯುತ್ತಿದ್ದು, ಐ.ಟಿ. ಕ್ಷೇತ್ರದಲ್ಲಿ 25 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ.

ಒಂದೂವರೆ ಲಕ್ಷ ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳು ನಗರದಲ್ಲಿ ನಡೆಯುತ್ತಿವೆ ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಾತನಾಡಿ, ಮಹಿಳೆಯರ ಆರ್ಥಿಕ ಸುಧಾರಣೆಗೆ ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಅನುಕೂಲ ಆಗಲಿದೆ.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಡಿಜಿಟಲ್ ಮಾರ್ಕೆಟಿಂಗ್ ಗ್ರಾಮಾಂತರ ಮಹಿಳೆಯರಿಗೆ ಅನುಕೂಲ ಆಗಲಿದೆ. ಮುಂದಿನ ದಿನಗಳಲ್ಲಿ ಆ್ಯಪ್ ಬಗ್ಗೆ ತಿಳಿಸಲು ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದರು.


## ಲಿಂಗಾಯತ ಮಹಾಸಭಾ ಅಧ್ಯಕ್ಷ ಸ್ಥಾನ: ಸಚಿವ ಈಶ್ವರ ಖಂಡ್ರೆ ಪ್ರಬಲ ಸ್ಪರ್ಧಿ

• **ಉದಯವಾಹಿನಿ, ಬೆಂಗಳೂರು**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜನವರಿ 20 ರಂದು ಹಿರಿಯ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ನಿರ್ಣಾಯಕ ಸಭೆಯನ್ನು ಕರೆದಿದ್ದು, ಇದು ಸಂಘಟನೆಯ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾಗಿದೆ. ಅದರ ಮುಂದಿನ ಅಧ್ಯಕ್ಷರನ್ನು ಆಯ್ಕೆ ಮಾಡಲು ಉದ್ದೇಶಿಸಲಾಗಿದೆ.

ಹಿರಿಯ ನಾಯಕ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಡಿಸೆಂಬರ್ 14ರಂದು ನಿಧನರಾದ ನಂತರ, ಐದು ವರ್ಷಗಳ ಅವಧಿಯ ಉಳಿದ 3.5 ವರ್ಷಗಳನ್ನು ಯಾರು ಪೂರ್ಣಗೊಳಿಸುತ್ತಾರೆ ಎಂಬುದನ್ನು ಸಭೆಯು ನಿರ್ಧರಿಸುತ್ತದೆ. ಹಿರಿಯ ನಾಯಕ ಪ್ರಭಾಕರ್ ಕೋರೆ ಅವರು ಸರ್ವಾನುಮತದ ಅಭ್ಯರ್ಥಿಯ ಆಯ್ಕೆಗೆ ಪ್ರತಿಪಾದಿಸಿದ್ದರೂ, ಅಂತಿಮ ನಿರ್ಧಾರವು ಆಯ್ದ ನಾಯಕತ್ವ ಗುಂಪಿನ ಮೇಲೆ ನಿಂತಿದ್ದು, ಜನವರಿ 20ರ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ಹಂಗಾಮಿ ರಾಷ್ಟ್ರೀಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಸಚಿವ, ಭಾಲ್ಕಿಯ ಹಿರಿಯ ಕಾಂಗ್ರೆಸ್ ಶಾಸಕ ಈಶ್ವರ್ ಖಂಡ್ರೆ, ಅವರು ಈ ಹುದ್ದೆಗೆ ಪ್ರಮುಖ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ.



ಮಹಾಸಭಾದ ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ಹಿರಿಯ ಉಪಾಧ್ಯಕ್ಷರಾಗಿರುವ ಖಂಡ್ರೆ ಅವರನ್ನು ಸೂಕ್ಷ್ಮ ಪರಿವರ್ತನೆಯ ಸಮಯದಲ್ಲಿ ಸಾಂಸ್ಥಿಕ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವ ಸಾಮರ್ಥ್ಯವಿರುವ ಅಭ್ಯರ್ಥಿಯಾಗಿ ನೋಡಲಾಗುತ್ತಿದೆ. ಈಶ್ವರ ಖಂಡ್ರೆ, ಅವರ ದಿವಂಗತ ತಂದೆ ಭೀಮಣ್ಣ ಖಂಡ್ರೆ, ಈ ಹಿಂದೆ ಮಹಾಸಭಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ನಿವೃತ್ತ ಡಿಜಿಪಿ ಶಂಕರ್ ಬಿದರಿ ರಾಜ್ಯ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಪ್ರಭಾಕರ್ ಕೋರೆ ಮತ್ತು ವೀರಣ್ಣ ಚರಂತಿಮಠ್ ಸೇರಿದಂತೆ ಪ್ರಮುಖ ಉಪಾಧ್ಯಕ್ಷರ ಬೆಂಬಲದೊಂದಿಗೆ, ಮಹಾಸಭಾ ಕರ್ನಾಟಕದಲ್ಲಿ ಒಂದು ಅಸಾಧಾರಣ ಸಾಮಾಜಿಕ-ರಾಜಕೀಯ ಶಕ್ತಿಯಾಗಿ ಉಳಿದಿದೆ.

ಶಿಕ್ಷಣ ಮತ್ತು ಕಲ್ಯಾಣ ಉಪಕ್ರಮಗಳಲ್ಲಿ ಗಮನಾರ್ಹ ಪ್ರಭಾವವನ್ನು ಹೊಂದಿದೆ ಮತ್ತು ಲಿಂಗಾಯತ ಸಮುದಾಯದ ಅತ್ಯಂತ ಪ್ರಭಾವಶಾಲಿ ಗುಂಪುಗಳಲ್ಲಿ ಒಂದಾಗಿದೆ.

## ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿ: 4.15 ಎಕರೆ ಸರ್ಕಾರಿ ಭೂಮಿ ಒತ್ತುವರಿ ತೆರವು

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ರೂ.6.26 ಕೋಟಿ ಮೌಲ್ಯದ 4.15 ಎಕರೆ ಜಮೀನನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಒತ್ತುವರಿಯಾಗಿದ್ದ ಸ್ಮಶಾನ, ಓಣಿದಾರಿ, ರಾಜಕಾಲುವೆ, ಕುಂಟೆ, ಖರಾಬು, ಸರ್ಕಾರಿ ಬಿ ಖರಾಬು, ಸರ್ಕಾರಿ ಪಡ ಜಾಗಗಳಿಗೆ ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ. ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ನಾಗೊಂಡನಹಳ್ಳಿ ಗ್ರಾಮದ ಸ.ನಂ 21ರ ಸ್ಮಶಾನ ಜಾಗ 0.4 ಗುಂಟೆ ಒತ್ತುವರಿ ತೆರವುಗೊಳಿಸಿದ್ದು, ಅಂದಾಜು ಮೌಲ್ಯ ರೂ.1 ಕೋಟಿಯಾಗಿದೆ. ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿ ಬೆಸ್ತಮಾರನಹಳ್ಳಿ ಗ್ರಾಮದ ಸ.ನಂ. 25,26,27,30,24,25ರ ಮಧ್ಯದ ಜಾಗ, ಓಣಿ ದಾರಿ ಅಂದಾಜು ರೂ. 80 ಲಕ್ಷ ಮೌಲ್ಯದ ಒಂದು ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಅತ್ತಿಬೆಲೆ ಹೋಬಳಿಯ ಇಂಡ್ಲಬೆಲೆ ಗ್ರಾಮದ ಸ.ನಂ 128, 129, 130 ರಾಜಕಾಲುವೆ ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.30 ಗುಂಟೆ. ಇದರ ಅಂದಾಜು ಮೌಲ್ಯ ರೂ. 60 ಲಕ್ಷ. ಇದಲ್ಲದೇ ಹೆಬ್ಬಗೋಡಿ ಗ್ರಾಮ ಸ.ನಂ 90 ರ ಅಂದಾಜು ರೂ.90 ಲಕ್ಷ ಮೌಲ್ಯದ ಕುಂಟೆ 0.28 ಗುಂಟೆ ಒತ್ತುವರಿ ತೆರವುಗೊಳಿಸಲಾಗಿದೆ.

## ಹೆದ್ದಾರಿಯಲ್ಲಿ ಹೆಚ್ಚಿದ ದರೋಡೆ: 3 ವರ್ಷದಲ್ಲಿ 430 ಪ್ರಕರಣ ದಾಖಲು

• **ಉದಯವಾಹಿನಿ, ಬೆಂಗಳೂರು**

ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಕ್ರಿಯವಾಗಿರುವ ದರೋಡೆ, ಸುಲಿಗೆ ತಂಡಗಳು ನೂರಾರು ಪ್ರಯಾಣಿಕರಿಂದ ಹಣ, ಚಿನ್ನಾಭರಣ ದೋಚುತ್ತಿವೆ.ವೇಗವಾಗಿ ಬರುವ ವಾಹನಗಳನ್ನು ಗುರಿಯಾಗಿಸಿ. ಹೆದ್ದಾರಿ ಮಧ್ಯದಲ್ಲಿಯೇ ಕಲ್ಲುಗಳನ್ನು ಜೋಡಿಸಿಟ್ಟು ಅಪಘಾತಕ್ಕೀಡು ಮಾಡಿ ಬೆಲೆಬಾಳುವ ವಸ್ತುಗಳನ್ನು ದೋಚುವ ಘಟನೆಗಳು ನಡೆಯುತ್ತಿವೆ. ಕಳೆದ ಮೂರು ವರ್ಷಗಳಲ್ಲಿ 430 ದರೋಡೆ, ಸುಲಿಗೆ ಪ್ರಕರಣಗಳು ನಡೆದಿವೆ.

ಸುಲಿಗೆಕೋರರು ವಾಹನಗಳನ್ನು ಅಪಘಾತಕ್ಕೀಡು ಮಾಡುತ್ತಾರೆ. ಇಲ್ಲವೇ ರಾತ್ರಿ ವೇಳೆ ಹೆದ್ದಾರಿಗಳ ಆಯ್ದ ಕಡೆಗಳಲ್ಲಿ ಮೊಳೆಗಳನ್ನು ಎಸೆದು ವಾಹನಗಳ ಚಕ್ರ ಪಂಕ್ಚರ್ ಮಾಡಿಸಿ ಕೃತ್ಯ ಎಸಗುತ್ತಿದ್ದಾರೆ. ವಾಹನಗಳ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಕೃತ್ಯಗಳು ಸೆರೆಯಾಗುತ್ತಿವೆ. ಈ ದೃಶ್ಯಾವಳಿ ಆಧರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದರೂ ಕೃತ್ಯ ಎಸಗಿದವರ ಸುಳಿವು ದೊರೆಯುತ್ತಿಲ್ಲ.

ಹೆದ್ದಾರಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಚ್ಚು ಪ್ರಕರಣಗಳು ನಡೆದಿವೆ. ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳ ಬಂಧನ ಸಾಧ್ಯವಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.




**ಹೆದ್ದಾರಿ ಬದಿಯಲ್ಲಿಯೇ ಹೊಂಚು:** ಬೆಂಗಳೂರು -ಚೆನ್ನೈ ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ ಕೋರರು ಹೆಚ್ಚು ಸಕ್ರಿಯ ಆಗಿದ್ದಾರೆ ಎಂದು ವಾಹನ ಚಾಲಕರು, ಪ್ರಯಾಣಿಕರು ಆತಂಕ ವ್ಯಕ್ತಪಡಿಸಿದ್ದಾರೆ. ದರೋಡೆಕೋರರನ್ನು ಪತ್ತೆಹಚ್ಚಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ವಕೀಲ ಹುಸೇನ್ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರು. ಆದರೂ, ಹೆದ್ದಾರಿಗಳಲ್ಲಿ ರಾತ್ರಿ ವೇಳೆ ದುಷ್ಕರ್ಮಿಗಳು ನಿರಾತಂಕವಾಗಿ ಕೃತ್ಯ ಎಸಗುತ್ತಿದ್ದಾರೆ ಎಂಬ ಆರೋಪವಿದೆ. ಹಾವೇರಿ ಮೊಳಕಾಲ್ಮುರು, ಬಂಗಾರಪೇಟೆ ಬಾಗೇಪಲ್ಲಿ, ದೇವಸಗೂರು ರಾಯಚೂರು ಕಟಗೋಡು, ತುಮಕೂರು -ಶಿವಮೊಗ್ಗ ಹೊನ್ನಾವರದ ನಡುವೆ ಹಾದು ಹೋಗಿರುವ ರಾಜ್ಯ ಹೆದ್ದಾರಿಯಲ್ಲಿ ದರೋಡೆಕೋರರ ತಂಡಗಳು ಹೆಚ್ಚಾಗಿ ಕೃತ್ಯ ಎಸಗಿವೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ಪುಣೆ ಹಾಗೂ ಬೆಂಗಳೂರು ಹಾಸನ ಮಂಗಳೂರು, ಬೆಂಗಳೂರು ಮೈಸೂರು ಎಕ್ಸ್ ಪ್ರೆಸ್ ವೇ, ಮಂಗಳೂರು-ಉಡುಪಿ ಕಾರವಾರ, ಕುಣಿಗಲ್ ಮೈಸೂರು ರಾಮನಗರ ಕನಕಪುರ ಮಾರ್ಗವಾಗಿ ತಮಿಳುನಾಡಿನ ಕೊಯಮತ್ತೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಗಳಲ್ಲೂ ಚಾಲಕರು ಹಾಗೂ ಪ್ರಯಾಣಿಕರಿಂದ ಹಣ ದೋಚಲಾಗುತ್ತಿದೆ. ಬೇರೆ ಸ್ಥಳಗಳಲ್ಲಿ ನಡೆಯುವ ಶುಭ ಸಮಾರಂಭಗಳಿಗೆ ವಾಹನಗಳಲ್ಲಿ ತೆರಳುತ್ತಿದ್ದವರು ಆಭರಣ ಕಳೆದುಕೊಳ್ಳುತ್ತಿದ್ದಾರೆ. ಹಲ್ಲೆಗೂ ಒಳಗಾಗಿದ್ದಾರೆ.

## ಕೆ-ರೈಡ್ ವಿರುದ್ಧ ಎಲ್ ಆ್ಯಂಡ್ ಟಿ ಸಲ್ಲಿಸಿದ್ದ ಅರ್ಜಿ ವಜಾ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿಯನ್ನು ಬಿಎಸ್‌ಆರ್‌ಪಿ ಸ್ಥಗಿತಗೊಳಿಸಿದ್ದ ಎಲ್ ಆ್ಯಂಡ್ ಟಿ ಗುತ್ತಿಗೆ ಕಂಪನಿಯು ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿದಂತೆ ಕೆ ರೈಡ್ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ವಾಣಿಜ್ಯ ನ್ಯಾಯಾಲಯವು ವಜಾ ಮಾಡಿದೆ.ಚಿಕ್ಕಬಾಣಾವರ ಬೆನ್ನಿಗಾನಹಳ್ಳಿ ನಡುವಿನ ಕಾರಿಡಾರ್-2 ಕಾಮಗಾರಿಯ ಗುತ್ತಿಗೆಯನ್ನು ಎಲ್ ಆ್ಯಂಡ್ ಟಿ ಕಂಪನಿ ಪಡೆದಿತ್ತು. ಇದಕ್ಕೆ ಸಂಬಂಧಿಸಿದಂತೆ ಬಿಎಸ್‌ಆರ್‌ಪಿ ಜಾರಿಯ ಜವಾಬ್ದಾರಿ ಹೊತ್ತಿದ್ದ ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸರ್ಸ್ (ಕೆ- ರೈಡ್) ಜೊತೆಗೆ 2023ರ ಜೂನ್ 16ರಂದು ಒಪ್ಪಂದ ಮಾಡಿಕೊಂಡಿತ್ತು.

ಆರಂಭದಲ್ಲಿ ರೂ. 905.50 ಕೋಟಿಯ ಈ ಯೋಜನೆಯನ್ನು ಗುತ್ತಿಗೆ ಪಡೆಯಲು ಎಲ್ ಆ್ಯಂಡ್ ಟಿ ಕಂಪನಿಯು ರೂ. 80.53 ಕೋಟಿ ಬ್ಯಾಂಕ್ ಗ್ಯಾರಂಟಿ ನೀಡಿತ್ತು. ಷರತ್ತುಗಳನ್ನು ಪೂರೈಸದೇ ಇದ್ದ ಪಕ್ಷದಲ್ಲಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವು ಗುತ್ತಿಗೆ ನೀಡಿದ ಸಂಸ್ಥೆಗೆ ಇರುತ್ತದೆ.ಜಮೀನು ಹಸ್ತಾಂತರ ಪ್ರಕ್ರಿಯೆಯನ್ನೇ ಸಂಪೂರ್ಣ ಮಾಡಿಲ್ಲ.

# ಕೆಂಪೇಗೌಡ ಲೇಔಟ್‌ನ 2,400 ನಿವೇಶನಗಳ ಮಾಲೀಕರಿಗೆ ದೊಡ್ಡ ರಿಲೀಫ್ ಕೊಟ್ಟ ಬಿಡಿಎ!

## 9 ಮೀಟರ್ ರಸ್ತೆಯನ್ನು 18 ಮೀಟರ್‌ಗಳವರೆಗೆ ಅಗಲೀಕರಣಗೊಳಿಸಲು ಬಿಡಿಎ ಆಯುಕ್ತರಾದ ಮಣಿವಣ್ಣನ್ ಅವರು ಸಮ್ಮತಿಸಿದ್ದಾರೆ

• **ಉದಯವಾಹಿನಿ, ಬೆಂಗಳೂರು**

ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಪಿಕೆಎಲ್) 4ನೇ ಬ್ಲಾಕ್ ನಲ್ಲಿ ನಿವೇಶನಗಳನ್ನು ಪಡೆದಿರುವ ಸುಮಾರು 2,400 ಫಲಾನುಭವಿಗಳಿಗೆ, ನಿವಾಸಿಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಒಂದು ರಿಲೀಫ್ ನೀಡಿದೆ. ಎನ್ ಪಿಕೆಎಲ್ ಸಿದ್ಧಪಡಿಸುವಾಗ ಆ ಬ್ಲಾಕ್‌ನಲ್ಲಿ ಕಿರಿದಾದ ರಸ್ತೆಗಳನ್ನು ವಿನ್ಯಾಸಗೊಳಿಸಲಾಗಿತ್ತು. ಇದರಿಂದ ಅಲ್ಲಿ ಮನೆಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ತುಂಬಾ ಕಿರಿಕಿರಿಯಾಗುತ್ತಿದ್ದು. ಒಂದು ಕಾರು ಆ ರಸ್ತೆಯಲ್ಲಿ ಬರುವಾಗ ಎದುರುಗಡೆಯಿಂದ ಬೈಕ್ ಬಂದರೂ ದಾರಿ ಬಿಟ್ಟುಕೊಡುವುದು ಕೊಂಚ ಕಷ್ಟ ಎಂಬಂತಿದೆ. ಇತರ ಬ್ಲಾಕ್‌ಗಳ ನಿವಾಸಿಗಳಷ್ಟೇ ಹಣ ಪಾವತಿಸಿದ್ದರೂ ಕಿರಿದಾದ ರಸ್ತೆಗಳ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇನ್ನು ಈ ಸಮಸ್ಯೆಗೆ ತಿಲಾಂಜಲಿ ಹಾಡಲು ಬಿಡಿಎ ಮುಂದಾಗಿದೆ. ಇದೀಗ ಬಿಡಿಎ ಮಂಡಳಿ, 9 ಮೀಟರ್‌ಗಳಷ್ಟು ಕಿರಿದಾಗಿದ್ದ ರಸ್ತೆಗಳನ್ನು 18 ಮೀಟರ್‌ಗಳವರೆಗೆ ಅಗಲಗೊಳಿಸಲು ಅನುಮೋದನೆ ನೀಡಿದೆ. ಕಳೆದ ವರ್ಷ ಡಿಸೆಂಬರ್ 17ರಂದು ನಿವಾಸಿಗಳು ಬಿಡಿಎ ಆಯುಕ್ತ ಪಿ. ಮಣಿವಣ್ಣನ್ ಅವರಿಗೆ ಮನವಿ ಸಲ್ಲಿಸಿದ್ದರು.

ಆಗ ಅವರು ಬಿಡಿಎ ಮಂಡಳಿಯ ಅನುಮೋದನೆ ಬಳಿಕ ರಸ್ತೆ ಅಗಲಗೊಳಿಸುವ ಭರವಸೆ ನೀಡಿದ್ದರು. ಜನವರಿ 7ರಂದು ನಡೆದ ಎನ್.ಪಿ.ಕೆಎಲ್. ಪರಿಶೀಲನಾ ಸಭೆಯಲ್ಲಿ, ಬಿಡಿಎ ಇಂಜಿನಿಯರ್ ಸದಸ್ಯ ಎಚ್.ಆರ್. ಶಾಂತರಾಜಣ್ಣ ಅವರು 4ನೇ ಬ್ಲಾಕ್‌ನಲ್ಲಿ ರಸ್ತೆ ಅಗಲಗೊಳಿಸುವ ನಿರ್ಧಾರವನ್ನು ಮಂಡಳಿ ಅನುಮೋದಿಸಿದೆ ಎಂದು ಖಚಿತಪಡಿಸಿದರು.ಎನ್ ಪಿಕೆಎಲ್ 4ನೇ ಬ್ಲಾಕ್ ನಿವೇಶನದಾರರಾದ ಮಂಜುನಾಥ್ ಬಿ.ಎಸ್. ಅವರು ಮಾತನಾಡಿ, ಎನ್ ಪಿಕೆಎಲ್ ನ ಇತರ ಬ್ಲಾಕ್‌ಗಳಲ್ಲಿ ವಿಶಾಲವಾದ ರಸ್ತೆಗಳಿದ್ದರೂ, 4ನೇ ಬ್ಲಾಕ್‌ನಲ್ಲಿ ಮಾತ್ರ ಕೇವಲ 9 ಮೀಟರ್‌ಗಳಷ್ಟು ಕಿರಿದಾದ ಫೀಡರ್ ರಸ್ತೆಗಳಿದ್ದವು. 2022 ರಿಂದಲೂ ನಾವು ಈ ವಿಶಾಲವಾದ ಫೀಡರ್ ರಸ್ತೆಗಳಿಗಾಗಿ ಹೋರಾಡುತ್ತಿದ್ದೇವೆ ಎಂದರು. ಇದೇ ವೇಳೆ ಮಣಿವಣ್ಣನ್ ಅವರೊಂದಿಗೆ ಮಾತನಾಡಿದ ನಿವೇಶನದಾರರು, ಕೆಂಪೇಗೌಡ ಲೇಔಟ್‌ನ ಎಚ್ ಸೆಕ್ಟರ್‌ನಲ್ಲಿ ಆಂಜನೇಯ ದೇವಸ್ಥಾನದ ಬಳಿ ಇರುವ 9 ಮೀಟರ್ ಫೀಡರ್ ರಸ್ತೆಯನ್ನು 15 ಮೀಟರ್‌ಗೆ ಅಗಲಗೊಳಿಸಬೇಕೆಂದು ಒತ್ತಾಯಿಸಿದರು. ಆ ರಸ್ತೆಯು ನಾಡಪ್ರಭು ಕೆಂಪೇಗೌಡ ಲೇಔಟ್‌ನ ಮಧ್ಯಭಾಗದ ಮೂಲಕ ಹಾದು ಹೋಗುವ ಎಂ.ಆರ್.ಆರ್.ಗೆ ಮೇಜರ್ ಆರ್ಟೀರಿಯಲ್ ರೋಡ್‌ಗೆ ಸಂಪರ್ಕ ಕಲ್ಪಿಸುತ್ತದೆ. ಇದರಿಂದ ಸಾರ್ವಜನಿಕರು, ದೇವಸ್ಥಾನ ಉದ್ಯಾನವನಕ್ಕೆ ಬರುವ ಸಂದರ್ಶಕರ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ. ಈಗ ಆ ರಸ್ತೆಯ ಅಗಲೀಕರಣವನ್ನೂ ಪೂರ್ಣಗೊಳಿಸಿದರೆ ಮುಂದೆ, ಟ್ರಾಫಿಕ್ ಜಾಮ್ ಸಮಸ್ಯೆಗಳು ಸಂಭವಿಸುವುದಿಲ್ಲ ಎಂದರು.

ಇದೇ ಸಂದರ್ಭದಲ್ಲಿ, ಅರ್ಕಕರ ಬಡಾವಣೆ, ಕೊಮ್ಮಘಟ್ಟದ ಬಳಿ ಹಾದುಹೋಗುವ ಮುಖ್ಯ 4B ಫೀಡರ್ ರಸ್ತೆ ಕೇವಲ 15 ಮೀಟರ್ ಅಗಲವಿದೆ. ಇದರಿಂದ ಎನ್ ಪಿಕೆಎಲ್ 4ನೇ ಮತ್ತು 5ನೇ ಬ್ಲಾಕ್‌ಗಳಲ್ಲಿ ಎರಡು ಕಡೆಯಿಂದ ವಾಹನಗಳ ಸಂಚಾರ ಕಷ್ಟವಾಗುತ್ತಿದೆ.

**ಆಯುಕ್ತರ ಬಗ್ಗೆ ಮೆಚ್ಚುಗೆ**

**ಆಯುಕ್ತ ಮಣಿವಣ್ಣನ್ ಅವರು ತಮ್ಮ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಿದ್ದಕ್ಕಾಗಿ ನಿವೇಶನದಾರರು ಮೆಚ್ಚುಗೆ ವ್ಯಕ್ತಪಡಿಸಿದರು. ಅವರು ಅಧಿಕಾರ ವಹಿಸಿಕೊಂಡಾಗಿನಿಂದ ಬಿಡಿಎನಲ್ಲಿ ದೊಡ್ಡ ಸುಧಾರಣೆಗಳು ಕಂಡುಬರುತ್ತಿವೆ ಎಂದು ಅವರು ಹೇಳಿದರು. ಇತ್ತೀಚೆಗೆ, ಬಿಡಿಎ ದಕ್ಷಿಣ ವಲಯದ ಮುಕ್ತ ಸಭೆಯನ್ನು ಆಯೋಜಿಸಿತ್ತು. ಮೂರು ಗಂಟೆಗಳ ಕಾಲ ನಡೆದ ಈ ಸಭೆಯಲ್ಲಿ, ಅಕ್ರಮ ನಿರ್ಮಾಣ, ಅನಧಿಕೃತ ನಿರ್ಮಾಣಗಳ ತೆರವು, ಪರ್ಯಾಯ ನಿವೇಶನಗಳಿಗೆ ಹಂಚಿಕೆ ಪತ್ರ ನೀಡುವಂತೆ ಮನವಿ, ಭೂಗಳ್ಳತನದ ಪ್ರಯತ್ನಗಳು ಮುಂತಾದ ಸಮಸ್ಯೆಗಳನ್ನು ಪಾಲ್ಗೊಂಡವರು ಪ್ರಸ್ತಾಪಿಸಿದರು. ದೂರುಗಳ ಆಧಾರದ ಮೇಲೆ, ಆಯುಕ್ತ ಮಣಿವಣ್ಣನ್ ಅವರು ಬಿಡಿಎ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು.**




**ಕೆಂಪೇಗೌಡ ಲೇಔಟ್‌ನಲ್ಲಿ ಸೈಟುಗಳ ಬೆಲೆ 2 ತಿಂಗಳಲ್ಲಿ 4 ಲಕ್ಷ ಏರಿಕೆ! ಯಾಕೆ?**

**ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಸ್ತಿತ್ವಕ್ಕೆ ಬಂದ ಬೆನ್ನಲ್ಲೇ ಬೆಂಗಳೂರಿನಲ್ಲಿ ಭೂಮಿಯ ಬೆಲೆ ಗಗನಕ್ಕೇರಿದ್ದು, ಬಿಡಿಎ ನಿವೇಶನಗಳ ದರ ಭಾರೀ ಏರಿಕೆ ಕಂಡಿದೆ. ಕೆಂಪೇಗೌಡ ಲೇಔಟ್‌ನಂತಹ ಪ್ರದೇಶಗಳಲ್ಲಿ ಚದರ ಅಡಿ ದರವು ಎಂಟು ಸಾವಿರದಿಂದ ಒಂಬತ್ತು ಸಾವಿರಕ್ಕೆ ಏರಿಕೆಯಾಗಿದ್ದು, ಕೇವಲ ಎರಡು ತಿಂಗಳಲ್ಲಿ ಅಂದಾಜು 4 ಲಕ್ಷ ರೂಪಾಯಿ ಏರಿಕೆಯಾಗಿದೆ. ಸೈಟುಗಳ ಮಾಲೀಕರು ಬಾಯಿಗೆ ಬಂದಂತೆ ರೇಟ್ ಹೇಳುತ್ತಿದ್ದಾರೆ. ಈ ದುಬಾರಿ ದರದಿಂದಾಗಿ ಮಧ್ಯಮ ವರ್ಗದ ಜನರು ಕಂಗಾಲಾಗಿದ್ದು, ಬಿಡಿಎ ಸೈಟುಗಳ ಬದಲು ಎ ಮತ್ತು ಬಿ ಖಾತಾ ನಿವೇಶನಗಳತ್ತ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಮಾರುಕಟ್ಟೆಯ ಈ ದಿಢೀರ್ ಬೆಳವಣಿಗೆಯು ಮನೆ ಖರೀದಿದಾರರ ಮೇಲೆ ದೊಡ್ಡ ಆರ್ಥಿಕ ಹೊರೆ ಹೊರಿಸಿದೆ.**

**ಸುಮಾರು 2,400 ಫಲಾನುಭವಿಗಳು ಇದರಿಂದ ಅನುಕೂಲ**


# ಅಂತರಾಳದಿಂದ... EDITORIAL

## ಗಾಡ್ಗೀಳ್ ವರದಿ: ಅರಣ್ಯ ರೋದನ!

ಅರಾವಳಿ ಪರ್ವತ ಶ್ರೇಣಿಯ ಮೇಲೆ ಗಣಿಗಾರಿಕೆ ನಡೆಸುವುದಕ್ಕೆ ಕೇಂದ್ರ ಸರಕಾರ ಯೋಜನೆ ರೂಪಿಸುತ್ತಿರುವ ಹೊತ್ತಿನಲ್ಲೇ, ಹಿರಿಯ ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ನಮ್ಮ ನಡುವಿನಿಂದ ವಿದಾಯ ಹೇಳಿದ್ದಾರೆ. ಗಾಡ್ಗೀಳ್ ಎಂದಾಗ ನೆನಪಾಗುವುದು ಪಶ್ಚಿಮ ಘಟ್ಟಗಳು. ಬದುಕಿನುದ್ದಕ್ಕೂ ಈ ಪಶ್ಚಿಮ ಘಟ್ಟದ ಜೀವ ವೈವಿಧ್ಯಗಳಿಗಾಗಿ ಮಿಡಿದ ಗಾಡ್ಗಳ್, ಪಶ್ಚಿಮ ಘಟ್ಟಕ್ಕೆ ಸಂಬಂಧಿಸಿದ ವರದಿಗಳಿಗಾಗಿ ಪರ-ವಿರೋಧ ಎರಡನ್ನೂ ಕಟ್ಟಿಕೊಂಡರು. ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳು ನಾಡಿನಲ್ಲಿ ಹಬ್ಬಿರುವ 1, 64, 280 ಚದರ ಕಿ. ಮೀ. ಪಶ್ಚಿಮ ಘಟ್ಟಗಳಲ್ಲಿ ಓಡಾಡಿ ಅಲ್ಲಿನ ಮರಗಿಡಗಳು ಮಾತ್ರವಲ್ಲ, ಆದಿವಾಸಿಗಳು, ಬುಡಕಟ್ಟು ಸಮುದಾಯಗಳ ಜನರ ಒಳಗಿನ ಮಾತುಗಳಿಗೆ ಕಿವಿಯಾದವರು. ಕರ್ನಾಟಕವು ಪಶ್ಚಿಮ ಘಟ್ಟದ ದೊಡ್ಡ ಪಾಲನ್ನು ಹೊಂದಿರುವುದರಿಂದ,ಗಾಡ್ಗೀಳ್ ಅವರನ್ನು ರಾಜ್ಯದ ಜನತೆ ಈಗಲೂ ಸ್ಮರಿಸುತ್ತಿದ್ದಾರೆ. ಗಾಡ್ಗೀಳ್ ವರದಿಯನ್ನು ಜಾರಿ ಮಾಡಬೇಕು ಎಂದು ಪರಿಸರ ವಾದಿಗಳ ದೊಡ್ಡ ಗುಂಪು ಹೋರಾಟ ಮಾಡುತ್ತಿರುವ ನಡುವೆ, ಗಾಡ್ಗೀಳ್ ವರದಿ ಯಾವ ಕಾರಣಕ್ಕೂ ಜಾರಿಯಾಗಬಾರದು ಎಂದು ಕೆಲವು ಹಿತಾಸಕ್ತಿಗಳು ಹಟಕ್ಕೆ ಬಿದ್ದವು.

> **ನೈಸರ್ಗಿಕ ವಲಯದಲ್ಲಿ ಅರಣ್ಯ ಇಲಾಖೆ ಅಧೀನಕ್ಕೊಳಪಟ್ಟಿರುವ ಭೂಭಾಗವಿದೆ. ಇಲ್ಲಿ ಆದಿವಾಸಿಗಳನ್ನು ಬಿಟ್ಟರೆ ಬೇರೆ ಜನವಸತಿ ಇಲ್ಲ. ಇವರನ್ನು ಒಕ್ಕಲೆಬ್ಬಿಸುವುದು ಸರಕಾರಕ್ಕೇನೂ ಕಷ್ಟವಿಲ್ಲ. ಸಾಂಸ್ಕೃತಿಕ ವಲಯವೆಂದರೆ ಇಲ್ಲಿ ಖಾಸಗಿ ಭೂ ಒಡೆತನವಿದೆ. ಒಟ್ಟಾರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಐದು ಕೋಟಿಯಷ್ಟು ಜನವಸತಿ ಇದೆ ಎಂದು ಕಸ್ತೂರಿ ರಂಗನ್ ವರದಿ ಹೇಳುತ್ತಿದೆ.**

ಗಾಡ್ಗೀಳ್ ವರದಿ ರಾಜಕಾರಣಿಗಳಿಗೆ ನುಂಗಲಾರದ ತುತ್ತಾದಾಗ, ಕಸ್ತೂರಿ ರಂಗನ್ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ರಚಿಸಿ ಗಾಡ್ಗೀಳ್‌ವರದಿಯನ್ನು ಸಮಾಧಿ ಮಾಡಲಾಯಿತು. ಪಶ್ಚಿಮಘಟ್ಟಗಳಿಗೆ ಸಂಬಂಧಿಸಿದ ಈ ಎರಡೂ ವರದಿಗಳು ಇಂದು ಅನುಷ್ಠಾನಗೊಳ್ಳದೆ ಧೂಳು ತಿನ್ನುತ್ತಿವೆ.ಮೌನಕಣಿವೆ ಹೋರಾಟ, ಅಪ್ಪಿಕೋ ಚಳವಳಿ, ಪಶ್ಚಿಮ ಘಟ್ಟ ಉಳಿಸಿ ಈ ಎಲ್ಲಾ ಸುದೀರ್ಘ ಹೋರಾಟಗಳ ಪರಿಣಾಮವಾಗಿ 2010ರಲ್ಲಿ ಗಾಡ್ಗೀಳ್ ನೇತೃತ್ವದಲ್ಲಿ ಸಮಿತಿ ರಚನೆಯಾಯಿತು. ಸಮಿತಿಯ ಬಹುತೇಕ ಮಂದಿ ಪಶ್ಚಿಮಘಟ್ಟ ಪರಿಸರದ ಭಾಗದ ಜನರೇ ಆಗಿದ್ದರು. 2011ರ ಆಗಸ್ಟ್‌ನಲ್ಲಿ ಎರಡು ಸಂಪುಟಗಳ ವರದಿಯನ್ನು ಗಾಡ್ಗೀಳ್ ಸಮಿತಿ ಕೇಂದ್ರ ಸರಕಾರಕ್ಕೆ ಸಲ್ಲಿಸಿತು. ಸುಮಾರು ಒಂದು ವರ್ಷಗಳ ಕಾಲ ಈ ವರದಿಯನ್ನು ಕೇಂದ್ರ ತನ್ನ ಬಳಿ ಇಟ್ಟುಕೊಂಡಿತು. ವರದಿ ಸಲ್ಲಿಕೆಯಾಗಿರುವುದನ್ನು ಅಧಿಕೃತವಾಗಿ ಬಹಿರಂಗಪಡಿಸುವುದಕ್ಕೆ ಸರಕಾರಕ್ಕೆ ಒಂದು ವರ್ಷ ಬೇಕಾಯಿತು. ಪಶ್ಚಿಮ ಘಟ್ಟದ ಶೇ. 78ಕ್ಕೂ ಹೆಚ್ಚಿನ ಪ್ರದೇಶಗಳಿಗೆ ಅಂದರೆ ಸುಮಾರು 1,29,037 ಚ. ಕಿ. ಮೀ. ಪ್ರದೇಶಕ್ಕೆ ರಕ್ಷಣೆಯನ್ನು ನೀಡಬೇಕು ಎಂದು ಗಾಡ್ಗೀಳ್ ವರದಿಯಲ್ಲಿ ಆಗ್ರಹಿಸಿದ್ದರು. ನಾಡಿನಲ್ಲಿ ಹೆಚ್ಚುತ್ತಿರುವ ಪ್ರಕೃತಿ ವಿಕೋಪ, ಕಾಡುನಾಶ ಚರ್ಚೆಗೆ ಬಂದಾಗಲೆಲ್ಲ ಗಾಡ್ಗೀಳ್ ವರದಿಯೂ ಮುನ್ನೆಲೆಗೆ ಬರುತ್ತಿತ್ತು. ಗಾಡ್ಗೀಳ್ ವರದಿಯೇನಾದರೂ ಜಾರಿಗೆ ಬಂದದ್ದೇ ಆದರೆ ಸರಕಾರದ ಆಪ್ತ ಭೂಮಾಲಕರು, ಕಾರ್ಪೊರೇಟ್ ದೊರೆಗಳ ಅಭಿವೃದ್ಧಿ ಕಾರ್ಯಾಚರಣೆಗೆ ಧಕ್ಕೆಯಾಗುವ ಸಾಧ್ಯತೆಗಳಿದ್ದವು. ಮೋದಿ ಸರಕಾರ ಅಧಿಕಾರಕ್ಕೆ ಬಂದ ಬಳಿಕವಂತೂ ಗಾಡ್ಗೀಳ್ ವರದಿ ಅನುಷ್ಠಾನ ದೂರದ ಮಾತಾಯಿತು. ಗಾಡ್ಗೀಳ್ ವರದಿ ಜಾರಿಗೊಂಡಿದ್ದರೆ ಕೇರಳದಲ್ಲಿ ಸಂಭವಿಸಿದಂತಹ ಹಲವು ವಿಕೋಪಗಳನ್ನು ತಡೆಯುವ ಸಾಧ್ಯತೆಗಳಿತ್ತು ಎಂದು ಪರಿಸರ ತಜ್ಞರು ಅಭಿಪ್ರಾಯ ಪಡುತ್ತಾರೆ. ಪರಿಸರವಾದಿಗಳ ಬಾಯಿ ಮುಚ್ಚಿಸಲು ಮತ್ತು ಗಾಡ್ಗೀಳ್ ವರದಿಯನ್ನು ತೆಲುಗೊಳಿಸುವುದಕ್ಕಾಗಿಯೇ ಕಸ್ತೂರಿ ರಂಗನ್ ವರದಿಯನ್ನು ಸರಕಾರ ತರಿಸಿಕೊಂಡಿತು. ಕಸ್ತೂರಿ ರಂಗನ್ ವರದಿಯು ಸಂರಕ್ಷಿತ ಪ್ರದೇಶದ ವ್ಯಾಪ್ತಿಯನ್ನು ಕಿರಿದುಗೊಳಿಸಿತು. ಮುಖ್ಯವಾಗಿ ಕಸ್ತೂರಿ ರಂಗನ್ ವರದಿಯು ಪರಿಸರವಾದಿಗಳು ಮತ್ತು ಸರಕಾರದ ನಡುವೆ ಒಂದು ಸೇತುವೆಯನ್ನು ಅಥವಾ ಮಧ್ಯಸ್ಥಿಕೆಯನ್ನು ವಹಿಸಿತ್ತು.ಇದರ ಪ್ರಕಾರ 59,949 ಚ.ಕಿ. ಮೀ. ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಮರಳುಗಾರಿಕೆ, ಪರಿಸರ ವಿರೋಧಿ ಕೈಗಾರಿಕೆ, ಉಷ್ಣ ವಿದ್ಯುತ್, ಜಲವಿದ್ಯುತ್, ಪವನ ವಿದ್ಯುತ್ ಯೋಜನೆಗಳು ಸಂಪೂರ್ಣ ನಿಷೇಧಿತ. ವರದಿ ಜಾರಿಯಾದ ಬಳಿಕ ಮುಂದಿನ ಐದು ವರ್ಷದೊಳಗೆ ಈಗಿರುವ ಎಲ್ಲ ರೀತಿಯ ಗಣಿಗಾರಿಕೆ ಸ್ಥಗಿತವಾಗಬೇಕು. 20,000 ಚ. ಮೀ.ಗಿಂತ ಹೆಚ್ಚು ವಿಸ್ತೀರ್ಣದ ಯಾವುದೇ ನಿರ್ಮಾಣ ಕೈಗೆತ್ತಿಕೊಳ್ಳುವಂತಿಲ್ಲ. ಗಾಡ್ಗೀಳ್ ವರದಿ ಪರಿಸರ ನಿಷ್ಠವಾಗಿತ್ತು ಮಾತ್ರವಲ್ಲ, ಅದು ಸ್ಥಳೀಯ ಆದಿವಾಸಿಗಳ ಹಿತಾಸಕ್ತಿಗೆ ಪೂರಕವಾಗಿತ್ತು. ಕಾಡುಗಳ ರಕ್ಷಣೆಯ ಹೊಣೆಯನ್ನು ಆದಿವಾಸಿಗಳು ನಿಭಾಯಿಸಬಲ್ಲರು ಎನ್ನುವ ಆಶಯ ಅದರಲ್ಲಿತ್ತು. ಆದರೆ ಕಸ್ತೂರಿರಂಗನ್ ವರದಿ ಬಹಳಷ್ಟು ವಿನಾಯಿತಿಗಳನ್ನು ನೀಡಿತು. ಇಷ್ಟಾದರೂ ಕರ್ನಾಟಕ ಸರಕಾರವೂ ಸೇರಿದಂತೆ ಬಹುತೇಕ ರಾಜ್ಯಗಳು ಕಸ್ತೂರಿ ರಂಗನ್ ವರದಿಯನ್ನೂ ವಿರೋಧಿಸಿದ್ದವು. ಪಶ್ಚಿಮಘಟ್ಟ ಎಂದರೆ ಕೇವಲ ಅರಣ್ಯ ಪ್ರದೇಶ ಮತ್ತು ಪ್ರಾಣಿ ವೈವಿಧ್ಯಗಳಿಗೆ ಸಂಬಂಧಿಸಿದ್ದಾದರೆ ಇಷ್ಟು ಸಮಸ್ಯೆಯಿರುತ್ತಿರಲಿಲ್ಲವೇನೋ. ಗಾಡ್ಗೀಳ್ ವರದಿಯು ಈ ಪ್ರದೇಶಗಳನ್ನು ನೈಸರ್ಗಿ ಕ ವಲಯ ಮತ್ತು ಸಾಂಸ್ಕೃತಿಕ ವಲಯವಾಗಿ ವಿಂಗಡಿಸಿದೆ. ಖಾಸಗಿ ಭೂಮಾಲಕರು ರಾಜಕೀಯ ಶಕ್ತಿಗಳ ಜೊತೆಗೆ ಕೈ ಜೋಡಿಸಿರುವುದು ಕಸ್ತೂರಿ ರಂಗನ್ ವರದಿಗೆ ಸಮಸ್ಯೆಯಾಯಿತು. ಅಷ್ಟೇ ಅಲ್ಲ ಖಾಸಗಿ ವಲಯಗಳು ಈ ಪ್ರದೇಶದ ಮೇಲೆ ಗಣಿಗಾರಿಕೆಗಾಗಿ ಕಣ್ಣಿಟ್ಟಿವೆ. ಸರಕಾರಗಳು ಈ ಖಾಸಗಿ ವಲಯದ ಜೊತೆಗೆ ಶಾಮೀಲಾಗಿವೆ. ಈ ಭಾಗದ ಸ್ಥಳೀಯ ಭೂಮಾಲಕರು ಇದು ತಮಗೆ ಆರ್ಥಿಕವಾಗಿ ಲಾಭದಾಯಕವಾಗಲಿದೆ ಎಂದು ಬಲವಾಗಿ ನಂಬಿದ್ದಾರೆ. ಹಾಗೆ ನಂಬಿದವರಿಗೆ ಈ ಎರಡೂ ವರದಿಗಳೂ ಅನುಷ್ಠಾನಗೊಳ್ಳುವುದು ಬೇಕಾಗಿಲ್ಲ. ಇದು ಅಭಿವೃದ್ಧಿಗೆ ಮಾರಕವಾಗಲಿದೆ, ಯಾವುದೇ ಅತ್ಯಗತ್ಯವಾದ ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ಈ ವರದಿಗಳು ತೊಡಕಾಗಲಿವೆ ಎಂದು ನಂಬಿದ್ದಾರೆ.ವಿಪರ್ಯಾಸವೆಂದರೆ, ಪಶ್ಚಿಮಘಟ್ಟ ಉಳಿಸುವ ಬಗ್ಗೆ ಚರ್ಚೆ ನಡೆಯುತ್ತಿರುವ ಮಧ್ಯೆಯೇ ದೇಶಾದ್ಯಂತ ಅರಣ್ಯ ಪ್ರದೇಶಗಳಲ್ಲಿ ಎಗ್ಗಿಲ್ಲದೆ ಗಣಿಗಾರಿಕೆಗಳಿಗೆ ಸರಕಾರ ಅನುಮತಿಯನ್ನು ನೀಡುತ್ತಾ ಬಂದಿದೆ. ಇವೆಲ್ಲದರ ನಡುವೆ, ರಾಜಸ್ಥಾನ, ಹರ್ಯಾಣ, ದಿಲ್ಲಿ ಮತ್ತು ಗುಜರಾತ್ ರಾಜ್ಯಗಳಲ್ಲಿ ಹರಡಿಕೊಂಡಿರುವ ಅರಾವಳಿಯಲ್ಲಿ ಗಣಿಗಾರಿಕೆ ನಡೆಸುವುದಕ್ಕಾಗಿ ನಿಯಮವನ್ನೇ ಬದಲಿಸಲು ಮುಂದಾಯಿತು. ಸುಪ್ರೀಂಕೋರ್ಟನ್ನು ಕೂಡ ಸರಕಾರ ತನ್ನ ದುರುದ್ದೇಶಕ್ಕೆ ಬಳಸಿಕೊಂಡಿತು. ಆದರೆ ಪರಿಸರವಾದಿಗಳು ಇದರ ಬಗ್ಗೆ ದೊಡ್ಡ ಧ್ವನಿಯಲ್ಲಿ ಮಾತನಾಡುತ್ತಿದ್ದಂತೆಯೇ ಸರಕಾರ ಬಾಲ ಮಡಚಿಕೊಂಡಿತು.



# ರಾಮಾಯಣ

**ಶ್ರೀರಾಮನು ಸೀತಾದೇವಿಯ ಆಭರಣಗಳನ್ನು ನೋಡಿ ದುಃಖಿಸಿದ್ದು**

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಆ ಮೇಲೆ ವಾಲಿಯು, ಪರಾಜಿತನಾದ ದುಂದುಭಿಯ ಶರೀರವನ್ನು ತನ್ನ ಭುಜಬಲದಿಂದ ಎಸೆಯಲು ಆ ಶರೀರವು ಒಂದು ಗಾವುದದೂರ ಹೋಗಿ ಬಿದ್ದಿತು. ಆ ಸಮಯದಲ್ಲಿ ದುಂದುಭಿಯ ಬಾಯಿಯಿಂದ ಸುರಿಯುತ್ತಿದ್ದ ರಕ್ತ ಬಿಂದುಗಳು ಗಾಳಿಯಿಂದ ಮತಂಗಮುನೀಶ್ವರನ ಆಶ್ರಮದಲ್ಲಿ ಬಿದ್ದವು. ಆ ಮುನೀಶ್ವರನು ಆ ರಕ್ತ ಬಿಂದುಗಳನ್ನು ನೋಡಿ ಕೋಪಯುಕ್ತನಾಗಿ ಅವನ್ನು ತನ್ನ ಆಶ್ರಮದಲ್ಲಿ ಚೆಲ್ಲಿದವರಾರೆಂದು ವಿಚಾರಿಸಲು ಹೊರಕ್ಕೆ ಬಂದನು. ಅಲ್ಲಿ ದೊಡ್ಡ ಪರ್ವತಾಕಾರವಾಗಿ ಬಿದ್ದಿದ್ದ ದುಂದುಭಿಯ ಶರೀರವನ್ನು ನೋಡಿ ತನ್ನ ತಪಸ್ಸಾಮರ್ಥ್ಯದಿಂದುಂಟಾದ ಜ್ಞಾನದೃಷ್ಟಿಯಿಂದ ವಾನರಾಧಿಪತಿಯಾದ ವಾಲಿಯು ಮಹಿಷಾಕಾರನಾದ ದುಂದುಭಿಯನ್ನು ಕೊಂದು ಆತನ ಶರೀರವನ್ನು ಅಲ್ಲಿಗೆ ಎಸೆದಿದ್ದಾನೆಂದು ತಿಳಿದನು. ಆಗ ಮತಂಗಮುನಿಯು ಅತ್ಯಂತ ಕೋಪಯುಕ್ತನಾಗಿ ವಾಲಿಯು ಮದೋನ್ಮತ್ತನಾಗಿ ದುಂದುಭಿಯನ್ನು ಕೊಂದ ಗರ್ವದಿಂದ ಈ ಶರೀರವನ್ನು ಇಲ್ಲಿ ಹಾಕಿದ್ದಾನೆ. ದುಂದುಭಿಯ ರಕ್ತದಿಂದ ನನ್ನ ತಪೋವನವು ಅಶುಚಿಯಾಯಿತು. ಈ ಶರೀರವು ಬಿದ್ದ ರಭಸದಿಂದ ಈ ಆಶ್ರಮದಲ್ಲಿದ್ದ ವೃಕ್ಷಗಳೆಲ್ಲವೂ ಮುರಿದುಹೋದವು, ಆದಕಾರಣ ಅಜ್ಞಾನಿಯಾದ ವಾಲಿಯು ಇಲ್ಲಿಗೆ ಸುತ್ತಲಿರುವ ಒಂದು ಗಾವುದದಾರಿಯೊಳಗೆ ಕಾಲಿಟ್ಟರೆ ಆತನ ಶರೀರವು ಲಯವಾಗಲಿ ! ಆತನ ಅಧಿಕಾರಿವರ್ಗಕ್ಕೆ ಸೇರಿ ಈ ವನದಲ್ಲಿರುವ ವಾನರಗಳು ಇಲ್ಲಿಂದ ಹೊರಟುಹೋಗಲಿ! ಹೋಗದಿದ್ದರೆ ಅವಕ್ಕೂ ಶಾಪವನ್ನು ಕೊಡುವೆನು. ಮಕ್ಕಳನ್ನು ರಕ್ಷಿಸುವಂತೆ ರಕ್ಷಿಸಿಕೊಂಡಿದ್ದ ನನ್ನ ಆಶ್ರಮದಲ್ಲಿರುವ ಚಿಗುರೆಲೆಗಳನ್ನೂ ಹಣ್ಣು ಕಾಯಿಗಳನ್ನೂ ಕೆಡಿಸುತ್ತ ಈ ಕಪಿಗಳು ಇಲ್ಲಿದ್ದು ಮಾಡುವುದೇನು ಈ ಆಶ್ರಮದಲ್ಲಿರುವ ಕಪಿಗಳಿಗೆ ಇದೊಂದು ದಿನ ಅವಕಾಶವನ್ನು ಕೊಡುತ್ತೇನೆ. ಈಹೊತ್ತು ಹೋಗದೆ ನಾಳೆ ಕಾಣಿಸಿಕೊಳ್ಳುವ ಕಪಿಯು ಅನೇಕ ಸಾವಿರ ವರುಷಗಳ ಪರ್ಯಂತ ಶಿಲೆಯಾಗಿ ಹೋಗಲಿ ಎಂದು ಶಪಿಸಿದನು. ಆ ಮಾತುಗಳನ್ನು ಕೇಳಿ ಅಲ್ಲಿದ್ದ ಕಪಿಗಳು ವಾಲಿಯ ಸಮೀಪಕ್ಕೆ ಹೋದವು. ಆತನು ಆ ಕಪಿಗಳನ್ನು ಕಂಡು ಎಲೈ ಕಪಿಗಳಿರಾ, ನೀವೇನುಕಾರಣ ಬಂದಿರಿ ನೀವೆಲ್ಲರೂ ಸುಖದಲ್ಲಿದ್ದೀರಿ ಆ ಕಪಿಗಳು ಜೀಯ, ನಾವು ಮತಂಗಮುನೀಶ್ವರನ ಆಶ್ರಮದಲ್ಲಿದ್ದೆವು.

ನಿನ್ನಿಂದ ಹತನಾದ ದುಂದುಭಿಯ ರಕ್ತಬಿಂದುಗಳು ಈಹೊತ್ತು ಆ ಮುನೀಶ್ವರನ ಆಶ್ರಮದಲ್ಲಿ ಬೀಳಲು ಆತನು ಕೋಪಯುಕ್ತನಾಗಿ ಜ್ಞಾನದೃಷ್ಟಿಯಿಂದ ಅದು ನಿನ್ನ ಕೃತ್ಯವೆಂದು ತಿಳಿದನು. ನೀನು ಆತನ ಆಶ್ರಮದ ಸುತ್ತಲಿರುವ ಒಂದು ಗಾವುದ ದೂರದಲ್ಲಿ ಸಂಚರಿಸಿದೆಯಾದರೆ ಪಂಚತ್ವವನ್ನೈದುವೆಯೆಂದೂ, ನಿನಗೆ ಸಂಬಂಧಿಸಿದ ಕಪಿಗಳಲ್ಲಿ ಯಾವನಾದರೂ ನಾಳೆ ಅಲ್ಲಿ ಕಾಣಿಸಿಕೊಂಡರೆ ಆ ಕಪಿಯು ಅನೇಕ ಸಾವಿರ ವರುಷಗಳ ವರೆಗೆ ದೊಡ್ಡ ಕಲ್ಲಾಗಿ ಬೀಳುವನೆಂದೂ ಶಾಪವನ್ನು ಕೊಟ್ಟನು. ಅದಕಾರಣ ನಾವು ಅಂಜಿಕೊಂಡು ಮತಂಗಮುನೀಶ್ವರನ ಆಶ್ರಮವನ್ನು ಬಿಟ್ಟು ಇಲ್ಲಿಗೆ ಬಂದೆವು ಎಂದು ಹೇಳಿದವು. **ಮುಂದುವರಿಯುವುದು...**

# ಮಾಲೆ, ವ್ರತ, ಮಹಾಯಾತ್ರೆ: ಅಯ್ಯಪ್ಪ ಸ್ವಾಮಿಯ ಅನುಗ್ರಹದ ಆತ್ಮಪಥ


☛ ವಿಶ್ವಾಸ್.ಡಿ.ಗೌಡ



ಅಯ್ಯಪ್ಪ ಸ್ವಾಮಿಯ ಭಕ್ತಿಪರಂಪರೆ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಶಬರಿಮಲೆಯ ಯಾತ್ರೆ, ಕೇವಲ **ದೇವಾಲಯದ ದರ್ಶನವಲ್ಲ;** ಅದು ಆತ್ಮಸಂಯಮ, ಶುದ್ಧಾಚರಣೆ ಮತ್ತು ಮಾನವೀಯ ಮೌಲ್ಯಗಳ ಪುನರುಜ್ಜೀವನಕ್ಕೆ ಮೀಸಲಾದ ಮಹಾಯಾತ್ರೆ. ಈ ಯಾತ್ರೆಗೆ ಮುನ್ನ ಅಯ್ಯಪ್ಪ ಸ್ವಾಮಿಯ ಮಾಲೆಯನ್ನು ದರಿಸಿ ವ್ರತವನ್ನು ಆಚರಿಸುವುದು ಭಕ್ತನ ಜೀವನದಲ್ಲಿ ಆಂತರಿಕ ಪರಿವರ್ತನೆಗೆ ಕಾರಣವಾಗುವ ಪವಿತ್ರ ಕ್ರಮವಾಗಿದೆ.

ಅಯ್ಯಪ್ಪ ಸ್ವಾಮಿಯ ಮಾಲೆ ಧಾರಣೆ ಒಂದು ಸಂಕಲ್ಪದ ಘೋಷಣೆಯಂತಿದೆ. ಗುರುಸ್ವಾಮಿ ಅಥವಾ ಹಿರಿಯ ಭಕ್ತರ ಸಾನ್ನಿಧ್ಯದಲ್ಲಿ ಪೂಜೆ, ಮಂತ್ರೋಚ್ಚಾರಣೆಗಳೊಂದಿಗೆ ಮಾಲೆ ಧರಿಸಿದ ಕ್ಷಣದಿಂದಲೇ ಭಕ್ತನು ತನ್ನ ದೈನಂದಿನ ಜೀವನವನ್ನು ಶುದ್ಧತೆ ಮತ್ತು ನಿಯಮಗಳಿಗೆ ಅರ್ಪಿಸುತ್ತಾನೆ. **ಈ ಮಾಲೆ ಹೊರಗಣ್ಣಿಗೆ ಕಾಣುವ ಆಭರಣವಲ್ಲ;** ಅದು ಒಳಗಿನ ಶಿಸ್ತು, ನಿಷ್ಠೆ ಮತ್ತು ಭಕ್ತಿಭಾವದ ಸಂಕೇತ. ಮಾಲೆ ಧರಿಸಿದ ಭಕ್ತನು ತನ್ನ ನಡೆ-ನುಡಿಯಲ್ಲಿ ಎಚ್ಚರಿಕೆಯಿಂದಿದ್ದು, ಸ್ವಾಮಿಯ ಸ್ಮರಣೆಯಲ್ಲಿ ಜೀವನವನ್ನು ಸಾಗಿಸಲು ಪ್ರತಿಜ್ಞೆ ಮಾಡುತ್ತಾನೆ. ಮಾಲೆ ಧರಿಸಿದ ಬಳಿಕ ಆರಂಭವಾಗುವ ವ್ರತಾವಧಿ ಸಾಮಾನ್ಯವಾಗಿ 41 ದಿನಗಳಿರುತ್ತದೆ.

ಈ ಅವಧಿಯಲ್ಲಿ ಬ್ರಹ್ಮಚರ್ಯ ಪಾಲನೆ ಪ್ರಮುಖ ನಿಯಮ. ಶುದ್ಧ ಚಿಂತನೆ, ಶುದ್ಧ ಮಾತು ಮತ್ತು ಶುದ್ಧ ಕಾರ್ಯಗಳ ಮೂಲಕ ಆತ್ಮಶುದ್ಧಿಯನ್ನು ಸಾಧಿಸುವುದೇ ವ್ರತದ ಉದ್ದೇಶ. ಮಾಂಸಾಹಾರ, ಮದ್ಯಪಾನ, ಧೂಮಪಾನ ಮುಂತಾದ ದುಷ್ಪ್ರವೃತ್ತಿಗಳನ್ನು ತ್ಯಜಿಸಿ, ಸಾತ್ವಿಕ ಹಾಗೂ ಸರಳ



ಆಹಾರವನ್ನು ಸೇವಿಸುವುದು ಮನಸ್ಸಿಗೆ ಸ್ಥೈರ್ಯವನ್ನು ನೀಡುತ್ತದೆ. ನಿಯಮಿತ ಸಮಯದ ಊಟ, ಉಪವಾಸ ಮತ್ತು ನಿಯಮಿತ ನಿದ್ರೆ ದೇಹ-ಮನಸ್ಸಿನ ಸಮತೋಲನವನ್ನು ಕಾಪಾಡುತ್ತದೆ. ವ್ರತಾಚರಣೆಯ ಇನ್ನೊಂದು ಮಹತ್ವದ ಅಂಶ ಸಮಾನತೆ. ಮಾಲೆ ಧರಿಸಿದ ಪ್ರತಿಯೊಬ್ಬ ಭಕ್ತನು ಎಲ್ಲರನ್ನು ''ಸ್ವಾಮಿ'' ಎಂದು ಸಂಬೋಧಿಸುವುದು ಅಯ್ಯಪ್ಪ ತತ್ತ್ವದ ಸಾರ. ಜಾತಿ, ವರ್ಗ, ಧನ-ದೌರ್ಜನ್ಯಗಳೆಂಬ ಭೇದಗಳನ್ನು ಮರೆತು ಮಾನವೀಯ ಏಕತೆಯನ್ನು ಅನುಸರಿಸುವುದು ಈ ವ್ರತದ ಜೀವಾಳ. ವಿನಯ, ಸಹನೆ ಮತ್ತು ಸಹಾನುಭೂತಿ ಭಕ್ತನ ವ್ಯಕ್ತಿತ್ವದಲ್ಲಿ ಬೆಳೆಯಲು ಈ ಆಚರಣೆ ಸಹಾಯ ಮಾಡುತ್ತದೆ.

ಪ್ರತಿದಿನ ಪ್ರಾತಃಕಾಲ ಶುದ್ಧಸ್ನಾನ ಮಾಡಿ ಪೂಜೆ, ಧ್ಯಾನ ಮತ್ತು ಅಯ್ಯಪ್ಪನಾಮ ಸ್ಮರಣೆ ವ್ರತದ ಅವಿಭಾಜ್ಯ ಭಾಗ. ಸ್ವಾಮಿ ಶರಣಂ ಅಯ್ಯಪ್ಪ ಎಂಬ ಮಂತ್ರ ಜಪ ಮನಸ್ಸಿಗೆ ಶಾಂತಿ, ಧೈರ್ಯ ಮತ್ತು ಆಂತರಿಕ ಶಕ್ತಿಯನ್ನು ನೀಡುತ್ತದೆ. ದಿನನಿತ್ಯದ ಕರ್ತವ್ಯಗಳಲ್ಲಿ ತೊಡಗಿದ್ದರೂ ಸಹ ಭಕ್ತನು ತನ್ನ ಮಾತು ಮತ್ತು ಕೃತ್ಯಗಳಲ್ಲಿ ಶುದ್ಧತೆಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಾನೆ. ಇದರಿಂದ ವ್ರತವು ಕೇವಲ ಧಾರ್ಮಿಕ ಆಚರಣೆಯಾಗಿ ಉಳಿಯದೆ, ಹಾಗೂ ಜೀವನಶೈಲಿಯ ಭಾಗವಾಗುತ್ತದೆ. ಸೇವಾಭಾವವೂ ಅಯ್ಯಪ್ಪ ವ್ರತದ ಮುಖ್ಯ ಅಂಶ. ಅಗತ್ಯವಿರುವವರಿಗೆ ಸಹಾಯ ಮಾಡುವುದು, ಹಿರಿಯರನ್ನು ಗೌರವಿಸುವುದು, ಅಸಹಾಯಕರಿಗೆ ದಯೆ ತೋರಿಸುವುದು-allವು ವ್ರತದ ನಿಜವಾದ ಅರ್ಥವನ್ನು ಪ್ರತಿಬಿಂಬಿಸುತ್ತವೆ. ಸ್ವಾರ್ಥವನ್ನು ಬಿಟ್ಟು ಸಮಾಜದ ಹಿತಕ್ಕಾಗಿ ಚಿಂತಿಸುವ ಮನೋಭಾವ ಬೆಳೆಯುವಾಗ ಭಕ್ತನು ಅಯ್ಯಪ್ಪ ತತ್ತ್ವವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಂತಾಗುತ್ತದೆ.

ಶಬರಿಮಲೆಗೆ ಹೊರಡುವ ಮುನ್ನ ಇರುಮುಡಿ ಕಟ್ಟುವುದು ವ್ರತಾಚರಣೆಯ ಶಿಖರ ಕ್ಷಣ. ಇರುಮುಡಿಯ ಒಂದು ಭಾಗದಲ್ಲಿ ಸ್ವಾಮಿಗೆ ಅರ್ಪಿಸುವ ಪೂಜಾ ಸಾಮಗ್ರಿಗಳು, ಇನ್ನೊಂದು ಭಾಗದಲ್ಲಿ ಭಕ್ತನ ಅಗತ್ಯ ವಸ್ತುಗಳು ಇರುತ್ತವೆ. ಇದು ಭಕ್ತನು ತನ್ನ ಜೀವನದ ಹೊರೆಗಳನ್ನು ಸಹ ಶ್ರದ್ಧೆಯಿಂದ ಹೊತ್ತುಕೊಂಡು ಸ್ವಾಮಿಯ ಬಳಿಗೆ ಸಾಗುತ್ತಿರುವ ಸಂಕೇತ.

ಇರುಮುಡಿ ಧರಿಸಿ, ಅಯ್ಯಪ್ಪನಾಮ ಜಪಿಸುತ್ತಾ ಪಥವನ್ನು ನಡೆದು ಹೋಗುವಾಗ ದೈಹಿಕ ಶ್ರಮವೂ ಆಧ್ಯಾತ್ಮಿಕ ಆನಂದವಾಗಿ ಪರಿವರ್ತನಗೊಳ್ಳುತ್ತದೆ. ಈ ಸಂಪೂರ್ಣ ಪ್ರಕ್ರಿಯೆ ಭಕ್ತನನ್ನು ಒಳಗಿನಿಂದಲೇ ರೂಪಾಂತರಗೊಳಿಸುತ್ತದೆ. ಮಾಲೆ ಧಾರಣೆ ಮತ್ತು ವ್ರತಾಚರಣೆ ಕೇವಲ ದೇವರ ಅನುಗ್ರಹ ಪಡೆಯುವ ಮಾರ್ಗವಲ್ಲ; ಅದು ಆತ್ಮಸಂಯಮ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಸಾಧನೆ.

ಶಬರಿಮಲೆಯ ಯಾತ್ರೆ ಮುಗಿದ ನಂತರವೂ ಈ ಮೌಲ್ಯಗಳನ್ನು ಜೀವನದಲ್ಲಿ ಮುಂದುವರೆಸಿದಾಗ ಮಾತ್ರ ವ್ರತದ ಸಾರ್ಥಕತೆ ಸಿಗುತ್ತದೆ. ಸಾರಾಂಶವಾಗಿ, ಅಯ್ಯಪ್ಪ ಸ್ವಾಮಿಯ ಮಾಲೆ ದರಿಸಿ ವ್ರತವನ್ನು ಆಚರಿಸುವುದು ಭಕ್ತನಿಗೆ ಒಂದು ಮಹತ್ವದ ಆತ್ಮಯಾತ್ರೆ. ಈ ಯಾತ್ರೆ, ಮನಸ್ಸನ್ನು ಶುದ್ಧಗೊಳಿಸಿ, ಜೀವನಕ್ಕೆ ದಿಶೆ ನೀಡುತ್ತದೆ. ''ಸ್ವಾಮಿ ಶರಣಂ ಅಯ್ಯಪ್ಪ'' ಎಂಬ ನಾಮಸ್ಮರಣೆ ಭಕ್ತನ ಹೃದಯದಲ್ಲಿ ಸದಾ ಪ್ರತಿಧ್ವನಿಸುತ್ತಾ, ಅವನನ್ನು ಧರ್ಮ, ಶಾಂತಿ ಮತ್ತು ಸತ್ಯದ ಮಾರ್ಗದಲ್ಲಿ ನಡೆಸುತ್ತದೆ.

# ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿರವರ 60ನೇ ವರ್ಷದ ಪುಣ್ಯಸ್ಮರಣೆ



**ಕಲಾ ಸಾಹಿತ್ಯ**
**ಕೃಷ್ಣಪ್ಪ** ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು


ಭಾರತರತ್ನ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿರವರು 1904 ಅಕ್ಟೋಬರ್ 02 ರಂದು ಜನಿಸಿ ರಾಷ್ಟ್ರದಲ್ಲಿ ಸಾಮಾನ್ಯ,ಸರಳಕ್ಕೆ ಒತ್ತುಕೊಟ್ಟು ರಾಷ್ಟ್ರದ ಎಲ್ಲಾ ರಾಜಕಾರಣಿಗಳಿಗೆ ಉತ್ತಮ ಆದರ್ಶದ ಬೀಜವನ್ನು ಬಿತ್ತಿ ಮಾದರಿಯಾಗಿ ತನ್ನ 62 ನೇ ವಯಸ್ಸಿನಲ್ಲಿ ಅಂದರೆ 1966 ಜನವರಿ 11 ರಂದು ರಾಷ್ಟ್ರದಿಂದ ಕಣ್ಮರೆಯಾಗಿ ರಾಷ್ಟ್ರದಲ್ಲಿ ರಾಜಕೀಯ ವಿಸ್ಮಯವನ್ನು ಮೂಡಿಸಿದರು. ತನ್ನ ತಂದೆ-ತಾಯಿಗಳ ಆಶೀರ್ವಾದದಿಂದ ಉತ್ತಮ ಸಂಸ್ಕಾರ, ಶಿಕ್ಷಣದ ಜೊತೆಗೆ ಧೈರ್ಯ, ಸ್ವಾಭಿಮಾನ, ಪ್ರಾಮಾಣಿಕತೆ,ಸಂಯಮ, ದಯೆ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡರು. ಮುಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸುಮಾರು ಹದಿಮೂರು ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದರು.

ಶಾಸ್ತ್ರಿಯವರು ಉತ್ತರಪ್ರದೇಶದ ಗೃಹ ಮತ್ತು ಸಾರಿಗೆ ಸಚಿವರಾಗಿ ನಂತರ ನೆಹರು ಅವರ ಕೇಂದ್ರ ಸಚಿವ ಸಂಪುಟದಲ್ಲಿ, ಕೇಂದ್ರ ರೈಲ್ವೆ ಸಚಿವರಾಗಿದ್ದರು.

ಆ ಸಮಯದಲ್ಲಿ ಆಂಧ್ರಪ್ರದೇಶದಲ್ಲಿ ರೈಲ್ವೆ ಅಪಘಾತ ಸಂಭವಿಸಿದ್ದರಿಂದ ಅದರ ಹೊಣೆಯನ್ನು ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 1964 ರಲ್ಲಿ ನೆಹರು ತೀರಿ ಹೋದ ಮೇಲೆ ಶಾಸ್ತ್ರಿಯವರು ಪ್ರಧಾನಮಂತ್ರಿ ಹುದ್ದೆಯನ್ನು ಅಲಂಕರಿಸಿದರು.ರಾಷ್ಟ್ರ ಮೆಚ್ಚುವ ರೀತಿ ಅತ್ಯಂತ ಸಮರ್ಥವಾಗಿ ಅಧಿಕಾರ ನೀಡಿದರು. ಆದರೆ ಆ ಸಮಯದಲ್ಲಿ ಅತ್ಯಂತ ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು.

**ಉದಾಹರಣೆಗೆ:** ಆಹಾರದ ಅಭಾವ, ನಿರುದ್ಯೋಗ,ಬಡತನ, ಕಾಶ್ಮೀರ ಸಮಸ್ಯೆ, ಪಾಕಿಸ್ತಾನ ಆಕ್ರಮ, ಚೀನಾ ಗಡಿ ಸಮಸ್ಯೆ ಇನ್ನೂ ಅನೇಕ ಸಮಸ್ಯೆಗಳನ್ನು ದಿಟ್ಟನೇರವಾಗಿ ಬಲವನ್ನು ಬಲದಿಂದಲೇ ಎದುರಿಸುತ್ತೇವೆ ಎಂದು ಸಾರಿದರು.

ಭಾರತ-ಪಾಕಿಸ್ತಾನ ಕಾಶ್ಮೀರ ಗಡಿ ಸಮಸ್ಯೆಯ ಬಗ್ಗೆ ರಷ್ಯಾದ ತಾಸ್ಕೆಂಟ್‌ನಲ್ಲಿ ನಡೆದ ಶಾಂತಿ ಒಪ್ಪಂದದ ಸಭೆಗೆ ಧಾವಿಸಿದ ಶಾಸ್ತ್ರಿಯವರು,ಆದರೆ ದೌರ್ಭಾಗ್ಯವೆಂದರೆ 1966 ಜನವರಿ 11 ಶಾಸ್ತ್ರಿಯವರು ನಿಗೂಢವಾಗಿ ಅಲ್ಲಿಯೇ ಹೃದಯಾಘಾತಕ್ಕೀಡಾಗಿ ತೀರಿಕೊಂಡರು. ಯುದ್ಧ ವೀರ, ಶಾಂತಿಧೂತ, ಅಸಾಧಾರಣ ರಾಜಕೀಯ ಮುತ್ಸದ್ದಿ,ರಾಷ್ಟ್ರ ನಾಯಕ ಇನ್ನಿಲ್ಲವಾದರು.ಕೋಟಿ ಕೋಟಿ ಭಾರತೀಯರು ಮೆಚ್ಚಿದ ಮಹಾನ್ ನಾಯಕನಿಗೆ ಅಶ್ರುತರ್ಪಣ ನೀಡಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು.



ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಪ್ರಾಮಾಣಿಕತೆ, ಸರಳತೆಗಳ ಸಾಕಾರವಾಗಿದ್ದ ಮಹಾನ್ ರಾಷ್ಟ್ರ ನಾಯಕನಿಗೆ ಗೌರವ ಸಲ್ಲಿಸಿತು. ಶಾಸ್ತ್ರಿಯವರು ರಾಷ್ಟ್ರಕ್ಕೆ ನೀಡಿದ ಜೈ ಜವಾನ್, ಜೈ ಕಿಸಾನ್ ಘೋಷಣೆ ಭಾರತೀಯರಿಗೆ ಸದಾ ಸ್ಫೂರ್ತಿದಾಯಕ ನುಡಿಯಾಗಿ ಶಾಶ್ವತವಾಗಿ ಉಳಿದಿದೆ. ಇಂಥಹ ಪ್ರಾಮಾಣಿಕ ರಾಷ್ಟ್ರ ನಾಯಕ ಅವರು ರಾಷ್ಟ್ರವನ್ನು ಅಗಲಿ ಇಲ್ಲಿಗೆ 60 ವರ್ಷವಾಯಿತು ಆದ್ದರಿಂದ ಶಾಸ್ತ್ರಿಯವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆದರ್ಶಗಳು ಹಾಗೂ ಸಾಮಾನ್ಯ ಸರಳ ಹಾಗೂ ಪ್ರಾಮಾಣಿಕ ಆಡಳಿತವನ್ನು ಅನುಸರಿಸುವ ಸಂಕಲ್ಪ ಮಾಡಿದರೆ ನಾವುಗಳು ಅವರಿಗೆ ಕೊಟ್ಟ ಗೌರವ.



# ಒಂಟಿತನಕೆ ಕೊನೆ ಇದೆಯೇ?



**ಸಾಮಾಜಿಕ ಕಳಕಳಿ**
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ


ಕಾದಿದೆ ನನ್ನ ಬಳಿಯೇ ಜಾಗ
ನಿರಾಳವಾದ ಸರೋವರದಿ
ಕಾದು ಕುಳಿತಿರುವೆ ನೀರಿನಲಿ ಮೌನದಿ
ಒಂಟಿತನಕೆ ಕೊನೆ ಇದೆಯೇ?.....
ಅನುದಿನದ ಬದುಕು ಸಾಗಲು
ಕಾದು ಕುಳಿತಿರಲು ಜೊತೆಗಾರನಿಗಾಗಿ
ಹೆಣ್ಣಿನ ಮನ ಅರಿವ ಸಂಬಂಧಕ್ಕಾಗಿ
ಹೊಂದಲು ಕಾದಿರುವೆ ಕ್ಷಣದ ಸಂತಸಕ್ಕಾಗಿ.....
ಒಲವು ಪ್ರೀತಿಯ ಸನಿಹ ಕಾಯಲು
ಶಾಂತ ಮನದಿ ಕಾಯುತ ಕುಳಿತಿರಲು
ಬದುಕ ಬವಣೆಯ ಮರೆಯಲು
ಜೊತೆಗಾರರ ಬಯಕೆಯಲಿ......
ಪೀಠವಿದೆ ನನ್ನ ಮನ ಖಾಲಿಯಿದೆ
ತಂಪಾದ ವಾತಾವರಣದ ಗಾಳಿಯಿದೆ
ಜನುಮ ಪೂರ್ತಿ ಕೈ ಹಿಡಿಯೋ
ಸಂಗಾತಿ ಬೇಕಿದೆ ಬಾ ಬೇಗ ನಿನಗಾಗಿ ಕಾದಿಹೆ.....

# ಯುವ ಶಕ್ತಿ ಪ್ರೇರಕ ವಿವೇಕ



■ ಶ್ರೀ. ಸುಭಾಷ್ ಹೇಮಣ್ಣಾ ಚವ್ಹಾಣ

ಹೇಳಿದಿರಿ ಜಡತ್ವ ಕೊಡವಿ ಎದ್ದು ಗುರಿ ಮುಟ್ಟಲು
ಕರೆದಿರಿ ಉಕ್ಕಿನ ನರ ಕಬ್ಬಿಣ ಶರೀರದಿ ನಾಡ ಕಟ್ಟಲು
ಮಾಡಿದಿರಿ ಆತ್ಮ ಜ್ಞಾನ ಕ್ರಿಯಾಶಕ್ತಿಗಳನು ಮೆಟ್ಟಲು
ಸಾರಿದಿರಿ ವಿಶ್ವ ಗುರುವಾಗಲು ಭಾರತವೆ ತೊಟ್ಟಿಲು
ವಿವೇಕ ಸಿಂಹನುಡಿಗಳು ಯುವ ಬಾಳಿಗೆ ದಾರಿ ದೀಪ
ತೋರಿದೆ ಚಿಕಾಗೋದಲಿ ಪ್ರಖರ ಭಾರತದ ವಿಶ್ವರೂಪ
ಮೊಳಗಿಸಿದೆ ಜಗದ ರಥಕೆ ಸಾರಥಿಯಾಗುವ ಧೀಶಕ್ತಿ
ಬೆಳಗಿಸಿದೆ ಆಧ್ಯಾತ್ಮ ಜ್ಞಾನ ವೇದಾಂತ ಯೋಗದುಕ್ತಿ
ಸ್ನೇಹ ಪ್ರೇಮದ ಬಂದನ ಯುವಕರೆದೆಗೆ ಕಟ್ಟಿ
ಆಲಸ್ಯ, ದೌರ್ಬಲ್ಯ, ನಕಾರಾತ್ಮ ಕೀಳರಿಮೆ ಮೆಟ್ಟಿ
ಶತೃತ್ವ ಮತ್ಸರ ದಾಯಾದಿ ಹೇಡಿತನದ ಹೆಂಟೆ ಕುಟ್ಟಿ
ಹರೆಯ ಬಾಳ ಸಾರ್ಥಕತೆಗೆ ಬಡಿದೆಬ್ಬಿಸಿದೆ ತಟ್ಟಿ
ಸ್ವಾವಲಂಬನೆ ಸ್ವಾಭಿಮಾನದ
ಬೀಜ ಬಿತ್ತಿದ ಬೈರಾಗಿ
ಪರಿಶುದ್ಧತೆ ದೃಢತೆ ಪರಾಕ್ರಮ
ಮಾದರಿ ಪಥ ತಾವಾಗಿ
ಜಾಗೃತಗೊಳಿಸಿದೆ ಯುವ ಜನಾಂಗದೊಳು
ಸಚ್ಚಾರಿತ್ರ್ಯ ಮಾಗಿ
ಮೇಳೈಸಿದೆ ನಿರ್ಭಯತೆ ಆತ್ಮನಿರ್ಭರತೆ
ಸನ್ನಡತೆಯಲಿ ಸಾಗಿ
ವಿಶ್ವಭುವನೇಶ್ವರಿಯ ಸಿರಿ ಕುಡಿ ಕಡಲಾಳದ
ಭಾರ್ಗವ ವಿವೇಕನಾತಾ ಯುವಕರ ಕಣ್ಮಣಿ
ಅಡಗಿಸಿದ ಗರ್ವವ
ಕಾಣಿಸಿದೆ ದರಿದ್ರರ ಸೇವೆಯಲಿ
ದೈವದರಿವಿನ ಮರ್ಮವ
ಬರೆದೆ ನೀನು ಚತುರ್ವರ್ಣದಲಿ
ಸರ್ವ ಸಮತೆ ಧರ್ಮವ



# ಮೂಲಂಗಿ ತಿಂದರೆ ಗ್ಯಾಸ್ಟ್ರಿಕ್?

ಮೂಲಂಗಿಯಲ್ಲಿ ಹಲವಾರು ಬಗೆಯ ಪೋಷಕಾಂಶಗಳು ಕಂಡು ಬರುವುದರಿಂದ ಇದೊಂದು ಆರೋಗ್ಯಕಾರಿ ತರಕಾರಿ ಎನ್ನುವುದರಲ್ಲಿ ಎರಡು ಮಾತಿಲ್ಲ ಆದರೆ ನಮ್ಮಲ್ಲಿ ಬಹುತೇಕ ಜನರು ಈ ತರಕಾರಿ ಸೇವನೆಯಿಂದ ಗ್ಯಾಸ್ಟ್ರಿಕ್ ಹೊಟ್ಟೆಯುಬ್ಬರ ಕಾಣಿಸಿಕೊಳ್ಳುತ್ತದೆ ಎನ್ನುವ ಕಾರಣ ನೀಡಿ ಇದರಿಂದ ದೂರ ನಿಲ್ಲುತ್ತಾರೆ ಹಾಗಾದ್ರೆ, ಮೂಲಂಗಿ ಸೇವನೆಯ ಸರಿಯಾದ ವಿಧಾನ ಹೇಗೆ ನೋಡೋಣ ಬನ್ನಿ

ಮಣ್ಣಿನಡಿಯಲ್ಲಿ ಸಿಗುವ ಕೆಲವೊಂದು ತರಕಾರಿಗಳನ್ನು ಬೇಯಿಸಿ ತಿನ್ನುವುದರ ಜೊತೆಗೆ ಹಸಿಯಾಗಿ ಅಂದರೆ ಸಲಾಡ್ ರೀತಿ ಮಾಡಿಕೊಂಡು ಕೂಡ ಸೇವನೆ ಮಾಡಬಹುದು.ಇಂತಹ ತರಕಾರಿಗಳಲ್ಲಿ ಮೂಲಂಗಿ ಕೂಡ ಒಂದು. ಚಳಿಗಾಲದಲ್ಲಿ ಈ ತರಕಾರಿ ಹೇರಳವಾಗಿ ಸಿಗುತ್ತದೆ.



ಆದರೆ ನಮ್ಮಲ್ಲಿ ಬಹುತೇಕ ಜನರು ಮೂಲಂಗಿಯ ಸೇವನೆಯ ವಿಚಾರದಲ್ಲಿ ಹಿಂದೇಟು ಹಾಕುತ್ತಾರೆ.ಯಾಕೆಂದ್ರೆ ಈ ತರಕಾರಿಯ ಘಾಟು ಸುವಾಸನೆ ಹಾಗೂ ರುಚಿ ಕೂಡ ಭಿನ್ನವಾಗಿರುತ್ತದೆ ಜೊತೆಗೆ ಗ್ಯಾಸ್ಟ್ರಿಕ್, ಆಸಿಡಿಟಿ, ಹೊಟ್ಟೆಯುಬ್ಬರ ಉಂಟಾಗುತ್ತದೆ ಎನ್ನುವ ಕಾರಣಕ್ಕೆ! ಆದರೆ ಈ ಅದ್ಭುತವಾದ ತರಕಾರಿಯಲ್ಲಿ ಮನುಷ್ಯನ ಆರೋಗ್ಯಕ್ಕೆ



ಬೇಕಾಗುವ ಪೋಷಕಾಂಶಗಳು ಯಥೇಚ್ಛವಾಗಿ ಕಂಡು ಬರುತ್ತದೆ.

**ಮೂಲಂಗಿಯ ಪೋಷಕಾಂಶಗಳ ಬಗ್ಗೆ ನೋಡುವುದಾದರೆ :** ಮೂಲಂಗಿಯು ವಿಟಮಿನ್ ಸಿ ಮತ್ತು ಫೈಬರ್ ಸೇರಿದಂತೆ ಹಲವಾರು ಪೋಷಕಾಂಶಗಳನ್ನು ಹೊಂದಿರುವುದರಿಂದ ಅವುಗಳನ್ನು ಪೋಷಕಾಂಶಗಳ ಶಕ್ತಿ ಕೇಂದ್ರವೆಂದು ಪರಿಗಣಿಸಲಾಗುತ್ತದೆ. ಮಾನವ ಪೋಷಣೆ ಮತ್ತು ಚಯಾಪಚಯ ಕ್ರಿಯೆಯ ಅಧ್ಯಯನದ ಪ್ರಕಾರ, ಈ ಪೋಷಕಾಂಶಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುವಲ್ಲಿ ಪರಿಣಾಮಕಾರಿ, ಮಧುಮೇಹದ ಅಪಾಯವನ್ನು ಕಡಿಮೆ ಮಾಡುತ್ತದೆ. ಮೂಲಂಗಿಗಳು ನೀರಿನಲ್ಲಿ ಸಮೃದ್ಧವಾಗಿವೆ, ನಮ್ಮನ್ನು ಹೈಡ್ರೀಕರಿಸುತ್ತವೆ ಮತ್ತು ಫೈಬರ್ ಅಂಶವು ಕರುಳಿನ ಆರೋಗ್ಯವನ್ನು ಉತ್ತೇಜಿಸುತ್ತದೆ.

**ಬಿಪಿ ನಿಯಂತ್ರಿಸಿ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ :** ಮೂಲಂಗಿಯಲ್ಲಿ ಕ್ಯಾಲೋರಿಗಳು ಕಡಿಮೆ ಆದರೆ ಉತ್ಕರ್ಷಣ ನಿರೋಧಕಗಳು, ವಿಟಮಿನ್ ಸಿ, ಫೈಬರ್ ಮತ್ತು ಪ್ರಮುಖ ಪೋಷಕಾಂಶಗಳು ಅಧಿಕವಾಗಿವೆ. ಈ ಪೋಷಕಾಂಶಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿರ್ವಹಿಸುವ ಮೂಲಕ ಮಧುಮೇಹದ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ತೋರಿಸುತ್ತದೆ. ಅವುಗಳಲ್ಲಿ ಹೆಚ್ಚಿನ ನೀರಿನ ಅಂಶ ಇರುವುದರಿಂದ ಅವು ನಿಮ್ಮನ್ನು ಹೈಡ್ರೀಕ ರಿಸಲು ಸಹಾಯ ಮಾಡುತ್ತದೆ, ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ ಮತ್ತು ರಕ್ತದೊತ್ತಡವನ್ನು ಕಡಿಮೆ ಮಾಡುವ ಮೂಲಕ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಮೂಲಂಗಿ ತಿಂದರೆ ಗ್ಯಾಸ್ಟ್ರಿಕ್ ಹೊಟ್ಟೆ ಉಬ್ಬರ ಸಮಸ್ಯೆ ಬರುತ್ತಾ?

**ಯಾವ ವಿಧದ ಮೂಲಂಗಿ ಸೇವನೆ ಮಾಡಬೇಕು?** ಯಾವುದೇ ಸಮಸ್ಯೆಗಳಿಲ್ಲದೆ ಮೂಲಂಗಿಯನ್ನು ಆನಂದಿಸಲು, ಸರಿಯಾದ ವಿಧವನ್ನು ಆರಿಸಿ. ಮೂಲಂಗಿಯಲ್ಲಿ ಹಲವು ವಿಧಗಳಿವೆ; ಕೆಲವು ಇತರರಿಗಿಂತ ಹೆಚ್ಚು ಖಾರವಾಗಿರುತ್ತವೆ. ಉದಾಹರಣೆಗೆ, ಕೆಂಪು ಮೂಲಂಗಿಯು ಕೆಲವು ಜನರಿಗೆ ಇಷ್ಟವಾಗದ ಗಾಢವಾದ ಪರಿಮಳವನ್ನು ಹೊಂದಿರುತ್ತದೆ. ಬಿಳಿ ಮೂಲಂಗಿಯು ಸೌಮ್ಯವಾಗಿರುತ್ತದೆ ಮತ್ತು ಹೆಚ್ಚಿನ ನೀರಿನ ಅಂಶವನ್ನು ಹೊಂದಿರುತ್ತದೆ, ಇದು ಜೀರ್ಣಿಸಿಕೊಳ್ಳಲು ಸುಲಭವಾಗುತ್ತದೆ ಎಂದು ಪೌಷ್ಟಿಕ ತಜ್ಞರು ಹೇಳುತ್ತಾರೆ. ಸೌಮ್ಯವಾದ ವಿಧವನ್ನು ಆರಿಸುವುದರಿಂದ ಪೌಷ್ಟಿಕಾಂಶದ ಪ್ರಯೋಜನಗಳನ್ನು ಒದಗಿಸುವಾಗ ಗ್ಯಾಸ್ಟ್ರಿಕ್ ಮತ್ತು ಉಬ್ಬುವಿಕೆಯನ್ನು ತಡೆಯಲು ಸಹಾಯ ಮಾಡುತ್ತದೆ.

**ಮೂಲಂಗಿ ಸೇವನೆ ಮಾಡುವಾಗ ಗ್ಯಾಸ್ಟ್ರಿಕ್ ಹೊಟ್ಟೆಯುಬ್ಬರ ಕಾಣಿಸಿಕೊಂಡರೆ :** ಮೂಲಂಗಿಯನ್ನು ಆವಿಯಲ್ಲಿ ಬೇಯಿಸುವುದು ಅಥವಾ ಲಘುವಾಗಿ ಹುರಿಯುವುದರಿಂದ ಅವುಗಳ ನಾರುಗಳು ಮೃದುವಾಗುತ್ತವೆ ಮತ್ತು ಅವುಗಳ ತೀಕ್ಷ್ಣವಾದ ಪರಿಮಳವನ್ನು ಸಿಹಿ, ಮಣ್ಣಿನ ಸುವಾಸನೆಯಾಗಿ ಪರಿವರ್ತಿಸುತ್ತದೆ. ಈ ಅಡುಗೆ ವಿಧಾನವು ಅನಿಲಕ್ಕೆ ಕಾರಣವಾಗುವ ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಒಡೆಯಲು ಸಹಾಯ ಮಾಡುತ್ತದೆ.

**ಮೂಲಂಗಿ ಸಲಾಡ್:** ತೆಳುವಾಗಿ ಕತ್ತರಿಸಿದ ಮೂಲಂಗಿಯನ್ನು ಸೌತೆಕಾಯಿ ಮತ್ತು ಕ್ಯಾರೆಟ್‌ಗಳೊಂದಿಗೆ ಮಿಶ್ರಣ ಮಾಡಿ. ಮಿಶ್ರಣದ ಮೇಲೆ ಆಲಿವ್ ಎಣ್ಣೆ, ನಿಂಬೆ ರಸ ಮತ್ತು ಜೇನು ತುಪ್ಪವನ್ನು ಚಿಮುಕಿಸಿ. ಕ್ರಂಚ್‌ಗಾಗಿ ಮೇಲೆ ಎಳ್ಳು ಸಿಂಪಡಿಸಿ. ಮೂಲಂಗಿ ಸಲಾಡ್ ತಯಾರಿಸುವಾಗ, ತಾಜಾ ಶುಂಠಿ ಹೋಳುಗಳು ಅಥವಾ ನಿಂಬೆ ರಸವನ್ನು ಹಿಂಡಿ ಸೇರಿಸಿ. ಇದು ರುಚಿಯನ್ನು ಹೆಚ್ಚಿಸುವುದಲ್ಲದೆ ನಿಮ್ಮ ಜೀರ್ಣ ಕಾರಿ ಆರೋಗ್ಯವನ್ನು ಸುಧಾರಿಸುತ್ತದೆ.

### ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರ

# ಉಪ ಚುನಾವಣೆ: ಫೆ.14 ರಂದು ಅಂತಿಮ ಪಟ್ಟಿ ರಿಲೀಸ್

• **ಉದಯವಾಹಿನಿ ದಾವಣಗೆರೆ**

ಸೂರ್ಯ ಪಥ ಬದಲಿಸಿ ಉತ್ತರಾಯಣಕ್ಕೆ ತೆರಳುವ ಸಂಕ್ರಮಣದ ಕಾಲ ಸನ್ನಿಹಿತವಾಗಿದೆ. ಮಧ್ಯಕರ್ನಾಟಕ ದಾವಣಗೆರೆ ಮಟ್ಟಿಗೆ ಈಗ ಇಲ್ಲಿನ ಎಲ್ಲಾ ರಾಜಕೀಯ ನಾಯಕರು ಮಾತ್ರ ದಕ್ಷಿಣಯಾನಕ್ಕೆ ಸಜ್ಜಾಗುತ್ತಿದ್ದಾರೆ. ಹಾಗಾಗಿ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಹೈವೋಲ್ಟೇಜ್ ಕ್ಷೇತ್ರವಾಗಿ ರೂಪಾಂತರವಾಗುತ್ತಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ದೇಶದ ಹಿರಿಯ ಶಾಸಕರು ಎಂಬ ಹೆಗ್ಗಳಿಕೆ ಹೊಂದಿದ್ದರು. ಈಗ ಇವರ ನಿಧನದಿಂದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ಪ್ರಕ್ರಿಯೆ ಗರಿಗೆದರಿದೆ. ಹಿರಿಯ ಶಾಸಕರ ಜಾಗಕ್ಕೆ ಬರಲು ಅನೇಕ ಕಿರಿಯರು ಕಾತರರಾಗಿದ್ದಾರೆ. ರಾಜಕೀಯ ಪಕ್ಷಗಳು ಇನ್ನೂ ಚಟುವಟಿಕೆ ಶುರು ಮಾಡಿಲ್ಲವಾದರೂ ತೆರೆಮರೆಯಲ್ಲಿ ಜಿಲ್ಲೆಯಲ್ಲಿ ಉಪ ಚುನಾವಣೆ, ಯಾವ ಪಕ್ಷದಿಂದ ಯಾರು ಅಭ್ಯರ್ಥಿಯಾಗುತ್ತಾರೆ ಎಂಬ ಚರ್ಚೆ, ಕುತೂಹಲದಿಂದ ಜನರು ಕಾಯುತ್ತಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷದಿಂದಲೂ ಪ್ರತಿಷ್ಠಿತ ಕುಟುಂಬಗಳು ಮತ್ತೆ ಎದುರಾಳಿ ಆಗುವ ಸಾಧ್ಯತೆಯ ಸುದ್ದಿ ಹರಿದಾಡುತ್ತಿದೆ. ಇದರ ಜತೆಗೆ ಎರಡೂ ಪಕ್ಷಗಳಲ್ಲಿ ಟಿಕೆಟ್ ಆಕಾಂಕ್ಷಿಗಳ ಹಿಂಡು ದಂಡಿಯಾಗಿದೆ. ಕಾಂಗ್ರೆಸ್ ಪಕ್ಷದಿಂದ ಯಾವುದೇ ಚುನಾವಣಾ ಚಟುವಟಿಕೆ ಆರಂಭ ಆಗದಿದ್ದರೂ ಇಲ್ಲಿ ಅನೇಕ ಆಕಾಂಕ್ಷಿಗಳ ಹೆಸರು ಕೇಳಿ ಬರುತ್ತಿದೆ.



ಉದಯವಾಹಿನಿ ಚಿತ್ರ

- ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ -ಕಾಂಗ್ರೆಸ್ ಸಜ್ಜು
- ಕರಡು ಮತದಾರರ ಪಟ್ಟಿ ಸಿದ್ಧ, ಫೆ. 14 ರಂದು ಅಂತಿಮ ಪಟ್ಟಿ ಬಿಡುಗಡೆ
- ಕಾಂಗ್ರೆಸ್ ಭದ್ರ ಕೋಟೆಯಲ್ಲಿ ಬಿಜೆಪಿ ಅರಳಿಸುವ ಉತ್ಸಾಹ
- ಬಿಜೆಪಿ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಗಲಾಟೆ

> **ನಾನು ಚುನಾವಣೆ ಆಡಲಿದ್ದೇನೆ ಎಂಬ ಸುದ್ದಿ ಹಬ್ಬಿರುವುದು ನನ್ನ ಕಿವಿಗೂ ಬಿದ್ದಿದೆ. ಸದ್ಯಕ್ಕೆ ಯಾವುದೇ ಚರ್ಚೆ ಆಗಿಲ್ಲ, ಎಲ್ಲವೂ ಕುಟುಂಬ ಮತ್ತು ಪಕ್ಷದ ತೀರ್ಮಾನದ ಮೇಲೆ ನಿಂತಿದೆ.**
> **-ಎಸ್.ಎಸ್. ಗಣೇಶ್, ಎಸ್‌ಎಸ್ ಪುತ್ರ, ಉದ್ಯಮಿ.**

**ರೇಸ್‌ನಲ್ಲಿ ಎಸ್‌ಎಸ್ ಗಣೇಶ್:** ಕಾಂಗ್ರೆಸ್‌ನಿಂದ ಎಸ್‌ಎಸ್ ಕುಟುಂಬದ, ಪುತ್ರ ಎಸ್.ಎಸ್. ಗಣೇಶ್ ಅವರ ಹೆಸರು ಮೊದಲ ಬಾರಿ ಕೇಳಿ ಬರುತ್ತಿದೆ. ಈ ಹಿಂದೆ ಇವರು ಹರಿಹರದಿಂದ ಚುನಾವಣೆ ಕಣಕ್ಕೆ ಇಳಿಯಲಿದ್ದಾರೆ ಎಂಬ ಮಾತುಗಳು ಹಿಂದಿನ ಎರಡು ಚುನಾವಣೆಯಿಂದಲೂ ಹರಿದಾಡುತ್ತಿತ್ತು. ಈಗ ದಾವಣಗೆರೆ ದಕ್ಷಿಣಕ್ಕೆ ಅವರ ಹೆಸರು ಕೇಳಿ ಬರುತ್ತಿದೆ. ಇದರ ಜತೆಗೆ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಶಾಮನೂರು ಹೆಸರು ಕೂಡ ಮುಂಚೂಣಿಯಲ್ಲಿ ಕೇಳಿ ಬರುತ್ತಿದೆ. ಇವರ ಕುಟುಂಬವೇ ಯಾರು ಎಂಬುದನ್ನು ತೀರ್ಮಾನ ಮಾಡಲಿದೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ಹೇಳುತ್ತಿವೆ.

**ಮುಸ್ಲಿಂಗೆ ಟಿಕೆಟ್:** ಇವರ ಜತೆಗೆ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಬಂದ ಎಚ್.ಎಸ್. ನಾಗರಾಜ್ ಸೇರಿ ಇನ್ನೂ ಹಲವರು ಹೆಸರುಗಳಿವೆ. ಆದರೆ ಈ ಕ್ಷೇತ್ರದಲ್ಲಿ ಹೆಚ್ಚು ಮತಗಳ ಹೊಂದಿರುವ ಮುಸ್ಲಿಂ ಸಮುದಾಯದವರು ಕೂಡ ಟಿಕೆಟ್ ಕೇಳುತ್ತಿದ್ದು 15 ಜನ ಪಟ್ಟಿಯಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ. ಏನೇ ಆದರೂ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಂಸದರು ಹಾಗೂ ಇತರೆ ಶಾಸಕರ ಅಭಿಪ್ರಾಯವನ್ನು ಪಕ್ಷ ಕೇಳುವುದರಿಂದ ಯಾರು ಅಭ್ಯರ್ಥಿ ಆಗಬಹುದು ಎಂಬ ಕುತೂಹಲ ಹೆಚ್ಚಿದೆ.

**ಕಾರ್ಯಕರ್ತರ ನಡುವೆ ಗಲಾಟೆ**

ಕಾಂಗ್ರೆಸ್‌ನಿಂದ ಯಾರೂ ಕಣಕ್ಕೆ ಇಳಿಯಲಿದ್ದಾರೆ, ಒಂದೊಮ್ಮೆ ಮುಸ್ಲಿಂ ಸಮುದಾಯಕ್ಕೆ ಆ ಪಕ್ಷದಿಂದ ಟಿಕೆಟ್ ನೀಡಿದರೆ ಆಟ ಬೇರೆಯಾಗಲಿದೆ. ಬಿಜೆಪಿ ಅಭ್ಯರ್ಥಿ ಕೂಡ ಬೇರೆ ಆಗಲಿದ್ದಾರೆ. ಈಗ ಬಿಜೆಪಿಯಿಂದ ಹಿಂದಿನ ಬಾರಿ ಪರಾಭವಗೊಂಡ ಮಾಜಿ ಮೇಯರ್ ಅಜಯ್ ಸೇರಿದಂತೆ ಐದು ಮಂದಿ ಆಕಾಂಕ್ಷಿಯಾಗಿದ್ದಾರೆ. ಇದರ ಜತೆ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಕುಟುಂಬದವರೂ ಚುನಾವಣಾ ಕಣಕ್ಕೆ ಇಳಿಯಬಹುದು ಎಂಬ ಮಾತುಗಳು ಕೇಳಿಬರುತ್ತಿದೆ. ಒಟ್ಟಾರೆ ಕಾಂಗ್ರೆಸ್ ಕೋಟೆ, ಒಡೆಯ ಇಲ್ಲದೆ ಇರುವ ಈ ಹೊತ್ತಲ್ಲಿ ಮತ್ತೆ ಒಡೆಯನ ರೂಪಿಸಲು ಕಾಂಗ್ರೆಸ್ ಪಟ್ಟುಗಳ ಹಾಕುತ್ತಿದ್ದರೆ, ಕೋಟೆಯಲ್ಲಿ ಕಮಲ ಅರಳಿಸಲು ಬಿಜೆಪಿ ಕೂಡ ತಂತ್ರ ರೂಪಿಸುತ್ತಿದೆ.

## ಮಿನಿ ನ್ಯೂಸ್

### 3 ಸ್ಕ್ಯಾನಿಂಗ್ ಕೇಂದ್ರಗಳು ಸೀಜ್

• **ಉದಯವಾಹಿನಿ ಬೀದರ**

ಉಪ ನಿರ್ದೇಶಕರು (ಪಿ.ಸಿಪಿ.ಎನ್.ಡಿ.ಟಿ) ಡಾ. ವಿವೇಕ ದೂರ್ಶೆ ಬೆಂಗಳೂರು ಹಾಗೂ ಅವರ ತಂಡವು ದಿನಾಂಕ:06-01-2026 ಹಾಗೂ 07-01-2026 ರಂದು ಜಿಲ್ಲೆಯಾದ್ಯಂತ ಸ್ಕ್ಯಾನಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲು ಜಿಲ್ಲೆಗೆ ಆಗಮಿಸಿರುವ ಸಂದಂರ್ಭದಲ್ಲಿ ಹುಮನಾಬಾದ, ಭಾಲ್ಕಿ, ಬಸವಕಲ್ಯಾಣ ಮತ್ತು ಔರಾದ(ಬಿ) ನಗರದಲ್ಲಿರುವ ಸುಮಾರ 8 ವಿವಿಧ ಸ್ಕ್ಯಾನಿಂಗ ಸೆಂಟರಗಳಿಗೆ ಭೇಟಿ ಮಾಡಿ ಪರಿಶೀಲಿಸಿದಾಗ ಇದರಲ್ಲಿ ಬಸವಕಲ್ಯಾಣ ನಗರದ ನ್ಯೂ ರೀಫಾ ಆಸ್ಪತ್ರೆ, ಔರಾದ(ಬಿ) ನಗರದ ವಿಶ್ವ ಮತ್ತು ಮುಗಳೆ ಮಲ್ಟಿ ಸ್ಪೇಶಾಲಿಟಿ ಆಸ್ಪತ್ರೆ ಮತ್ತು ಭಾಲ್ಕಿ ನಗರದ ಜಿಜಾಮಾತ ಆಸ್ಪತ್ರೆ ಈ 3 ಆಸ್ಪತ್ರೆಗಳಲ್ಲಿರುವ ಸ್ಕ್ಯಾನಿಂಗ ಕೇಂದ್ರಗಳಲ್ಲಿ ಪಿ.ಸಿಪಿ.ಎನ್.ಡಿ.ಟಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ 3 ಸ್ಕ್ಯಾನಿಂಗ ಕೇಂದ್ರಗಳನ್ನು ಸೀಜ ಮಾಡಿ ಇವರ ಮೇಲೆ ಪಿ.ಸಿಪಿ.ಎನ್.ಡಿ.ಟಿ ಕಾಯ್ದೆ ಪ್ರಕಾರ ಕ್ರಮಜರುಗಿಸಲು ಪಿ.ಸಿ.ಆರ್ ದಾಖಲು ಮಾಡಲಾಗವುದು.

### ರಾಜ್ಯದಾದ್ಯಂತ ಎಲ್ಲಾ ಕಾಂಗ್ರೆಸ್ ಕಚೇರಿಗಳ ಮುಂದೆ ಪ್ರತಿಭಟನೆ 11ರಂದು

• **ಉದಯವಾಹಿನಿ ಬೆಳಗಾವಿ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಬದಲಿಗೆ, ವಿಕಸಿತ ಭಾರತ ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದನ್ನು ವಿರೋಧಿಸಿ, ಜನವರಿ 11ರಂದು ರಾಜ್ಯದಾದ್ಯಂತ ಎಲ್ಲಾ ಕಾಂಗ್ರೆಸ್ ಕಚೇರಿಗಳ ಮುಂದೆ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಮತ್ತು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಗೋಪಿನಾಥ ಪಳನಿಯಪ್ಪನ್ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಕಾಯ್ದೆ ರದ್ದುಪಡಿಸುವವರೆಗೆ ನಾವು ಹೋರಾಟ ಮಾಡುತ್ತೇವೆ. ನ್ಯಾಯಾಲಯದ ಮೊರೆ ಹೋಗುವ ಜತೆಗೆ, ಜ.12ರಿಂದ 29ರವರೆಗೆ ದೇಶದಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದ ಜನಸಂಪರ್ಕ ಕಾರ್ಯಕ್ರಮ ಆಯೋಜಿಸುತ್ತೇವೆ. ಜ.31ರಿಂದ ಫೆ.6ರವರೆಗೆ ಜಿಲ್ಲಾಮಟ್ಟದಲ್ಲಿ ಪ್ರತಿಭಟನೆ ಮತ್ತು ಫೆ.16ರಿಂದ 24ರವರೆಗೆ ವಿಭಾಗೀಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು. ರಾಜ್ಯದಲ್ಲಿ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ಕಚೇರಿಗಳ ಬಳಿ ಪ್ರತಿಭಟನೆ ನಡೆಸುತ್ತೇವೆ' ಎಂದರು. ನರೇಗಾ ಯೋಜನೆಯಲ್ಲಿ ನ್ಯೂನತೆಗಳಿದ್ದರೆ ಸರಿಪಡಿಸಬಹುದಿತ್ತು. ಆದರೆ, ಹೊಸ ಕಾಯ್ದೆ ಜಾರಿಗೆ ತರುವ ಅಗತ್ಯವಿರಲಿಲ್ಲ. ಕೇಂದ್ರವು ರೈತ ವಿರೋಧಿ ಕಾಯ್ದೆ ಜಾರಿಗೆ ತಂದಾಗ ನಡೆದಿದ್ದ ಪ್ರತಿಭಟನೆಗಳ ಮಾದರಿಯಲ್ಲೇ, ಈ ಹೋರಾಟವೂ ನಡೆಯುತ್ತದೆ' ಎಂದು ತಿಳಿಸಿದರು.

### ಠೇವಣಿ ಮೊತ್ತ ಮರಳಿಸಲು ಒತ್ತಾಯ

• **ಉದಯವಾಹಿನಿ ಕಾರವಾರ**

ಗ್ರಾಹಕರ ಠೇವಣಿ ವಂಚಿಸಿರುವ ಸಮೃದ್ಧ ಜೀವನ ಮಲ್ಟಿಪರ್ಪಸ್ ಸಹಕಾರ ಸೊಸೈಟಿಯಿಂದ ಜನರಿಗೆ ಬರಬೇಕಿರುವ ಠೇವಣಿ ಮರಳಿಸಿಕೊಡಲು ಒತ್ತಾಯಿಸಿ ಠೇವಣಿ ವಂಚಿತರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಜನಸಂಘರ್ಷ ಫೌಂಡೇಶನ್ ಸಮಿತಿ, ನವಕರ್ನಾಟಕ ಜನಪರ ಅಭಿವೃದ್ಧಿ ವೇದಿಕೆ ಮತ್ತು ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾ ಘಟಕದ ನೇತೃತ್ವದೊಂದಿಗೆ ಹತ್ತಾರು ಠೇವಣಿದಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದೇಶದ 22 ರಾಜ್ಯಗಳಲ್ಲಿ ಶಾಖೆ ತೆರೆದಿದ್ದ ಮಹಾರಾಷ್ಟ್ರ ಮೂಲದ ಸೊಸೈಟಿಯು 14 ಲಕ್ಷಕ್ಕೂ ಹೆಚ್ಚು ಗ್ರಾಹಕರ ಠೇವಣಿ ಮರಳಿಸಬೇಕಿದೆ. ಜಿಲ್ಲೆಯಲ್ಲಿಯೂ ಸಾವಿರಾರು ಕುಟುಂಬಗಳು ಹಣ ಕಳೆದುಕೊಂಡು ಹಲವು ವರ್ಷದಿಂದ ಅತಂತ್ರರಾಗಿದ್ದಾರೆ ಎಂದು ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ ಶೆಟ್ಟಿ ಆರೋಪಿಸಿದರು.

### ಇ-ಸ್ವತ್ತು ದಾಖಲೆ ಮಾಹಿತಿ ಸಂಗ್ರಹ: ಲೋಕಾಯುಕ್ತ ಪೊಲೀಸರ ಪರಿಶೀಲನೆ

• **ಉದಯವಾಹಿನಿ ಶಿವಮೊಗ್ಗ**

ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ತಂಡ ಶಿವಮೊಗ್ಗ ಮಹಾನಗರ ಪಾಲಿಕೆ ಕಚೇರಿಗೆ ದಿಢೀರ್ ಭೇಟಿ ನೀಡಿ, ಕಡತಗಳ ಪರಿಶೀಲನೆ ನಡೆಸಿತು. ಪಾಲಿಕೆಯ ನಮ್ಮ ವಿಭಾಗ, ಕಂದಾಯ ವಿಭಾಗ, ಆಡಳಿತ ವಿಭಾಗ, ನ್ಯಾಯಾಂಗ ವಿಭಾಗ, ಟಪಾಲು ವಿಭಾಗ ಸೇರಿದಂತೆ ಹಲವು ವಿಭಾಗಗಳಿಗೆ ಭೇಟಿ ನೀಡಿ ಲೋಕಾಯುಕ್ತ ಪೊಲೀಸರು ಪರಿಶೀಲಿಸಿದರು. ಸರ್ಕಾರದ ಆದೇಶದ ಬಳಿಕ ಇ-ಖಾತೆ ಮತ್ತು ಬಿ-ಖಾತೆ ಇದುವರೆಗೆ ಒಟ್ಟು ಎಷ್ಟು ಖಾತೆ ಮಾಡಲಾಗಿದೆ. ಎಷ್ಟು ಬಾಕಿ ಉಳಿದಿವೆ ಮತ್ತು ಯಾವ ಹಂತದಲ್ಲಿದೆ ಎಂದು ಪರಿಶೀಲನೆ ನಡೆಸಿದರು. ಲೋಕಾಯುಕ್ತ ಅಧಿಕಾರಿಗಳಿಗೆ ಎಲ್ಲಾ ದಾಖಲೆಗಳನ್ನು ನೀಡುವಂತೆ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಸೂಚಿಸಿದ ಮಹಾನಗರ ಪಾಲಿಕೆ ಆಯುಕ್ತ ಮಾಯಣ್ಣಗೌಡ, ಪಾಲಿಕೆಗೆ ಯಾವಾಗ ಬಂದರೂ ಲೋಕಾಯುಕ್ತ ಪೊಲೀಸರಿಗೆ ನಮ್ಮ ಸ್ವಾಗತವಿದೆ. ಇಲ್ಲಿ ಎಲ್ಲಾ ಕಾರ್ಯಚಟುವಟಿಕೆ ಪಾರದರ್ಶಕವಾಗಿ ನಿರ್ವಹಿಸುತ್ತಿದ್ದೇವೆ ಎಂದು ಮಾಧ್ಯಮಗಳಿಗೆ ತಿಳಿಸಿದರು.

## ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಪ್ಪುಪಟ್ಟಿ ಧರಿಸಿ ಶಿಕ್ಷಕರ ಪ್ರತಿಭಟನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ ನ್ಯಾಮತಿ**

ತಾಲ್ಲೂಕಿನ ಸುರಹೊನ್ನೆ ಗ್ರಾಮದ ಪಿಎಂಶ್ರೀ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗುರುವಾರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಹ ಶಿಕ್ಷಕರು ಕೈಗೆ ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಾಮಪ್ಪ ಮಾತನಾಡಿ, ಅಖಿಲ ಭಾರತ ಶಿಕ್ಷಕರ ಫೆಡರೇಷನ್, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸೂಚನೆಯಂತೆ ಪ್ರತಿಭಟನೆ ನಡೆಸಿದ್ದೇವೆ ಎಂದರು. ಕೇಂದ್ರ ಮಾದರಿ ವೇತನ ನೀಡಬೇಕು. ಖಾಯಂ ಶಿಕ್ಷಕರ ನೇಮಕಾತಿ, ಒಪಿಎಸ್ ಜಾರಿಗೊಳಿಸುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಶಾಲೆಯ ಎಲ್ಲಾ ಸಹಶಿಕ್ಷಕರು ತೋಳಿಗೆ ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಿದ್ದೇವೆ ಎಂದು ತಿಳಿಸಿದರು.

## ಬಾಯಾಗ ಇಟ್ಟ್ರ ಬೆಣ್ಣಿ ತರಹ ಕರಗ್ತಾವ ಕೆಂಭಾವಿ ಜಾಮೂನ್ ರಜಾಕ್ ಸಾಹೇಬ್ರ ಕೈ ಚಳಕಕ್ಕ ಮಂದಿ ಫಿದಾ!

• **ಉದಯವಾಹಿನಿ ಕೆಂಭಾವಿ**

ಗುಲಾಬ್ ಜಾಮೂನ್ ಅಂದ್ರ, ಯಾರಿಗೆ ಇಷ್ಟ ಇಲ್ಲ ಹೇಳ್ರಿ? ಅದರಾಗೂ ಕೆಂಬಣ್ಣದ, ಗುಂಡಗಿನ, ಬಿಸಿ-ಬಿಸಿ ಸಕ್ಕರಿ ಪಾಕದಾಗ ಈಜಾಡೋ ಆ ಮೃದುವಾದ ಉಂಡೆಗಳು ಕಣ್ಣ ಮುಂದ ಬಂದ್ರ ಯಾರ ಬಾಯಾಗ ನೀರು ಬರಲ್ಲ? ಹೌದು ಅಪ್ಪಾ... ನಮ್ಮ ಕೆಂಭಾವಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಮುಂದ ಇರೋ ನಂದಿನಿ ಪಾರ್ಲರ್ ಈಗ ಜಾಮೂನ್ ಪ್ರಿಯರ ಅಚ್ಚುಮೆಚ್ಚಿನ ಅಡ್ಡಾ ಆಗಿ ಬಿಟ್ಟೈತಿ. ಇಲ್ಲಿನ ರಜಾಕ್ ಸಾಸನೂರ್ ಅವರ ಕೈಗುಣ ಹಂಗ ಐತಿ, ಅವರು ಮಾಡೋ ಒಂದೊಂದು ಜಾಮೂನ್ ಕಥೆಯೇ ಒಂದು ಸಿಹಿ ಅನುಭವ ನಿಮ್ಮ ಮುಂದೆ..

**ಸುತ್ತಮುತ್ತಲ ಹಳ್ಳಿ ಮಂದಿಗೆ ಇದೇ ಫೇವರೆಟ್ ತಾಣ!**

ಈ ಅಂಗಡಿ ಬರೀ ಪಟ್ಟಣದವರಿಗೆ ಅಷ್ಟೇ ಸೀಮಿತ ಆಗಿಲ್ಲರಿ. ದವಾಖಾನೆಗೆ ಬರೋ ರೋಗಿಗಳು, ಅವರ ಜೊತೆ ಬರೋ ಮಂದಿ ಇಲ್ಲಿ ಜಾಮೂನ್ ಸವಿಯದೇ ವಾಪಸ್ ಹೋಗೋದೇ ಇಲ್ಲ. ನಗನೂರ್, ಮುದನೂರ್, ಯಾಳಗಿ ಇಂತಾ ಸುತ್ತಮುತ್ತಲ ಹಳ್ಳಿಗಳಿಂದ ಕೆಲಸದ ನಿಮಿತ್ತ ಪಟ್ಟಣಕ್ಕೆ ಬರೋ ಜನರಿಗೆ ರಜಾಕ್ ಸಾಸನೂರ್ ನಂದಿನಿ ಪಾರ್ಲರ್ ಅಂದ್ರ, ಒಂಥರಾ 'ರಿಲ್ಯಾಕ್ಸ್ ಸೆಂಟರ್'. ಇಲ್ಲಿನ ಜಾಮೂನ್ ರುಚಿ ಎಷ್ಟು ಖತರ್ನಾಕ್ ಐತಿ ಅಂದ್ರೆ, ಒಮ್ಮೆ ತಿಂದ್ರ ಮುಗೀತು... ಅವರು ಈ ಅಂಗಡಿಯ ಕಾಯಂ ಕಸ್ಟಮರ್ ಆಗೋದು ಗ್ಯಾರಂಟಿ!

**ಅಂತಹ ವಿಶೇಷತೆ ಏನೈತಿ ಇಲ್ಲಿ? ಹತ್ತಿ ಹಂಗ ಸಾಫ್ಟ್:** ಈ ಜಾಮೂನ್ ಎಷ್ಟು ಮೆತ್ತಗೆ ಇರ್ತಾವ ಅಂದ್ರೆ, ಚಮಚ ಹಚ್ಚಿದ್ರ ಸಾಕು ಬೆಣ್ಣಿ ಜಾರಿದಂಗೆ ಜಾರ್ತಾವ. ಒಳಗೆ ಒಂದು ಸಣ್ಣ ಗಂಟು ಇರಲ್ಲ, ಫುಲ್ ಹತ್ತಿ ಹಂಗ ಇರೋದೇ ಇದರ ದೊಡ್ಡ ವೈಶಿಷ್ಟ್ಯ.

**ಘಮ ಘಮ ಅನ್ನೋ ಪಾಕ:** ಸಕ್ಕರಿ ಪಾಕ ಅಂದ್ರ, ಬರೀ ಸಿಹಿ ಅಲ್ಲರಿ, ಅದರಾಗ ಏಲಕ್ಕಿ ಮತ್ತು ಕೇಸರಿಯ ಪರ್ಫೆಕ್ಟ್ ಮಿಕ್ಸ್ ಇರತ್ತೈತಿ. ಆ ಪಾಕ ಜಾಮೂನ್ ಒಳಗಿನ ತನಕ ಹಂಗೆ ಇಳಿದಿರತ್ತೈತಿ. ಒಂದು ತಿಂದ್ರ ಸಾಕು, ಹೊಟ್ಟೆಯಾಗ ತಂಪು ಅನ್ನಿಸತ್ತೈತಿ.

**ಯಾವಾಗಲೂ ತಾಜಾ, ಯಾವಾಗಲೂ ಬಿಸಿ:** ಇಲ್ಲಿ ಹಳೇ ಮಾಲಿಗೆ ಜಾಗಾನೇ ಇಲ್ಲ. ಪ್ರತಿನಿತ್ಯ ನೂರಾರು ಜಾಮೂನ್ ರೆಡಿ ಆಗ್ತಾವ, ಕ್ಷಣಾರ್ಧದಾಗ ಖಾಲಿನೂ ಆಗ್ತಾವ. ಆ ಬಿಸಿ-ಬಿಸಿ ಜಾಮೂನ್ ಪ್ಲೇಟ್ ಕೈಗೆ ಬಂದ್ರೆ, ಆಗೋ ಖುಷಿನೇ ಬೇರೆ!

ನೀವೇನಾದ್ರೂ ಅಪ್ಪಟ ಸಿಹಿ ಪ್ರಿಯರಾಗಿದ್ರೆ, ಆ ಮೃದುವಾದ, ರಸಭರಿತವಾದ ಜಾಮೂನ್ ತಿನ್ನೋ ಆಸೆ ಇದ್ರೆ, ಕೆಂಭಾವಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರ ಮುಂಭಾಗದಲ್ಲಿರುವ ನಂದಿನಿ ಪಾರ್ಲರ್‌ಗೆ ಒಂದ್ ಸರತಿ ಭೇಟಿ ಕೊಡಲೇಬೇಕು. ಇಲ್ಲಿನ ಒಂದು ಪ್ಲೇಟ್ ಜಾಮೂನ್ ಹೊಡೆದ್ರೆ ನಿಮ್ಮ ಮನಸ್ಸು ಮತ್ತು ಹೊಟ್ಟೆ ಎರಡು ಫುಲ್ ತೃಪ್ತಿ ಆಗ್ತಾವ ಅನ್ನೋದ್ರಾಗ ಸಂಶಯನೇ ಇಲ್ಲ!


ಉದಯವಾಹಿನಿ ಚಿತ್ರ

> **ನಾವು ಬಹಳ ವರ್ಷದಿಂದ ಇಲ್ಲಿಯ ಜಾಮೂನ್ ಸವಿದಿದ್ದೇನೆ . ಎಷ್ಟೇ ವರ್ಷ ಕಳೆದ್ರೂ, ರಜಾಕ್ ಸಾಹೇಬ್ರ ಕೈರುಚಿ ಮಾತ್ರ ಹಂಗೆ ಐತಿ, ಚೂರು ಬದಲಾಗಿಲ್ಲ. ಸಂಜೆ ಆಗ್ತಿದ್ದಂಗೆ ಇಲ್ಲಿ ಜಾಮೂನ್ ಪ್ರಿಯರ ದಂಡೇ ಇರತ್ತೈತಿ. ನಾವಂತೂ ಇಲ್ಲಿ ತಿನ್ನೋದಷ್ಟೇ ಅಲ್ಲ, ಮನೆ ಮಂದಿಗೂ ಪಾರ್ಸಲ್ ತಗೊಂಡು ಹೋಗೋದು ರೂಢಿ ಮಾಡ್ಕೊಂಡಿವಿ.**
> **-ಸಂಜೀರಾವ್ ಕುಲಕರ್ಣಿ, ಹಿರಿಯ ಪತ್ರಕರ್ತರು**

## ಸಂತ್ರಸ್ತರಿಗೆ ನ್ಯಾಯ ಒದಗಿಸಲು ಇಲಾಖೆ ಸದಾ ಬದ್ಧ: ಪೃಥ್ವಿಕ್ ಶಂಕರ್

• **ಉದಯವಾಹಿನಿ ಕೆಂಭಾವಿ**

ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪೃಥ್ವಿಕ್ ಶಂಕರ್ ಅವರ ಮಾರ್ಗದರ್ಶನದಲ್ಲಿ, ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಂದುಕೊರತೆಗಳ ಸಭೆಯನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪೃಥ್ವಿಕ್ ಶಂಕರ್ ಮಾತನಾಡಿ, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ದಲಿತ ಮತ್ತು ಹಿಂದುಳಿದ ವರ್ಗದವರ ಮೇಲೆ ಯಾವುದೇ ರೀತಿಯ ದೌರ್ಜನ್ಯ ಅಥವಾ ತಾರತಮ್ಯ ನಡೆದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು. ಸಂತ್ರಸ್ತರಿಗೆ ನ್ಯಾಯ ಒದಗಿಸಲು ಇಲಾಖೆ ಸದಾ ಬದ್ಧವಾಗಿದೆ, ಎಂದು ಭರವಸೆ ನೀಡಿದರು. ಸಭೆಯಲ್ಲಿ ಸುರಪುರ ವಿಭಾಗದ ಡಿವೈಎಸ್‌ಪಿ ಜಾವೀದ್ ಇನಾಮದಾರ್ ಅವರು ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿ, ಸಮಾಜದಲ್ಲಿ ಸಮಾನತೆ ಕಾಪಾಡುವುದು ಮತ್ತು ದಲಿತ ವರ್ಗದವರ ಹಕ್ಕುಗಳನ್ನು ರಕ್ಷಿಸುವುದು ಪೊಲೀಸ್ ಇಲಾಖೆಯ ಆದ್ಯತೆಯಾಗಿದೆ. ಯಾರೇ ಕಾನೂನನ್ನು ಕೈಗೆತ್ತಿಕೊಂಡರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು. ನಾಗರಿಕರು ಭಯಪಡದೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಬೇಕು, ಎಂದು ಧೈರ್ಯ ತುಂಬಿದರು.

ಇದೇ ಸಂದರ್ಭದಲ್ಲಿ ಹುಣಸಗಿ ಸಿಪಿಐ ರವಿಕುಮಾರ್ ಅವರು ಮಾತನಾಡಿ, ಠಾಣಾ ವ್ಯಾಪ್ತಿಯಲ್ಲಿ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳ ಪ್ರಗತಿಯ ಬಗ್ಗೆ ಮಾಹಿತಿ ನೀಡಿದರು. ಕೆಂಭಾವಿ ಠಾಣೆಯ ಪಿಎಸ್‌ಐ ಅಮೋಜ್ ಕಾಂಬ್ಳೆ ಅವರು ಸಭೆಯನ್ನು ಸ್ವಾಗತಿಸಿ, ಇಲಾಖೆಯು ಸದಾ ಕಾಲ ಜನರ ರಕ್ಷಣೆಗೆ ಸನ್ನದ್ಧವಾಗಿದೆ ಎಂದು ತಿಳಿಸಿದರು.

**ಸಭೆಯ ಪ್ರಮುಖಾಂಶಗಳು:** ಸುಮಾರು ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗಕ್ಕೆ ಕ್ಷೌರ ಮಾಡದೆ ಅಸ್ಪುರುಷತೆ ಆಚರಣೆ, ಹೋಟೆಲ್‌ಗಳಲ್ಲಿ ಪ್ರತೀಕವಾದ್ ಚಹಾ ಕಪ್ ಇಟ್ಟು ಅಸ್ಪೃಶ್ಯತೆ ಆಚರಣೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದ ಯಾರಾದರೂ ಮರಣ ಹೊಂದಿದ್ದರೆ, ಗ್ರಾಮಗಳಲ್ಲಿ ಸಂಪೂರ್ಣ ಹೋಟೆಲ್, ಅಂಗಡಿಗಳು ಬಂದ್ ಮಾಡುವ ಮೂಲಕ ಅಸ್ಪೃಶ್ಯತೆ ಆಚರಣೆ, ದೌರ್ಜನ್ಯಕ್ಕೊಳಗಾದ ಸಂತ್ರಸ್ತರಿಗೆ ಸರ್ಕಾರದಿಂದ ದೊರೆಯುವ ಪರಿಹಾರ ಧನ ವಿಳಂಬವಾಗದಂತೆ ಕ್ರಮ ವಹಿಸಲು ಮನವಿ. ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತ ಇವೆ, ಇದರ ಬಗ್ಗೆ ಇಲಾಖೆ ಕಡಿವಾಣ ಹಾಕುವುದು ಯಾ ವಾಗ ಎಂಬ ಪ್ರಶ್ನೆ ಮುಖಂಡರು ಎತ್ತಿದರು.

ಸುರಪುರ ಉಪ ತಹಶೀಲ್ದಾರರು ಮಲ್ಲಯ್ಯ, ಆರಕ್ಷಕ ಉಪನಿರೀಕ್ಷಕರು ( ತನಿಖಾಧಿಕಾರಿಗಳು) ಹನಮಂತ ಸಿದ್ದಾಪುರ, ನಾಗರಾಜ್, ಸಿದ್ರಾಮಯ್ಯ ಇಂಡಿ, ನಿಂಗಪ್ಪ, ಅಪ್ಪು ರಾಠೋಡ್ ಹಾಗೂ ದಲಿತ ಸಂಘಟನೆಗಳ ವಿವಿಧ ಘಟಕಗಳ ಪದಾಧಿಕಾರಿಗಳು, ಗ್ರಾಮಗಳ ಮುಖಂಡರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡು ತಮ್ಮ ಕುಂದುಕೊರತೆಗಳನ್ನು ಹಿರಿಯ ಅಧಿಕಾರಿಗಳ ಮುಂದೆ ಮಂಡಿಸಿದರು.



ಉದಯವಾಹಿನಿ ಚಿತ್ರ

## ಧರ್ಮವಿದ್ದಲ್ಲಿ ಮಾತ್ರ ಸುಖ ನೆಲೆಸಲು ಸಾಧ್ಯ

• **ಉದಯವಾಹಿನಿ ಶಿರಸಿ**


ಧರ್ಮವಿದ್ದಲ್ಲಿ ಮಾತ್ರ ಸುಖ ನೆಲೆಸಲು ಸಾಧ್ಯ. ಧರ್ಮವನ್ನು ಉಳಿಸಿ ಬೆಳೆಸುವ ಮೂಲಕ ಸುಖೀ ಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಕನ್ಯಾಡಿ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನಮ್ ಜಗದ್ಗುರು ಪೀಠದ ಬ್ರಹ್ಮಾನಂದ ಸರಸ್ವತೀ ಸ್ವಾಮೀಜಿ ಕರೆ ನೀಡಿದರು.

ನಗರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಗುರುವಂದನಾ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಸಮಾಜವು ಇಂದು ರಾಜಕೀಯ ಮತ್ತು ಜಾತಿ ವೈಷಮ್ಯದಿಂದ ಹೊರಬರಬೇಕಾದ ಅನಿವಾರ್ಯತೆ ಇದೆ. ಜಾತಿ ಭಾವನೆಗಳು ಸಮುದಾಯದ ಒಳಗಿರಲಿ, ಆದರೆ ಅದು ದೇಶ ಕಟ್ಟುವ ಕಾರ್ಯಕ್ಕೆ ಪೂರಕವಾಗಿರಬೇಕು.

ಮಠದ ಜವಾಬ್ದಾರಿಯನ್ನು ಸಮುದಾಯಕ್ಕೂ ಹಂಚುವ ಉದ್ದೇಶದಿಂದ ವಿಕೇಂದ್ರೀಕರಣ ವ್ಯವಸ್ಥೆ ಅಳವಡಿಸಿಕೊಂಡು ಹೊಸ ಟ್ರಸ್ಟಿಗಳನ್ನು ನೇಮಕ ಮಾಡಲಾಗಿದೆ' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನಮ್ ಟ್ರಸ್ಟಿಗಳಾಗಿ ಆಯ್ಕೆಯಾದ ಶಾಸಕ ಭೀಮಣ್ಣ ನಾಯ್ಕ, ಎಚ್.ಆರ್. ನಾಯ್ಕ, ಹರೀಶಕುಮಾರ ಬೆಳ್ತಂಗಡಿ, ಸುಜಾತಾ ಬಂಗೇರ, ಎಸ್.ಕೆ.ಚಂದ್ರ ಪೂಜಾರಿ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮೆಸ್ಕಾಂ ಅಧ್ಯಕ್ಷ ಹರೀಶಕುಮಾರ ಬೆಳ್ತಂಗಡಿ 'ಸ್ವಾಮೀಜಿ ಧರ್ಮ ಪ್ರಚಾರದೊಂದಿಗೆ ಸಮುದಾಯವನ್ನು ಮೇಲೆತ್ತುವ ಕಾರ್ಯ ಮಾಡುತ್ತಿದ್ದಾರೆ. ಅವರು ಮಹಾಮಂಡಲೇಶ್ವರ ಸ್ಥಾನಕ್ಕೇರಿರುವುದು ಇಡೀ ಸಮುದಾಯಕ್ಕೆ ಹೆಮ್ಮೆಯ ವಿಷಯ' ಎಂದರು.


ಉದಯವಾಹಿನಿ ಚಿತ್ರ

> **ವಿದ್ಯೆಯಿಂದ ಸ್ವತಂತ್ರರಾಗಿ ಸಂಘಟನೆಯಿಂದ ಬಲಶಾಲಿಯಾಗಿ ಎಂಬ ಬ್ರಹ್ಮಶ್ರೀ ನಾರಾಯಣ ಗುರುಗಳ ಸಂದೇಶವನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ಮತ್ತು ಸಮಾನ ಅವಕಾಶಗಳು ಸಿಗುವಂತಾಗಬೇಕು.**
> **-ಭೀಮಣ್ಣ ನಾಯ್ಕ ,ಶಾಸಕ**

## ಇಂದಿರಾ ಕ್ಯಾಂಟೀನ್ ಭಾಗ್ಯ ಯಾವಾಗ?

• **ಉದಯವಾಹಿನಿ ಹುಲಸೂರು**

ನೂತನ ತಾಲ್ಲೂಕು ಕೇಂದ್ರವಾಗಿ ಘೋಷಿತವಾಗಿರುವ ಹುಲಸೂರ ಪಟ್ಟಣದಲ್ಲಿ ಇದುವರೆಗೆ ಇಂದಿರಾ ಕ್ಯಾಂಟೀನ್ ಆರಂಭವಾಗಿಲ್ಲ. ಇದರಿಂದ ತಾಲ್ಲೂಕು ಕಚೇರಿಗಳಿಗೆ ಪ್ರತಿದಿನ ಆಗಮಿಸುವ ಕಾರ್ಮಿಕರು, ಬಡವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಡಿಮೆ ದರದಲ್ಲಿ ಊಟ ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆ. ಸೂಕ್ತವಾದುದನ್ನೇ ಆರಂಭಿಸಿ, ಸೂಕ್ತ ಮಾರ್ಗದಲ್ಲೇ ಇರಿ.

ಹುಲಸೂರ ಪಟ್ಟಣದ ಜೊತೆಗೆ ಮಿರಕಲ, ಗಡಿಗೌಡಗಾಂವ, ಬೇಲೂರ, ಗೋರಟಾ, ಮುಚಳಂಬ, ಸಾಯಗಾಂವ ಹೋಬಳಿಯ ಹಲಸಿ ತುಗಾಂವ, ವಾಂಜರಖೇಡ, ಮೆಹಕರ, ಅಟ್ಟರಗಾ ಹಾಗೂ ಅಳವಾಯಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರು ವಿವಿಧ ಕೆಲಸಗಳ ನಿಮಿತ್ತ ನಿತ್ಯ ತಾಲ್ಲೂಕು ಕೇಂದ್ರಕ್ಕೆ ಬರುತ್ತಿದ್ದಾರೆ.

ತಾಲ್ಲೂಕು ಕಚೇರಿಗಳು, ಬ್ಯಾಂಕ್‌ಗಳು ಹಾಗೂ ಇತರೆ ಸರ್ಕಾರಿ ಕಚೇರಿಗಳ ಕಾರ್ಯಚಟುವಟಿಕೆಗಳು ಹೆಚ್ಚಿರುವ ಹಿನ್ನೆಲೆಯಲ್ಲಿ ಪ್ರತಿದಿನ ನೂರಾರು ಜನರು ಪಟ್ಟಣಕ್ಕೆ ಆಗಮಿಸುತ್ತಾರೆ. ಊಟದ ವ್ಯವಸ್ಥೆ ಕೊರತೆಯಾಗಿರುವುದು ಸಾರ್ವಜನಿಕ ಅಸಮಾಧಾನಕ್ಕೆ ಕಾರಣವಾಗಿದೆ. ಹುಲಸೂರ ಪಟ್ಟಣದ ಜನಸಂಖ್ಯೆ 18 ಸಾವಿರ ಮೀರಿದೆ. ಈ ನಡುವೆ ಪಟ್ಟಣದಲ್ಲಿ ನಡೆಯುವ ಸಂತೆಗೆ ತಾಲ್ಲೂಕಿನ 20 ಗ್ರಾಮಗಳು ಸೇರಿ ಹತ್ತಾರು ಪ್ರದೇಶಗಳಿಂದ ರೈತರು ಬೆಳೆದ ಹಣ್ಣು, ತರಕಾರಿ, ದೈನಂದಿನ ಬಳಕೆಯ ವಸ್ತುಗಳನ್ನು ಖರೀದಿಸಲು ಮತ್ತು ಮಾರಾಟಕ್ಕೆ ಬರುತ್ತಾರೆ. ಆದರೆ ಇಂಥ ಸಮೃದ್ಧ ವ್ಯಾಪಾರ ಚಟುವಟಿಕೆಯ ಮಧ್ಯೆ ಬಡ ವ್ಯಾಪಾರಿಗಳು ಒಂದೊತ್ತಿನ ಊಟಕ್ಕೆ ತೊಂದರೆ ಅನುಭವಿಸುವಂತಾಗಿದೆ. ಇಂದಿರಾ ಕ್ಯಾಂಟೀನ್ ಆರಂಭವಾದಲ್ಲಿ ಬಡವರು, ದಿನಗೂಲಿ ಕಾರ್ಮಿಕರು, ಮಹಿಳೆಯರು ಹಾಗೂ ವಿದ್ಯಾರ್ಥಿಗಳಿಗೆ ಅಲ್ಪ ದರದಲ್ಲಿ ಪೌಷ್ಟಿಕ ಆಹಾರ ಲಭ್ಯವಾಗಲಿದೆ. ಜೊತೆಗೆ ಹೊರ ಊಟದ ದುಬಾರಿ ವೆಚ್ಚದಿಂದ ಸಾರ್ವಜನಿಕರಿಗೆ ಪರಿಹಾರ ಸಿಗಲಿದೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.



ಉದಯವಾಹಿನಿ ಚಿತ್ರ

**ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಸಿಎಂಗೆ ಮನವಿ**

**ವಿಧಾನ ಪರಿಷತ್ ಸದಸ್ಯ ಎಂ.ಜಿ. ಮೂಳೆ ಅವರು ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರ ಒದಗಿಸುವ ಉದ್ದೇಶದಿಂದ ನೂತನ ತಾಲ್ಲೂಕಿನಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕರು ಬಡವರು ಮತ್ತು ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಅತ್ಯಗತ್ಯವಾಗಿದ್ದು ಸರ್ಕಾರ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.**

# ಕಾಳಸಂತೆಯಲ್ಲಿ ಅಕ್ಕಿ; 27 ಮಂದಿ ವಿರುದ್ಧ ಪ್ರಕರಣ

### ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ದೀಪಗಳನ್ನು ಹಗಲು ಹೊತ್ತಿನಲ್ಲಿ ಆಫ್ ಮಾಡುತ್ತಿಲ್ಲ. ಇದರಿಂದ ವಿದ್ಯುತ್ ವ್ಯರ್ಥವಾಗುತ್ತಿದೆ

• **ಉದಯವಾಹಿನಿ ಹಾವೇರಿ**

ಬಿಪಿಎಲ್ ಪಡಿತರ ಚೀಟಿದಾರರಿಗೆ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಅಕ್ಕಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಇಂಥ ಅಕ್ಕಿಯನ್ನು ಕೆಲವರು ಕಾಳಸಂತೆಯಲ್ಲಿ ಮಾರುತ್ತಿದ್ದಾರೆ. ಈ ಕೃತ್ಯ ಎಸಗಿ ಸಿಕ್ಕಿಬಿದ್ದಿರುವ 27 ಮಂದಿ ವಿರುದ್ಧ 15 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಆಹಾರ ಇಲಾಖೆಯ ಉಪನಿರ್ದೇಶಕ ಮಂಜುನಾಥ ಹೇಳಿದರು.

ಸೂಕ್ತವಾದುದನ್ನೇ ಆರಂಭಿಸಿ, ಸೂಕ್ತ ಮಾರ್ಗದಲ್ಲೇ ಇರಿ.

ನಗರದ ಹೊರವಲಯದಲ್ಲಿರುವ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ವಿಷಯ ಪ್ರಸ್ತಾಪಿಸಿದ್ದ ಪ್ರಾಧಿಕಾರದ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಎಂ. ಹಿರೇಮಠ, ಅನ್ನಭಾಗ್ಯ ಯೋಜನೆಯಡಿ ಜನರಿಗೆ ನೀಡುವ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಲಾಗುತ್ತಿದೆ. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಾ ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರಿಸಿದ ಮಂಜುನಾಥ್, 2025ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 15 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಜೊತೆಗೆ, ಕಾಳಸಂತೆಯಲ್ಲಿ ಅಕ್ಕಿ ಮಾರಾಟವನ್ನು ತಡೆಯಲು ಹೆಚ್ಚಿನ ನಿಗಾವಹಿಸಲಾಗಿದೆ' ಎಂದರು.

**ಬಸ್ ನಿಲ್ದಾಣಗಳಲ್ಲಿ ಪರಿಶೀಲನೆ:** ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣಗಳ ಶೌಚಾಲಯ ಸ್ವಚ್ಛತೆ, ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ ಕುರಿತು ಕಳೆದ ಸಭೆಯಲ್ಲಿ ಚರ್ಚಿಸಲಾಗಿತ್ತು. ಅದರಂತೆ, ಬಹುತೇಕ ಬಸ್ ನಿಲ್ದಾಣಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿರುವ ಬಗ್ಗೆ ಮಾಹಿತಿ ನೀಡಿದ್ದೀರಾ. ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವೆ' ಎಂದು ಎಂ.ಎಂ. ಹಿರೇಮಠ ಅವರು ಅಧಿಕಾರಿಗಳಿಗೆ ಹೇಳಿದರು.

ಹೋಬಳಿ ಮಟ್ಟದ ಬಸ್ ನಿಲ್ದಾಣಗಳಲ್ಲಿ ಶೌಚಾಲಯ ಸ್ವಚ್ಛಗೊಳಿಸಲು ತಿಂಗಳಿಗೆ ಕೇವಲ ರೂ. 2,500 ವೇತನ ನೀಡುತ್ತಿದ್ದೀರಾ. ಇದು ಕಡಿಮೆ ವೇತನ. ಇಷ್ಟು ಕಡಿಮೆ ಸಂಬಳದಲ್ಲಿ ಯಾರು ಕೆಲಸ ಮಾಡುತ್ತಾರೆ. ಅದನ್ನು ಪರಿಶೀಲಿಸಿ ವೇತನ ಹೆಚ್ಚಿಸಬೇಕು. ಜಿಲ್ಲೆಯ ಯಾವೆಲ್ಲ ಭಾಗಕ್ಕೆ ಬಸ್ ಅವಶ್ಯಕತೆ ಇದೆಯೋ ಅಂಥ ಊರುಗಳ ಪಟ್ಟಿ ಕೊಡುತ್ತೇವೆ. ಅಲ್ಲೆಲ್ಲ ಬಸ್ ಸಂಚರಿಸುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ದೀಪಗಳನ್ನು ಹಗಲು ಹೊತ್ತಿನಲ್ಲಿ ಆಫ್ ಮಾಡುತ್ತಿಲ್ಲ. ಇದರಿಂದ ವಿದ್ಯುತ್ ವ್ಯರ್ಥವಾಗುತ್ತಿದೆ. ಈ ಬಗ್ಗೆ ಗಮನ ಹರಿಸಬೇಕು. ಹೆಸ್ಕಾಂನಿಂದ ಶೇ 50ರಷ್ಟು ಹಾಗೂ ಗ್ರಾಮ ಪಂಚಾಯಿತಿಯಿಂದ ಶೇ 50ರಷ್ಟು ಪಾಲುದಾರಿಕೆಯಲ್ಲಿ ದೀಪಗಳನ್ನು ನಿರ್ವಹಣೆ ಮಾಡಬೇಕು. ಜಿಲ್ಲೆಯ ಹಲವು ಕಡೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿದ್ದು, ಅವುಗಳನ್ನು ತುರ್ತಾಗಿ ಪರಿಹರಿಸಬೇಕು' ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಸಿಇಒ ರುಚಿ ಬಿಂದಲ್, ಉಪ ಕಾರ್ಯದರ್ಶಿ ಪುನೀತ್ ಹಾಗೂ ಇತರರು ಇದ್ದರು.

**ಗೃಹಲಕ್ಷ್ಮಿ:** ಖಾತೆ ಏಕಾಏಕಿ ಜಪ್ತಿ ಗೃಹಲಕ್ಷ್ಮಿ ಯೋಜನೆಯಡಿ ಮನೆಯ ಯಜಮಾನಿಗೆ ಪ್ರತಿ ತಿಂಗಳು ರೂ.2 ಸಾವಿರ ನೀಡಲಾಗುತ್ತಿದೆ. ಆದರೆ ಬ್ಯಾಂಕ್‌ನವರು ಮಹಿಳೆಯರ ಖಾತೆಗೆ ಹಣ ಬರುತ್ತಿದ್ದಂತೆ ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿದ್ದಾರೆ. ಹಣ ಡ್ರಾ ಮಾಡಿಕೊಳ್ಳದ ರೀತಿಯಲ್ಲಿ ಏಕಾಏಕಿ ಖಾತೆಗಳನ್ನು ಜಪ್ತಿ ಮಾಡುತ್ತಿದ್ದಾರೆ ಎಂದು ಎಂ.ಎಂ. ಹಿರೇಮಠ ಹೇಳಿದರು. ಸರ್ಕಾರದ ಯೋಜನೆಗಳು ನೇರವಾಗಿ ಫಲಾನುಭವಿಗಳಿಗೆ ತಲುಪಬೇಕು. ಇದರ ಮಧ್ಯೆದಲ್ಲಿ ಸಮಸ್ಯೆಯಾದರೆ ಸಹಿಸುವುದಿಲ್ಲ. ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳುಗೆ ಕಠಿಣ ಸೂಚನೆ ನೀಡಬೇಕು' ಎಂದು ಅವರು ಸೂಚಿಸಿದರು.

> **ಅಕ್ಕಿಯನ್ನು ಸಂಗ್ರಹಿಸಿಡುವ ಗೋದಾಮುಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ. ಅಕ್ಕಿ ಸಾಗಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ. ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ಪೂರೈಸುವ ಪ್ರತಿ ವಾಹನಕ್ಕೂ ಜಿಪಿಎಸ್ ಅಳವಡಿಸಿದರೆ ಮಾತ್ರ ಟೆಂಡರ್ ನೀಡುವುದಾಗಿ ಹೇಳಿದ್ದೇವೆ.**
> **-ಮಂಜುನಾಥ್**


ಉದಯವಾಹಿನಿ ಚಿತ್ರ

**27 ಮಂದಿ ವಿರುದ್ಧ 15 ಪ್ರಕರಣ**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ವೃಷಭ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ.

**ಮಿಥುನ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ.

**ಕರ್ಕಾಟಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಸಿಂಹ** ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ.

**ಕನ್ಯಾ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ತುಲಾ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ.

**ವೃಶ್ಚಿಕ** ಆಕರ್ಷಕವಾದ , ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಒಂದು ಕುಟುಂಬದ ಒಟ್ಟಾಗುವಿಕೆಯಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.

**ಧನಸ್ಸು** ನಿಮ್ಮ ಸಂಗಾತಿ ಕೆಲವು ಕಷ್ಟಕರ ಸಂದರ್ಭಗಳಲ್ಲಿ ನಿಮಗೆ ಬಂಬಲ ನೀಡಲು ಹೆಚ್ಚು ಆಸಕ್ತಿ ತೋರಿಸದಿರಬಹುದು. ಷ್ಟದ ದಿನಗಳು ಈಗ ಕೊನೆಗೊಂಡಿವೆ. ಈಗ ನಿಮ್ಮ ಜೀವನಕ್ಕೆ ಹೊಸ ನಿರ್ದೇಶನ ನೀಡುವ ಬಗ್ಗೆ ಆಲೋಚಿಸಬೇಕು.

**ಮಕರ** ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ. ಒಂದು ಹಳೆಯ ಸಂಪರ್ಕ ನಿಮಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿಸಬಹುದು ಪ್ರಣಯದ ಅವಕಾಶಗಳಿವೆ.

**ಕುಂಭ** ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು. ನೀವು ವಿಳಂಬವಿಲ್ಲದೇ ಇದನ್ನು ಚರ್ಚಿಸಬೇಕು, ಏಕೆಂದರೆ ಒಮ್ಮೆ ಇದನ್ನು ಬಗೆಹರಿಸಿದ ನಂತರ ಮನೆಯಲ್ಲಿನ ಜೀವನ ನಡೆಸಲು ಹೆಚ್ಚು ಸುಲಭವಾಗುತ್ತದೆ.

**ಮೀನ** ಮಾನಸಿಕ ಶಾಂತಿಗಾಗಿ ಒತ್ತಡವನ್ನು ಪರಿಹರಿಸಿ. ನಿಮ್ಮ ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲವನ್ನು ಕೇಳಬಹುದು ಮತ್ತು ಅವರಿಗೆ ಸಹಾಯ ಮಾಡಿ ಸ್ವತಃ ಆರ್ಥಿಕ ಒತ್ತಡಕ್ಕೆ ಬರಬಹುದು.

### ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ನಡುವೆ ಸಮನ್ವಯ ಅಗತ್ಯ: ನ್ಯಾ. ಅನು ಶಿವರಾಮನ್

# ದುರ್ಬಲ ಹಾಗೂ ವಂಚಿತರಿಗೆ ಕಾಲಮಿತಿಯಲ್ಲಿ ನ್ಯಾಯ ದೊರಕಬೇಕು

• ಉದಯವಾಹಿನಿ ಚಿತ್ರದುರ್ಗ

ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ನಡುವೆ ಸಮನ್ವಯ ಅಗತ್ಯವಾಗಿದೆ. ದುರ್ಬಲ ಹಾಗೂ ವಂಚಿತರಿಗೆ ಕಾಲಮಿತಿಯಲ್ಲಿ ನ್ಯಾಯ ದೊರಕಬೇಕು ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಅನು ಶಿವರಾಮನ್ ಪ್ರತಿಪಾದಿಸಿದರು.

**ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ**

ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಹಾಗೂ ಚಿತ್ರದುರ್ಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಶನಿವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಕಾನೂನು ಸೇವಾ ಪ್ರಾಧಿಕಾರಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗಾಗಿ ಆಯೋಜಿಸಲಾಗಿದ್ದ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಬೇಕು ಎಂಬ ಸದುದ್ದೇಶದಿಂದ 1985ರ ಕಾಯ್ದೆಯಡಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಸ್ಥಾಪಿಸಲಾಗಿದೆ. ಇದರಡಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರ ಮಟ್ಟದಲ್ಲಿ ರೂಪಿಸಿರುವ ಯೋಜನೆಗಳನ್ನು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಈ ಕೆಲಸವನ್ನು ಯಾಂತ್ರಿಕವಾಗಿ ಶಿಷ್ಟಾಚಾರದ ಹಿನ್ನಲೆಯಲ್ಲಿ ನಿರ್ವಹಿಸದೇ, ಮಾನವೀಯ ಕಳಕಳಿಯೊಂದಿಗೆ ನಿರ್ವಹಿಸಬೇಕು ಎಂದು ನ್ಯಾಯಮೂರ್ತಿ ಅನು ಶಿವರಾಮನ್ ಹೇಳಿದರು.



ಉದಯವಾಹಿನಿ ಚಿತ್ರ

**ಒಂದಾಗಿ ಕಾರ್ಯ ನಿರ್ವಹಿಸಿ**

ಜಿಲ್ಲಾ ನ್ಯಾಯಾಧೀಶರನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾಗಿ ಹಾಗೂ ಹಿರಿಯ ನ್ಯಾಯಾಧೀಶರನ್ನು ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸುವ ವೇಳೆ ವ್ಯತ್ಯಾಸಗಳು ಮೂಡಿ ಬರುವುದು ಸಹಜ. ಆದರೆ ಕಾನೂನು ಸೇವಾ ಪ್ರಾಧಿಕಾರದ ಕರ್ತವ್ಯದ ವೇಳೆ ಇದನ್ನು ಮರೆತು ಒಂದಾಗಿ ಕಾರ್ಯನಿರ್ವಹಿಸಬೇಕು. ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಅಶಕ್ತರಿಗೆ ನ್ಯಾಯ ದೊರಕುವಂತೆ ನೋಡಿ ಕೊಳ್ಳಬೇಕು ಎಂದು ನ್ಯಾಯಮೂರ್ತಿ ಅನು ಶಿವರಾಮನ್ ಕಿವಿಮಾತು ಹೇಳಿದರು.

**ಸಕಾಲದಲ್ಲಿ ನ್ಯಾಯ ಹಾಗೂ ಪರಿಹಾರ ದೊರಕಲಿ:** ಕಾನೂನು ಸೇವಾ ಪ್ರಾಧಿಕಾರ ನ್ಯಾಯ ಸಿಗದ ಅಸಹಾಯಕ ಮತ್ತು ತುಳಿತಕ್ಕೊಳಗಾದ ಜನರ ಸೇವೆಗಾಗಿ ಇದ್ದು, ಕಾನೂನು ನೆರವು ಪಡೆಯುವುದು ಅವರ ಹಕ್ಕು ಮತ್ತು ಅದನ್ನು ಒದಗಿಸುವುದು ನಮ್ಮ ಕರ್ತವ್ಯವಾಗಿದೆ.

ಬಹಳಷ್ಟು ವೇಳೆ ನೊಂದವರಿಗೆ ಸಕಾಲದಲ್ಲಿ ನ್ಯಾಯ ಹಾಗೂ ಪರಿಹಾರ ದೊರಕುವುದಿಲ್ಲ. ಈ ವ್ಯವಸ್ಥೆ ಬದಲಾಗಬೇಕು. ನ್ಯಾಯಾಲಯಗಳು ನೀಡುವ ಪರಿಹಾರದ ಆದೇಶಗಳನ್ನು ಸಕಾಲದಲ್ಲಿ ಜಾರಿಯಾಗಬೇಕು. ಸಂತ್ರಸ್ತರಿಗೆ ಶೀಘ್ರವಾಗಿ ಪರಿಹಾರ ನೀಡಬೇಕು. ರಾಜ್ಯ ಕಾನೂನು ಸೇವಾ ಪ್ರಾಧಿಕಾರದಲ್ಲಿ ಜಿಲ್ಲೆಗಳಿಗೆ ಸಂಬಂಧಿದಂತೆ ಸುಮಾರು ರೂ.6 ಕೋಟಿಯಷ್ಟು ಶುಲ್ಕ ಹಾಗೂ ರೂ.21 ಕೋಟಿಯಷ್ಟು ಸಂತ್ರಸ್ತರ ಪರಿಹಾರ ಪಾವತಿ ಬಾಕಿಯಿದೆ. ಬಿಲ್‌ಗಳ ವಿಲೇವಾರಿ, ಹಣಕಾಸು ನಿರ್ವಹಣೆ ಮತ್ತು ಖಾತೆಗಳ ನಿರ್ವಹಣೆಯನ್ನು ಕಾಲಮಿತಿಯಲ್ಲಿ ಮಾಡಬೇಕು. ವಾರದ ಅಂತ್ಯದೊಳಗೆ ಬಾಕಿ ಇರುವ ಕಡತಗಳನ್ನು ವಿಲೇವಾರಿ ಮಾಡುವುದು ಅತ್ಯಗತ್ಯವಾಗಿದೆ ಎಂದು ನ್ಯಾಯಮೂರ್ತಿ ಅನು ಶಿವರಾಮನ್ ತಿಳಿಸಿದರು.

ನಂತರ ನ್ಯಾಯಮೂರ್ತಿ ಅನು ಶಿವರಾಮನ್ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ನಡುವಿನ ಅಂತರ ನಿವಾರಣೆ ಹಾಗೂ ಪ್ರಾಧಿಕಾರಗಳ ದಕ್ಷತೆ ಹೆಚ್ಚಿಸುವ ಕುರಿತು ಮಾತನಾಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳೊಂದಿಗೆ ಸಂವಾದ ನಡೆಸಿದರು.

ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಎಂ.ಜಿ.ಉಮಾ ಅವರು “ ಲೆಕ್ಕಪತ್ರ ನಿರ್ವಹಣೆ ಮತ್ತು ಕಾನೂನು ಸೇವೆಗಳ ಚಟುವಟಿಕೆಗಳು” ಕುರಿತು, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯದ ಆಡಳಿತಾತ್ಮಕ ನ್ಯಾಯಾಧೀಶ ವಿ. ಶ್ರೀಶಾನಂದ ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಪಾತ್ರ ಮತ್ತು ಜವಾಬ್ದಾರಿಗಳು ಕುರಿತು ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಟಿ.ವೆಂಕಟೇಶ್ ನಾಯ್ಕ್ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳು ಸರ್ಕಾರಿ ಇಲಾಖೆಗಳೊಂದಿಗೆ ಸಹಯೋಗ ಮತ್ತು ಸಮನ್ವಯ ಎಂಬ ವಿಷಯದ ಕುರಿತು ಮಾತನಾಡಿದರು.


ಕಾರ್ಯಾಗಾರದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರ ಶೆಟ್ಟಿ, ಚಿತ್ರದುರ್ಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರೋಣ ವಾಸುದೇವ್, ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಹಿರಿಯ ಸಿವಿಲ್ ನ್ಯಾಯಾಧೀಶರು ಉಪಸ್ಥಿತರಿದ್ದರು.

> ಕರ್ನಾಟಕ ರಾಜ್ಯ ವಿಶಾಲವಾಗಿದ್ದು, ಪ್ರತಿಯೊಂದು ಜಿಲ್ಲೆಯಲ್ಲಿಯೂ ವಿಭಿನ್ನ ರೀತಿಯ ಸಮಸ್ಯೆಗಳು ಇವೆ. ಇದನ್ನು ಅರಿತು ಪ್ರತಿಯೊಂದು ಜಿಲ್ಲಾ ಮಟ್ಟದ ಕಾನೂನು ಸೇವಾ ಪ್ರಾಧಿಕಾರಗಳು ಕಾರ್ಯನಿರ್ವಹಿಸಬೇಕು. ನ್ಯಾಯಾಧೀಶರ ಕರ್ತವ್ಯಕ್ಕಿಂತಲೂ ಕಾನೂನು ಸೇವಾ ಪ್ರಾಧಿಕಾರದ ಕರ್ತವ್ಯಗಳು ಭಿನ್ನವಾಗಿವೆ. ಜಿಲ್ಲಾ ಮಟ್ಟದಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗ ನಿರ್ವಹಿಸಬೇಕಾದ ಆಡಳಿತಾತ್ಮಕ ಕೆಲಸಗಳ ಮೇಲ್ವಿಚಾರಣೆಯೊಂದಿಗೆ, ಸಂವಿಧಾನದ ಆಶಯ ಈಡೇರಿಸುವಲ್ಲಿ, ನ್ಯಾಯವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ಕೆಲಸವನ್ನು ಕಾನೂನು ಸೇವಾ ಪ್ರಾಧಿಕಾರಗಳು ಮಾಡಬೇಕು. ಈ ಹಿನ್ನಲೆಯಲ್ಲಿಯೇ ರಾಜ್ಯದ ಹೃದಯ ಭಾಗದಲ್ಲಿರುವ ಚಿತ್ರದುರ್ಗ ನಗರದಲ್ಲಿ ಎಲ್ಲಾ ಜಿಲ್ಲೆಗಳ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಕಾರ್ಯಾಗಾರ ಆಯೋಜಿಸಲಾಗಿದೆ. -ಅನು ಶಿವರಾಮನ್ ನ್ಯಾಯಮೂರ್ತಿ

## ಸಂಭ್ರಮದ ಶ್ರೀನಿವಾಸ -ಪದ್ಮಾವತಿ ದೇವರ ಕಲ್ಯಾಣ ಮಹೋತ್ಸವ

• ಉದಯವಾಹಿನಿ ಬಸವನಬಾಗೇವಾಡಿ

ಬಸವೇಶ್ವರ ಸೇವಾ ಸಮಿತಿ (ರಿ), ಜಗತ್ತ ಜನನಿ ಫೌಂಡೇಶನ್ ಹಾಗೂ ಯೋಧಾ ಪೂರ್ವ ಪ್ರಾಥಮಿಕ ಶಾಲೆಯ ಸಹಯೋಗದಲ್ಲಿ ಪಟ್ಟಣದ ಬಸವ ಭವನದಲ್ಲಿ ಶ್ರೀ ಶ್ರೀನಿವಾಸ ಹಾಗೂ ಪದ್ಮಾವತಿ ದೇವರ ಕಲ್ಯಾಣ ಮಹೋತ್ಸವ ಸಂಭ್ರಮದಿಂದ ಜರುಗಿತು. ಪಟ್ಟಣದ ಶ್ರೀ ಸತ್ಯನಾರಾಯಣ ದೇವಸ್ಥಾನದಿಂದ ಬಸವ ಭವನದವರೆಗೆ ಶ್ರೀನಿವಾಸ್, ಪದ್ಮಾವತಿ ಹಾಗೂ ಲಕ್ಷ್ಮಿ ದೇವರನ್ನು ಸಾರೋಟದಲ್ಲಿ ಅನೇಕ ಮಹಿಳೆಯರು ಕೋಲಾಟ ನೃತ್ಯ ಸಕಲ ವಾದ್ಯ ವೈಭವದೊಂದಿಗೆ ಸ್ವಾಗತ ಮಾಡಿಕೊಳ್ಳಲಾಯಿತು. ಕಲ್ಯಾಣ ಮಹೋತ್ಸವ ಹಿನ್ನೆಲೆಯಲ್ಲಿ ತುಳಸಿಗೆ ದ್ವೀಪ ಪ್ರಜ್ವಲನೆ, ಬಸವ ಪುತ್ತಳಿಗೆ ಪುಷ್ಪಾರ್ಚನೆ ಉಡಿ ತುಂಬುವ ಹಾಗೂ ಮಾಂಗಲ್ಯ ಧಾರಣೆ ಸೇರಿದ ಸಹಸ್ರ ಜನತೆಯ ಸಮ್ಮುಖದಲ್ಲಿ ಜರುಗಿತು. ಮಕ್ಕಳು ಹಾಗೂ ಹಿರಿಯರಿಂದ ಜರುಗಿದ ಭರತನಾಟ್ಯ ಹಾಗೂ ಕೋಲಾಟ ನೃತ್ಯ ಪ್ರದರ್ಶನ ಪ್ರೇಕ್ಷಕರ ಮನ ಸೆಳೆದವು. ವಿನಾಯಕನ ಸಮ್ಮುಖದಲ್ಲಿ ದಂಪತಿ ಪೂಜೆ ನಡೆಯಿತು. ನಂತರ ಲಡ್ಡು ಪ್ರಸಾದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಈರಣ್ಣ. ಚ. ಪಟ್ಟಣಶೆಟ್ಟಿ, ಅನಿಲ ಅಗರವಾಲ, ಶೈಲಜಾ ಕುರ್ಡೇಕರ,ವಿನಾಯಕ. ಮ. ಕುರ್ಡೇಕರ ಸೇರಿದಂತೆ ಅನೇಕರು ಹಾಜರಿದ್ದರು.


ಉದಯವಾಹಿನಿ ಚಿತ್ರ

**ಸಾವಿರಕ್ಕೂ ಅಧಿಕ ಜನ ಭಾಗಿ**

ಪಟ್ಟಣದ ಬಸವ ಭವನದಲ್ಲಿ ಶನಿವಾರ ಸುಂದರವಾಗಿ ತಿರುಪತಿ ತಿಮ್ಮಪ್ಪನ ದೇವಾಲಯವನ್ನು ನಿರ್ಮಿಸಿ, ಸಮ್ಮುಖದಲ್ಲಿ ಶ್ರೀನಿವಾಸ ಹಾಗೂ ಪದ್ಮಾವತಿ ದೇವರ ಕಲ್ಯಾಣ ಮಹೋತ್ಸವಕ್ಕೆ ಸಾವಿರಕ್ಕೂ ಅಧಿಕ ಜನ ಭಾಗವಹಿಸಿ ದರ್ಶನ ಪಡೆದರು.

## ರೈತರ ಸಮಸ್ಯೆ ನಿರ್ಲಕ್ಷ್ಯಕ್ಕೆ ಸರ್ಕಾರವೇ ಹೊಣೆ

• ಉದಯವಾಹಿನಿ ಬೀದರ

ಅತೀವೃಷ್ಟಿಯಿಂದ ಬೀದರ ಜಿಲ್ಲೆಯ ರೈತರ ಬೆಳೆ ಸಂಪೂರ್ಣವಾಗಿ ನಾಶಗೊಂಡಿದ್ದು, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ರೈತರ ಜ್ವಲಂತ ಸಮಸ್ಯೆಗಳನ್ನು ತಕ್ಷಣ ಬಗೆಹರಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯು ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದೆ.

ಪ್ರತಿ ಟನ್ ಕಬ್ಬಿಗೆ ರೂ.2950 ದರದಂತೆ ಹಣವನ್ನು ರೈತರ ಖಾತೆಗಳಿಗೆ ತಕ್ಷಣ ಜಮೆ ಮಾಡಬೇಕು, ಅತೀವೃಷ್ಟಿಯಿಂದ ಹಾನಿಗೊಳಗಾದ ಎಲ್ಲಾ ರೈತರಿಗೆ ಸಮರ್ಪಕ ಬೆಳೆ ಹಾನಿ ಪರಿಹಾರ ಹಾಗೂ ಬೆಳೆ ವಿಮೆ ಪರಿಹಾರ ಶೀಘ್ರ ನೀಡಬೇಕು ಎಂದು ಒತ್ತಾಯಿಸಲಾಗಿದೆ. ತೊಗರಿ ಖರೀದಿ ಕೇಂದ್ರಗಳನ್ನು ತಕ್ಷಣ ಆರಂಭಿಸಿ, ಖರೀದಿಯಲ್ಲಿ ಯಾವುದೇ ಹಣ ವಸೂಲಿ ಮಾಡಬಾರದು ಎಂದು ಮನವಿ ಮಾಡಲಾಗಿದೆ.

ಇದಲ್ಲದೆ ತೊಗರಿಗೆ ಪ್ರತಿ ಕ್ವಿಂಟಲ್‌ಗೆ ರೂ.8000 ಎಂಎಸ್‌ಪಿ ಅನುಗುಣವಾಗಿ ರಾಜ್ಯ ಸರ್ಕಾರ ಸಹಾಯಧನ ನೀಡಬೇಕು, ಜಿಲ್ಲೆಯ ಕಬ್ಬು ಮುಗಿಯುವವರೆಗೆ ಹೊರ ರಾಜ್ಯಗಳಿಂದ ಕಬ್ಬು ತರದಂತೆ ನಿರ್ಬಂಧ ವಿಧಿಸಬೇಕು ಹಾಗೂ ಅತೀವೃಷ್ಟಿಯಿಂದ ಬೆಳೆ ನಾಶಗೊಂಡಿರುವ ಹಿನ್ನೆಲೆಯಲ್ಲಿ ಎಲ್ಲಾ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಲಾಗಿದೆ. ರೈತರ ಸಮಸ್ಯೆಗಳನ್ನು ತಕ್ಷಣ ಬಗೆಹರಿಸದಿದ್ದಲ್ಲಿ ಸಂಘವು ಉಗ್ರ ಹೋರಾಟ ಕೈಗೊಳ್ಳಲಿದೆ ಎಂದು ರೈತ ಮುಖಂಡರು ಎಚ್ಚರಿಕೆ ನೀಡಿದ್ದಾರೆ.


ಉದಯವಾಹಿನಿ ಚಿತ್ರ

## ಹೆಲ್ಮೆಟ್ ಧರಿಸಿದ ಸವಾರರಿಗೆ ಗುಲಾಬಿ ಹೂವು ನೀಡಿದ ಪಿ. ಆಯ್ ಗುರುಶಾಂತ ದಾಸ್ಯಾಳ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬಸವನಬಾಗೇವಾಡಿ

ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತಾ ಜಾಗೃತಿ ಸಪ್ತಾಹ 2026 ಅಭಿಯಾನದ ಕಾರ್ಯಕ್ರಮ ಅಡಿಯಲ್ಲಿ ಪಿ. ಐ ಗುರುಶಾಂತ ದಾಸ್ಯಾಳ ಸಾರ್ವಜನಿಕರಿಗೆ ರಸ್ತೆ ಸಂಚಾರಿ ನಿಯಮಗಳನ್ನು ತಿಳಿಸುವುದರೊಂದಿಗೆ ಹೆಲ್ಮೆಟ್ ಧರಿಸಿದ ಮೋಟರ್ ಸೈಕಲ್ ವಾಹನ ಸವಾರರಿಗೆ ಗುಲಾಬಿ ಹೂವು ನೀಡುವುದರ ಮೂಲಕ ಸಂಚಾರಿ ಸುರಕ್ಷತೆ ಮೂಡಿಸಿದರು.

## ಮಹಿಳಾ ಸುರಕ್ಷತೆಗೆ ಕಿರುಸೇತುವೆಯಾಗಿ ಅಕ್ಕಪಡೆ: ಶೈನಿ

• ಉದಯವಾಹಿನಿ ಬೀದರ

ನಗರದ ನಯಾ ಕಮಾನ ಹತ್ತಿರದ ಹೊಲಿ ಫೇತ್ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಕ್ಕಪಡೆಯ ರಾಜ್ಯ ಸಲಹೆಗಾರರಾದ ಶೈನಿ ಪ್ರದೀಪ್ ಗುಂಟಿ ಅವರು ಮಾತನಾಡಿ, ಸಮಾಜದಲ್ಲಿ ಮಹಿಳಾ ಸುರಕ್ಷತೆ ಮತ್ತು ಜಾಗೃತಿಯ ಕಿರುಸೇತುವೆಯಾಗಿ ಅಕ್ಕಪಡೆ ಕಾರ್ಯನಿರ್ವಹಿಸುತ್ತಿದ್ದು, ಇದು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು.

ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಆರಂಭಿಸಿರುವ ಬೀದರ್ ಜಿಲ್ಲಾ ಪೊಲೀಸ್ ಅಕ್ಕಪಡೆ ಈಗಾಗಲೇ ರಾಜ್ಯಕ್ಕೆ ಮಾದರಿಯಾಗಿ ಗುರುತಿಸಿಕೊಂಡಿದೆ. ಮಹಿಳೆಯರು ಸುರಕ್ಷಿತರಾಗಿದ್ದರೆ ಜಿಲ್ಲೆ ಸುರಕ್ಷಿತವಾಗಿರುತ್ತದೆ ಎಂಬ ಆಲೋಚನೆಯೊಂದಿಗೆ ಅಕ್ಕಪಡೆಯನ್ನು ರಚಿಸಿ, ವ್ಯವಸ್ಥಿತವಾಗಿ ಜಾರಿಗೆ ತರಲಾಗಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣುಮಕ್ಕಳಿಗೆ ತೊಂದರೆ ನೀಡಿದ ಸಂದರ್ಭಗಳಲ್ಲಿ ಅವರನ್ನು ರಕ್ಷಿಸುವ ಕಾರ್ಯವನ್ನು ಅಕ್ಕಪಡೆ ಯಶಸ್ವಿಯಾಗಿ ನಿರ್ವಹಿಸಿದೆ ಎಂದು ಅವರು ವಿವರಿಸಿದರು. ಮಹಿಳೆಯರು ಮತ್ತು ಮಕ್ಕಳಿಗೆ ತ್ವರಿತ ಸಹಾಯ, ಧೈರ್ಯ ಮತ್ತು ವಿಶ್ವಾಸ ಮೂಡಿಸುವ ಉದ್ದೇಶದಿಂದ ಅಕ್ಕಪಡೆ ಕಾರ್ಯನಿರ್ವಹಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಅಕ್ಕಪಡೆಯ ವತಿಯಿಂದ ಮಹಿಳಾ ಸುರಕ್ಷತೆ ಜಾಗೃತಿ ಕಾರ್ಯಾಗಾರವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಮೊಹಮ್ಮದ್ ಖಾದ್ರಿ ಶರೀಫ್, ಮುಖ್ಯೋಪಾಧ್ಯಾಯರಾದ ತಾಲತ್ ಹಾಗೂ ಅಕ್ಕಪಡೆ ವತಿಯಿಂದ ತರಬೇತಿ ನೀಡಿದ ಪೊಲೀಸ್ ಅಧಿಕಾರಿ ಸಂಗೀತಾ ಅವರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

## ಮಂಗಳೂರಿನಲ್ಲಿ ರಾಜ್ಯಮಟ್ಟದ ಗೇರು ಮೇಳ: ಅರಣ್ಯ ಸಚಿವ

• ಉದಯವಾಹಿನಿ ಮಂಗಳೂರು

ಮುಂಬರುವ ಫೆಬ್ರವರಿ ತಿಂಗಳಲ್ಲಿ ಮಂಗಳೂರಿನಲ್ಲಿ ರಾಜ್ಯಮಟ್ಟದ ಗೇರು ಮೇಳ ಆಯೋಜಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ. ಅವರು ನಗರದಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಕಚೇರಿಗೆ ಭೇಟಿ ನೀಡಿ ಮಾತನಾಡಿದರು.

ರಾಜ್ಯದಲ್ಲಿ ಅತ್ಯಧಿಕ ಗೇರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿದೆ. ಇಲ್ಲಿ ಗೇರು ಸಸಿಗಳಿಗೆ ಹೆಚ್ಚು ಬೇಡಿಕೆ ಇರುವ ಬಗ್ಗೆ ತಿಳಿದು ಬಂದಿದೆ. ಗೇರು ಉತ್ಪನ್ನಗಳಿಗೆ ದೇಶದಲ್ಲಿಯೂ ಹಾಗೂ ವಿದೇಶದಲ್ಲಿಯೂ ಹೆಚ್ಚಿನ ಬೇಡಿಕೆ ಇದೆ. ಬೇಡಿಕೆಯಷ್ಟು ಗೇರು ಪೂರೈಕೆ ಇಲ್ಲದೆ ವಿದೇಶದಿಂದ ಗೇರು ಆಮದು ಮಾಡಬೇಕಾದ ಪರಿಸ್ಥಿತಿ ಇದೆ ಎಂದು ಅವರು ಹೇಳಿದರು. ಕರಾವಳಿ ಗೇರು ಬೆಳೆಗಾರರನ್ನು ಪ್ರೋತ್ಸಾಹಿಸಲು ಮಂಗಳೂರಿನಲ್ಲಿ ಗೇರು ಮೇಳವನ್ನು ಆಯೋಜಿಸಲಾಗುತ್ತಿದೆ. ಇದರಿಂದ ಗೇರು ಬೆಳೆಗಾರರು, ಗೇರು ಉದ್ಯಮದವರನ್ನು ಒಂದೆಡೆ ಸೇರಿಸಿ ಗೇರು ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಲು ಪ್ರಯತ್ನಿಸಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಗೇರು ಮೇಳದಲ್ಲಿ ಉತ್ಪನ್ನಗಳ ಪ್ರದರ್ಶನ, ವಿಚಾರ ಸಂಕಿರಣ ಸೇರಿದಂತೆ ವಿವಿಧ ಆಯಾಮಗಳಲ್ಲಿ ಕಾರ್ಯಕ್ರಮ ನಡೆಸಲಾಗುವುದು ಎಂದು ಅವರು ತಿಳಿಸಿದರು. ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಮಾತನಾಡಿ, ಜಿಲ್ಲೆಯಲ್ಲಿ 40 ಸಾವಿರ ಮೆಟ್ರಿಕ್ ಟನ್ ಗೇರು ಉತ್ಪಾದನೆಯಾಗುತ್ತಿದೆ. ಜಿಲ್ಲೆಯಲ್ಲಿ ಗೇರು ಉತ್ಪನ್ನಗಳಿಗೆ ಹೆಚ್ಚು ಬೇಡಿಕೆ ಇದ್ದು, ಗೇರು ಉದ್ಯಮದಿಂದಲೂ ಬೇಡಿಕೆ ಬರುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗೇರು ಸಸಿಗಳಿಗೂ ಹೆಚ್ಚಿನ ಬೇಡಿಕೆ ಇದೆ. ಮುಂದಿನ ದಿನಗಳಲ್ಲಿ ನಿಗಮವು ಇದಕ್ಕೆ ಬೇಕಾದ ಯೋಜನೆ ರೂಪಿಸಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ಮೇಗಿ, ಸಿಸಿಎಫ್ ಕರಿಕಲನ್ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಗೇರು ಬೆಳೆಗಾರರಿಗೆ ವೈಜ್ಞಾನಿಕ ಬೆಲೆ ದೊರಕುವಂತಾಗಲು ಇಲಾಖೆಯು ಕ್ರಮ ಕೈಗೊಳ್ಳಲಿದೆ. ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸಲು ಬೇಕಾದ ಎಲ್ಲಾ ರೀತಿಯ ಸಂಶೋಧನೆ, ಬೆಲೆ ವಿಸ್ತರಣೆ ಮತ್ತಿತರ ಕ್ರಮ ಕೈಗೊಳ್ಳಲಾಗುವುದು. -ಖಂಡ್ರೆ

## ಪರವಾನಿಗೆ ಪಡೆಯದೇ ಮರಳು ಸಾಗಾಣಿಕೆ ತಡೆಯುವಂತೆ ತಹಶೀಲ್ದಾರ್‌ಗೆ ಮನವಿ

• ಉದಯವಾಹಿನಿ ಸೇಡಂ

ತಾಲ್ಲೂಕಿನ ಬಿಜನಳ್ಳಿ ಹಾಗೂ ತೋಟ್ನಳ್ಳಿ ಗಾಮದಲ್ಲಿ ಕಾಗೀಣ ನದಿ ಹಾದುಹೋಗುತಿರುವ ನದಿಯ ಪಕ್ಕದ ಗ್ರಾಮದ ಬಿಜನಳ್ಳಿ ಹಾಗೂ ತೋಟ್ನಳ್ಳಿ ಗ್ರಾಮಕ್ಕೆ ಸಂಪರ್ಕಕ್ಕೆ ಕಲ್ಪಸುವುದಕ್ಕೆ ಮೇಲ್ಸೇತುವೆ ಕಾಮಾಗಾರಿ ನಡೆಯುತ್ತಿದ್ದು, ಈ ಕಾಮಾಗಾರಿಯು ದೇವಿಂದ್ರಪ್ಪ ಎಮ್ ಬಿರಾದಾರ ಗುತ್ತಿಗೆದಾರರು ಹೆಸರಿನಲ್ಲಿ ಕಾಮಾಗಾರಿ ಪ್ರಗತಿಯಲ್ಲಿದ್ದು, ತೋಟ್ನಳ್ಳಿ ಗ್ರಾಮಕ್ಕೆ ಸಂಪರ್ಕಕ್ಕೆ ಕಲ್ಪಸುವುದಕ್ಕೆ ಮೇಲಸೇತುವೆ ಕಾಮಾಗಾರಿಗಾಗಿ ಅಕ್ರಮವಾಗಿ ಮರಳನ್ನು ಯಾವುದೇ ಪರವಾನಿಗೆ ಪಡೆಯದೇ ಮರಳನ್ನು ಹಗಲು ಮತ್ತು ರಾತ್ರಿ ರಾಜರೋಷವಾಗಿ ಯಾರ ಭಯವಿಲ್ಲದೆ ಮರಳನ್ನು ಸಾಗಿಸುತ್ತಿದ್ದು ತಕ್ಷಣ ತಡೆಹಿಡಿಯುವಂತೆ ತಹಶೀಲ್ದಾರ್ ಅವರಿಗೆ ಜಯ ಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ರವೀಂದ್ರ ಎಲ್ ನಾಯಕ್ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

## ಅಂಗನವಾಡಿ ಕಟ್ಟಡ ಕಾಮಗಾರಿಗೆ ಭೂಮಿಪೂಜೆ

• ಉದಯವಾಹಿನಿ ನವಲಗುಂದ

ತಾಲ್ಲೂಕಿನ ಯಮನೂರ ಗ್ರಾಮ ಪಂಚಾಯತ ವ್ಯಾಪ್ತಿಯ ಕುಮಾರಗೋಪ್ಪ ಗ್ರಾಮದಲ್ಲಿ 2025-26ನೇ ಸಾಲಿನ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯ ಅನುದಾನದಲ್ಲಿ ನೂತನ ಅಂಗನವಾಡಿ ಕಟ್ಟಡ ಕಾಮಗಾರಿಗೆ ಶಾಸಕ ಎನ್ ಎಚ್ ಕೋನರಡ್ಡಿ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅಂಗನವಾಡಿಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವುದು ನಮ್ಮ ಸರ್ಕಾರದ ಆಶಯವಾಗಿದೆ ಎಂದರು. ನಂತರ ಗ್ರಾಮದಲ್ಲಿನ ಪಂಚಗೃಹ ಹಿರೇಮಠದ ಶಾಖಾ ಮಠಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದು ಕೊಂಡರು ಈ ವೇಳೆ ಗ್ರಾಮಸ್ಥರಿಂದ ಶಾಸಕರನ್ನು ಸನ್ಮಾನಿಸಲಾಯಿತು.

ಇ ಒ ಪಿ ಆರ್ ಬಡೇಖಾನ್, ಸಿಡಿಪಿಒ ಗಾಯತ್ರಿದೇವಿ ಪಾಟೀಲ, ಸಂಗಮೇಶ ಲೂತಿ, ಎಸ್ ಎಸ್ ಲಂಗೋಟಿ, ಗಂಗಾಧರ ಮಲ್ಲಾಪುರ, ಮಹಾಂತೇಶ ಕುಲಕರ್ಣಿ, ಚಂದ್ರಶೇಖರ ಗುರುಸಿದ್ದಪ್ಪನವರ, ಉಮೇಶ ಕಳ್ಳಿಮನಿ, ಹಣಮಂತಪ್ಪ ಮರಿಸಿದ್ದಪ್ಪನವರ ಇದ್ದರು.

## ವಿದ್ಯುತ್ ಶಾರ್ಟ್ ಸರ್ಕ್ಯೂಟ್; 10 ಎಕರೆ ಕಾಡು ನಾಶ

• ಉದಯವಾಹಿನಿ ಪುತ್ತೂರು

ನಗರದ ಹೊರಭಾಗದಲ್ಲಿನ ಗೇರು ನಿಗಮ ಹಾಗೂ ಅರಣ್ಯಪ್ರದೇಶದ ಭಾಗದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟಿನಿಂದ ಬೆಂಕಿ ಉಂಟಾಗಿ ಸುಮಾರು 10 ಎಕರೆ ಪ್ರದೇಶದಲ್ಲಿ ಮರಮಟ್ಟುಗಳು ಸಂಪೂರ್ಣ ಭಸ್ಮವಾದ ಘಟನೆ ರಾತ್ರಿ ನಡೆದಿದೆ. ತಾಲ್ಲೂಕಿನ ಕೋಡಿಂಬಾಡಿ, ಬನ್ನೂರು, ಪಡ್ನೂರು ಹಾಗೂ ಬಂಟ್ವಾಳ ತಾಲ್ಲೂಕಿನ ಪೆರ್ನೆ ಬಿಳಿಯೂರು ವ್ಯಾಪ್ತಿಗೆ ಸೇರಿಕೊಂಡಿರುವ ಅರಣ್ಯಪ್ರದೇಶ ಹಾಗೂ ಸುಮಾರು 6 ಎಕರೆಯಷ್ಟು ಗೇರು ಅಭಿವೃದ್ಧಿ ನಿಗಮಕ್ಕೆ ನೀಡಲಾದ ಭಾಗದಲ್ಲಿ ಈ ವಿದ್ಯುತ್ ಅವಘಡ ನಡೆದಿದೆ. ವಿದ್ಯುತ್ ಶಾಟ್ ಸರ್ಕ್ಯೂಟಿನಿಂದ ಉಂಟಾದ ಬೆಂಕಿ ಮುಳಿಹುಲ್ಲಿಗೆ ಬಿದ್ದ ಪರಿಣಾಮ ಕಾಡ್ಗಿಚ್ಚು ಉಂಟಾಗಿದೆ. ಗೇರು ಅಭಿವೃದ್ಧಿ ನಿಗಮದ ಜಾಗದಲ್ಲಿ ನೆಡಲಾಗಿದ್ದ ಸುಮಾರು 350 ಗೇರು ಗಿಡಗಳು ಬೆಂಕಿಗೆ ಆಹುತಿಯಾಗಿವೆ. ಅರಣ್ಯ ಭಾಗದಲ್ಲಿ ದಟ್ಟವಾಗಿ ಬೆಳೆದಿದ್ದ ನೂರಾರು ಮರಗಳು ಬೆಂಕಿಯಿಂದಾಗಿ ನಾಶ ಮತ್ತು ಹಾನಿಗಿಡಾಗಿವೆ. ಬಹುತೇಕ ಮರಗಳ ರೆಂಬೆ ಕೊಂಬೆಗಳು ಮಾತ್ರ ಬೆಂಕಿಗೆ ಸಿಲುಕಿದ್ದು, ಇಂತಹ ಮರಗಳು ಯಾವುದೇ ಸಮಸ್ಯೆ ಇಲ್ಲದೆ ಮತ್ತೆ ಚಿಗುರುತ್ತವೆ. ಇದರಿಂದ ದೊಡ್ಡ ಮಟ್ಟದ ಹಾನಿ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

**ಕಾಡು ಪ್ರಾಣಿಗಳು ನಾಡಿಗೆ:** ಸುಮಾರು 10 ಎಕರೆ ಪ್ರದೇಶದಲ್ಲಿ ಉಂಟಾದ ಬೆಂಕಿಯಿಂದ ಕಾಡಿನಲ್ಲಿದ್ದ ಕಾಡುಪ್ರಾಣಿಗಳು ನಾಡಿಗೆ ಇಳಿದಿವೆ. ಕಾಡು ಹಂದಿಗಳು ಈ ಭಾಗದಲ್ಲಿ ಸಾಕಷ್ಟಿದ್ದು, ಇದೀಗ ರೈತರ ತೋಟಗಳಿಗೆ ನುಗ್ಗಿವೆ ಎಂದು ತಿಳಿದುಬಂದಿದೆ. ಬೆಂಕಿ ನಂದಿಸುವ ವೇಳೆ ಅರಣ್ಯ ವೀಕ್ಷಕರೊಬ್ಬರಿಗೆ ವಿಷಪೂರಿತ ಹಾವು ಕಚ್ಚಿದ್ದು, ತಕ್ಷಣ ಅವರನ್ನು ಗೇರು ನೆಡುತೋಪು ಅಧೀಕ್ಷಕ ರವಿಪ್ರಸಾದ್ ಅವರು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಅವರು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಮಧ್ಯಾಹ್ನದ ಸಮಯದಲ್ಲಿ ವಿದ್ಯುತ್ ನಿಂದ ಬೆಂಕಿ ಆರಂಭಗೊಂಡಿರಬಹುದು. ಆದರೆ ಸಂಜೆ ವೇಳೆಯ ಗಾಳಿಗೆ ಬೆಂಕಿ ಹೆಚ್ಚಳಗೊಂಡಿದ್ದು, ನಂತರ ಅಧಿಕಾರಿಗಳು ಹಾಗೂ ಜನರ ಗಮನಕ್ಕೆ ಬಂದಿದೆ. ಅಗ್ನಿಶಾಮಕ ದಳ ಬೆಂಕಿ ಆರಿಸುವಲ್ಲಿ ಯಶಸ್ವಿಯಾಗಿದ್ದರೂ ತಡರಾತ್ರಿ ವೇಳೆ ಕೆಲ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

# ಯಾವುದೇ ಒತ್ತಡಗಳಿಗೆ ಒಳಗಾಗದೆ ಪಾರದರ್ಶಕ ತನಿಖೆಗೆ ಸೂಚನೆ

### ದೌರ್ಜನ್ಯಕ್ಕೆ ಒಳಗಾಗಿರುವ ದಲಿತ ಕುಟುಂಬಕ್ಕೆ ನ್ಯಾಯ ಸಿಗುವಂತೆ, ಆರೋಪಿತರಿಗೆ ಕಠಿಣ ಶಿಕ್ಷೆ ಆಗುವಂತೆ ಕೆಲಸ ಮಾಡಬೇಕು

• ಉದಯವಾಹಿನಿ ಧಾರವಾಡ

ಯಾವುದೇ ರೀತಿಯ ಒತ್ತಡಗಳಿಗೆ ಒಳಗಾಗದೆ, ಧಾರವಾಡ ಜಿಲ್ಲೆಯ ಇನಾಂವೀರಾಪೂರ ಪ್ರಕರಣದಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ದಲಿತ ಕುಟುಂಬಕ್ಕೆ ನ್ಯಾಯ ಸಿಗುವಂತೆ ಮತ್ತು ಆರೋಪಿತರಿಗೆ ಕಠಿಣ ಶಿಕ್ಷೆ ಆಗುವಂತೆ ಕ್ರಮ ವಹಿಸುವ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳು ಸಮನ್ವಯದಿಂದ ಪಾರದರ್ಶಕವಾಗಿ ಕೆಲಸ ಮಾಡಬೇಕೆಂದು ಕರ್ನಾಟಕ ವಿಧಾನ ಮಂಡಳದ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷ ಎ.ಆರ್.ಕೃಷ್ಣಮೂರ್ತಿ ಅವರು ಹೇಳಿದರು.

ಅವರು ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಇನಾಂವೀರಾಪೂರ ಗ್ರಾಮದಲ್ಲಿ ನಡೆದ ದೌರ್ಜನ್ಯ ಪ್ರಕರಣದ ಕುರಿತು ಕರ್ನಾಟಕ ವಿಧಾನ ಮಂಡಳದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರೊಂದಿಗೆ ಕಂದಾಯ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಜರುಗಿಸಿ, ಮಾತನಾಡಿದರು.


ಉದಯವಾಹಿನಿ ಚಿತ್ರ

> ದಲಿತ ಸಮುದಾಯದ ಮೇಲೆ ನಡೆದಿರುವ ಈ ರೀತಿಯ ದೌರ್ಜನ್ಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ದೊರಕುವಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗುವಂತೆ, ಅಗತ್ಯವಿರುವ ಎಲ್ಲ ರೀತಿಯ ಸಹಾಯ ಹಾಗೂ ರಕ್ಷಣೆ ಒದಗಿಸಲಾಗುವುದು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಗ್ರಾಮ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಹಾಗೂ ಸಾಮಾಜಿಕ ಸೌಹಾರ್ದತೆ ಕಾಪಾಡಲು ಕ್ರಮ ಕೈಗೊಳ್ಳಬೇಕು. -ಎ.ಆರ್.ಕೃಷ್ಣಮೂರ್ತಿ

**ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚನೆ**

ಪ್ರಕರಣದ ಸಂಪೂರ್ಣ ಸತ್ಯಾಸತ್ಯತೆ ತಿಳಿದುಕೊಳ್ಳುವ ನಿಟ್ಟಿನಲ್ಲಿ ಸಂಬಂಧಪಟ್ಟ ಪೊಲೀಸ್ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದ ಅವರು, ಯಾವುದೇ ರೀತಿಯ ಲೋಪವಾಗದಂತೆ ತನಿಖೆಯನ್ನು ಪಾರದರ್ಶಕವಾಗಿ ನಡೆಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಪ್ರಕರಣಗಳು ಕಂಡುಬಂದಲ್ಲಿ, ಪೊಲೀಸ್ ಇಲಾಖೆಯು ಅವುಗಳನ್ನು ತಕ್ಷಣವೇ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಗಮನಕ್ಕೆ ತರಬೇಕು. ಅಂತಹ ಪ್ರಕರಣಗಳ ಬಗ್ಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ, ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಹೇಳಿದರು.

ಗ್ರಾಮಗಳಲ್ಲಿಯೂ ಹಾಗೂ ನಗರಗಳಲ್ಲಿಯೂ ಅಂತರ್ಜಾತಿ ವಿವಾಹಗಳ ಬಗ್ಗೆ ಜನರಿಗೆ ಅಗತ್ಯವಾದ ತಿಳುವಳಿಕೆ ನೀಡುವ ಮೂಲಕ ಜಾಗೃತಿ ಮೂಡಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಜಿಲ್ಲಾಡಳಿತವು ಸಮಗ್ರ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಸಭೆಯಲ್ಲಿ ಕರ್ನಾಟಕ ವಿಧಾನ ಮಂಡಳದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯರಾದ ಡಾ. ಡಿ.ತಿಮ್ಮಯ್ಯ, ಹೇಮಲತಾ ನಾಯಕ, ಎಫ್.ಹೆಚ್.ಜಕ್ಕಪ್ಪನವರ, ಕೃಷ್ಣ ನಾಯಕ, ಡಾ. ಚಂದ್ರು ಲಮಾಣಿ, ಸಮೃದ್ಧಿ ವಿ.ಮಂಜುನಾಥ ಅವರು ಮಾತನಾಡಿದರು.

# ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ರೈತನ ಹತ್ಯೆ

**ಇಸ್ಲಾಮಾಬಾದ್:** ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ ಬೆನ್ನಲ್ಲೇ, ಹುಲಿ ನೋಡಿ ನರಿ ಮೈ ಸುಟ್ಟುಕೊಂಡಂತೆ ಎನ್ನುವ ದಾಟಿಯಲ್ಲೀ ಪಾಕಿಸ್ತಾನವೂ ಸಹ ಅದೇ ಮಾರ್ಗ ಅನುಸರಿಸುತ್ತಿದೆ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ಯುವ ರೈತನೊಬ್ಬನ ಹತ್ಯೆ ನಡೆದಿದ್ದು, ಘಟನೆ ಖಂಡಿಸಿ ವ್ಯಾಪಕ ಪ್ರತಿಭಟನೆ ಭುಗಿಲೆದ್ದಿದೆ.

**ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ರೈತನ ಹತ್ಯೆ:** ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿರುವ ಬಡಿನ್ ಜಿಲ್ಲೆಯಲ್ಲಿ ಪ್ರಭಾವಿಯಾಗಿರುವ ಭೂಮಾಲೀಕ ಸರ್ಫರಾಜ್ ನಿಜಮಾನಿ ಭೂಮಿಯ ವಿಚಾರವಾಗಿ 25 ವರ್ಷದ ಕೈಲಾಶ್ ಕೋಲ್ಹಿ ಎಂಬ ಯುವ ಹಿಂದೂ ರೈತನನ್ನು ಗುಂಡಿಟ್ಟು ಕೊಂದಿದ್ದಾನೆ. ಪೊಲೀಸ್ ದೂರಿನ ಪ್ರತಿಯ ಪ್ರಕಾರ, ಜ.4ರಂದು ಬಡಿನ್ ಜಿಲ್ಲೆಯ ತಹಸಿಲ್ ತಲ್ಹಾರ್‌ವ್ಯಾಪ್ತಿಯ ಪೀರು ಲಶಾರಿಯ ಗೋಥ್ ದಹೋದಲ್ಲಿ ಈ ಹತ್ಯೆ ನಡೆದಿದ್ದು, ಹಗಲು ಹೊತ್ತಿನಲ್ಲಿ ಕೊಲ್ಹಿ ಸಮೀಪಿಸಿದ ದುಷ್ಕರ್ಮಿಗಳು ಪಾಯಿಂಟ್- ಬ್ಲಾಂಕ್‌ನಲ್ಲಿ ಎದೆಗೆ ಎರಡು ಗುಂಡುಗಳನ್ನು ಹಾರಿಸಿದ್ದು, ಇದರಿಂದಾಗಿ ಸ್ಥಳದಲ್ಲೇ ಆತ



ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿದೆ.

**ಹತ್ಯೆ ಖಂಡಿಸಿ ಪ್ರತಿಭಟನೆ:** ಈ ದಾರುಣ ಘಟನೆ ಬಳಿಕ ಸಿಂಧ್ ಪ್ರಾಂತ್ಯದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿ ಬಡಿನ್-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ ಮತ್ತು ಬಡಿನ್-ಥಾರ್ ಕಲ್ಲಿದ್ದಲು ರಸ್ತೆಯಲ್ಲಿ ಜನರು ಬೀದಿಗಳಿದು ಧರಣಿ ನಡೆಸಿತ್ತಿದ್ದಾರೆ. ಪ್ರತಿಭಟನಾಕಾರರು ಕೈಲಾಶ್ ಕೋಲ್ಹಿ ಹತ್ಯೆಗೆ ನ್ಯಾಯ ಸಿಗುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದಿದ್ದು, ಇದರಿಂದಾಗಿ ನೂರಾರು ವಾಹನಗಳು ಗಂಟೆಗಟ್ಟಲೆ ಸ್ಥಗಿತಗೊಂಡಿವೆ. ಮೂಲಗಳ ಪ್ರಕಾರ, ಪಾಕಿಸ್ತಾನದ ಹಿಂದೂಗಳು ಅತ್ಯಂತ ಹಿಂದುಳಿದ ಗುಂಪುಗಳಲ್ಲಿ ಒಂದಾಗಿರುವ ಪ್ರದೇಶದಲ್ಲಿ ಸ್ಥಳೀಯ ಸಮುದಾಯದ ಸಮಸ್ಯೆಗಳಲ್ಲಿ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಪ್ರತಿಪಾದಿಸುವುದರಲ್ಲಿ ಕೊಲ್ಹಿ ಹೆಸರುವಾಸಿಯಾಗಿದ್ದರು. ಈ ದಾಳಿಯು ಅವರ ಕ್ರಿಯಾಶೀಲತೆ ಪ್ರದೇಶದಲ್ಲಿನ ವಿಶಾಲ ಧಾರ್ಮಿಕ ಉದ್ವಿಗ್ನತೆಗೆ ಸಂಬಂಧಿಸಿದೆ ಎಂದು ಮಾಧ್ಯಮ ಸಂಸ್ಥೆಯೊಂದು ವರದಿಮಾಡಿದೆ. ಅಲ್ಲದೆ, ಇದು ಕೇವಲ ಒಬ್ಬ ವ್ಯಕ್ತಿಯ ಕೊಲೆಯಲ್ಲ, ಬದಲಾಗಿ ಮಾನವೀಯತೆ, ನ್ಯಾಯ ಮತ್ತು ಸಿಂಧ್‌ನಲ್ಲಿ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳು, ಸುರಕ್ಷತೆಯ ಮೇಲಿನ ದಾಳಿಯಾಗಿದೆ. ಅಪರಾಧಿಗಳನ್ನು ಕಾನೂನಿನ ಮುಂದೆ ತಂದು ನ್ಯಾಯ ದೊರಕಿಸುವವರೆಗೆ ನಮ್ಮ ಹೋರಾಟ ಮುಂದುವರಿಯುತ್ತದೆ ಎಂದು ತಿಳಿಸಿದ್ದಾರೆ. ಈ ಘಟನೆ ಈಗಾಗಲೇ ಅಲ್ಪಸಂಖ್ಯಾತರು ಪಾಕಿಸ್ತಾನದಲ್ಲಿ ಸಾಕಷ್ಟು ದೌರ್ಜನ್ಯಕ್ಕೆ ಒಳಗಾಗುತ್ತಿದ್ದು, ಬಾಂಗ್ಲಾದೇಶದಲ್ಲಿ ಹೆಚ್ಚುತ್ತಿರುವ ಅಲ್ಪಸಂಖ್ಯಾತರ ನರಮೇಧವನ್ನು ಪ್ರೇರಣೆಯಾಗಿ ಪಡೆದುಕೊಂಡು ಮತ್ತಷ್ಟು ಉದ್ವಿಗ್ನತೆ ಸೃಷ್ಟಿಸುವ ಸಾಧ್ಯತೆ ಇದ್ದು ಆತಂಕಕ್ಕೆ ಕಾರಣವಾಗಿದೆ.

### ಕೈಲಾಶ್ ರಕ್ತ ನ್ಯಾಯ ಬೇಡುತ್ತಿದೆ?

**ಸದ್ಯ ಈ ಹತ್ಯೆ ಖಂಡಿಸಿ ಪಾಕಿಸ್ತಾನ ದರವರ್ ಇತ್ತೆಹಾದ್‌ನ ಅಧ್ಯಕ್ಷ ಶಿವ ಕಚ್ಚಿ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಈ ಘಟನೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಶಿವ ಕಚ್ಚಿ ಮಾತನಾಡಿದ್ದು ಅಮಾಯಕ ಹಿಂದೂ ಯುವಕ ಕೈಲಾಶ್ ಕೊಲ್ಹಿಯ ಕ್ರೂರ ಹತ್ಯೆಯನ್ನು ನಾವು ಬಲವಾಗಿ ಖಂಡಿಸುತ್ತೇವೆ. ಕೈಲಾಶ್ ಕೊಲ್ಹಿಯ ರಕ್ತವು ನಮ್ಮೆಲ್ಲರಿಂದ ನ್ಯಾಯವನ್ನು ಬೇಡುತ್ತಿದೆ. ಕೊಲೆಗಾರನನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿ ಭಾನುವಾರ ಬಡಿನ್‌ನ ಜಿಲ್ಲಾಧಿಕಾರಿ ಕಚೇರಿಯ ಮುಂದೆ ನಡೆಯಲಿರುವ ಪ್ರತಿಭಟನಾ ಧರಣಿ ಸತ್ಯಾಗ್ರಹವನ್ನು ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ ಎಂದು ತಿಳಿಸಿದ್ದಾರೆ.**

## ವಾರಾಣಸಿಯಲ್ಲಿ ಬುರ್ಖಾ, ಮುಖಗವಸು ಹಾಕಿದವರಿಗೆ ಆಭರಣ ಮಾರಲ್ಲ: ವ್ಯಾಪಾರಿಗಳು

**ವಾರಾಣಸಿ:** ಭದ್ರತಾ ಕಾರಣಗಳನ್ನು ಉಲ್ಲೇಖಿಸಿ ಉತ್ತರ ಪ್ರದೇಶದ ಆಭರಣ ವ್ಯಾಪಾರಿಗಳ ಸಂಘದ ವಾರಾಣಸಿಯ ಸ್ಥಳೀಯ ಘಟಕವು ಬುರ್ಖಾ, ದುಪಟ್ಟಾ, ಮುಖಗವಸು ಅಥವಾ ಹೆಲ್ಮೆಟ್ ಧರಿಸಿದ ಗ್ರಾಹಕರಿಗೆ ಆಭರಣ ಮಾರಾಟ ಮಾಡುವುದನ್ನು ನಿಷೇಧಿಸಿದೆ. ಹಲವಾರು ಜಿಲ್ಲೆಗಳಲ್ಲಿ ನಡೆದ ಕಳ್ಳತನ, ದರೋಡೆ ಮತ್ತು ವಂಚನೆಯ ಘಟನೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಮುಖ ಮುಚ್ಚಿಕೊಂಡಿರುವ ಗ್ರಾಹಕರಿಗೆ ನಾವು ಆಭರಣಗಳನ್ನು ಮಾರಾಟ ಮಾಡುವುದಿಲ್ಲ. ಮುಖ ಮುಚ್ಚಿಕೊಂಡಿರುವ ವ್ಯಕ್ತಿ ಅಪರಾಧ ಮಾಡಿದರೆ, ಅವರ ಗುರುತನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಇದಕ್ಕಾಗಿ, ನಾವು ನಮ್ಮ ಅಂಗಡಿಗಳ ಮುಂದೆ ಪೋಸ್ಟರ್‌ಗಳನ್ನು ಹಾಕಿದ್ದೇವೆ. ಅದರಲ್ಲಿ ಬುರ್ಖಾ, ದುಪಟ್ಟಾ, ಮುಖಗವಸು, ಹೆಲ್ಮೆಟ್ ಧರಿಸಿ ಅಂಗಡಿಗೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ನಾವು ನಮ್ಮ ಅಂಗಡಿಗಳ ಸುರಕ್ಷತೆಯನ್ನು ಮಾತ್ರ ಬಯಸುತ್ತೇವೆ ಎಂದು ಸಿಂಗ್ ಹೇಳಿದರು. ಹಿಜಾಬ್ ಧರಿಸಿ ಆಭರಣ ಅಂಗಡಿಗೆ ಬರುವ ಗ್ರಾಹಕರು, ಅಂಗಡಿಗೆ ಪ್ರವೇಶಿಸುವಾಗ ಹಿಜಾಬ್ ತೆಗೆದು ಬರಬೇಕು ಎಂದಿದ್ದಾರೆ. ಯುಪಿಜೆಎ ಅಧ್ಯಕ್ಷ ಸತ್ಯ ನಾರಾಯಣ್ ಸೇಠ್ ಮಾತನಾಡಿ, ವಾರಣಾಸಿಯಲ್ಲಿ ಸಾವಿರಾರು ಆಭರಣ ಅಂಗಡಿಗಳಿವೆ. ಝೂನ್ಸಿ ಸೇರಿದಂತೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಆಭರಣ ವ್ಯಾಪಾರಿಗಳ ಅಂಗಡಿಗಳ ಮುಂದೆ ಇದೇ ರೀತಿಯ ಪೋಸ್ಟರ್‌ಗಳನ್ನು ಹಾಕಲಾಗಿದೆ ಎಂದು ತಿಳಿಸಿದ್ದಾರೆ. ಜನರು ಮುಖ ಮುಚ್ಚಿಕೊಳ್ಳುವುದರಿಂದ ಎಲ್ಲರೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಸಂಘವು ಯಾವುದೇ ವ್ಯಕ್ತಿಯ ಧರ್ಮವನ್ನು ವಿರೋಧಿಸುತ್ತಿಲ್ಲ. ಇದನ್ನು ಆಭರಣ ವ್ಯಾಪಾರಿಗಳ ಸ್ವಂತ ಸುರಕ್ಷತೆಗಾಗಿ ಮಾತ್ರ ಮಾಡುತ್ತಿದ್ದೇವೆ. ಮುಸ್ಲಿಂ ಗ್ರಾಹಕರು ಬುರ್ಖಾ ಧರಿಸಿ ಬರಬಹುದು. ಆದರೆ, ಅವರ ಗುರುತನ್ನು ದೃಢೀಕರಿಸಲು ಅಂಗಡಿಗೆ ಪ್ರವೇಶಿಸುವ ಮೊದಲು ಅವರು ಅದನ್ನು ತೆಗೆದುಹಾಕಬೇಕು ಎಂದಿದ್ದಾರೆ. ಇಲ್ಲಿನ ಲೋಢಾ ಪ್ರದೇಶದ ಆಭರಣ ವ್ಯಾಪಾರಿ ಶಾಹಿದ್, ಬುರ್ಖಾ ಧರಿಸಿದ ಗ್ರಾಹಕರಿಗೆ ಪ್ರವೇಶ ನಿರಾಕರಿಸುವುದು ತಪ್ಪು ಎಂದು ಹೇಳಿದರು. ಅಂತಹ ನಿರಾಕರಣೆ ಗ್ರಾಹಕರ ಸಂಖ್ಯೆಯನ್ನು ತಗ್ಗಿಸುತ್ತದೆ. ಬುರ್ಖಾ ಧರಿಸಿದ ಮಹಿಳೆಗೆ ಅದನ್ನು ತೆಗೆದುಹಾಕುವಂತೆ ಕೇಳುವುದು ಅವಮಾನಕರವಾಗಿರುತ್ತದೆ ಎಂದಿದ್ದಾರೆ. ಬಿಹಾರದ ಮುಖ್ಯಮಂತ್ರಿ ಮಹಿಳೆಯ ಬುರ್ಖಾ ಎಳೆದ ಘಟನೆಯಂತೆ ಬುರ್ಖಾ ಧರಿಸಿ ಮಾಡಿದ ಕಳ್ಳತನವು ಒಂದು ಅಪವಾದವಾಗಿದೆ ಎಂದು ಅವರು ಹೇಳಿದ್ದಾರೆ.



# ತೈಲ ಹಡಗನ್ನು ಸೀಜ್ ಮಾಡಿದ ಅಮೆರಿಕ

## ಇದು ಕಳೆದೊಂದು ವಾರದಲ್ಲಿ ಅಮೆರಿಕ ವಶಪಡಿಸಿಕೊಂಡ ಐದನೇ ಹಡಗು



**ವಾಷಿಂಗ್ಟನ್:** ವೆನೆಜುವೆಲಾದಿಂದ ಹೊರಟಿದ್ದ ತೈಲ ಟ್ಯಾಂಕರೊಂದನ್ನು ಅಮೆರಿಕ ವಶಕ್ಕೆ ಪಡೆದಿದೆ. ಈ ಹಡಗು ಅಮೆರಿಕದ ನೌಕಾ ದಿಗ್ಬಂಧನವನ್ನು ಮುರಿಯಲು ಯತ್ನಿಸಿತ್ತು. ಇದರ ಬೆನ್ನಿಗೇ ಒಂದು ಸಂದೇಶ ರವಾನಿಸಿರುವ ಅಮೆರಿಕ, ವೆನೆಜುವೆಲಾಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಎಲ್ಲಾ ತೈಲ ಹಡಗುಗಳನ್ನು ವಶಕ್ಕೆ ಪಡೆಯಲಾಗುತ್ತದೆ ಎಂದು ವಿಶ್ವದ ಎಲ್ಲಾ ರಾಷ್ಟ್ರಗಳಿಗೆ ಸೂಚನೆಯನ್ನು ನೀಡಿದೆ.

ಇತ್ತೀಚೆಗೆ ವಶಪಡಿಸಿಕೊಂಡ ಹಡಗಿನ ಹೆಸರು 'ಓಲಿನಾ'. ಅಮೆರಿಕದ ಗೃಹಭದ್ರತಾ ಕಾರ್ಯದರ್ಶಿ ಕ್ರಿಸ್ಟಿ ನೋಮ್ ಅವರು ಇದನ್ನು ಇನ್ನೊಂದು 'ಘೋಸ್ಟ್ ಫ್ಲೀಟ್' ಟ್ಯಾಂಕರ್ ಹಡಗು. ಇದು ನಿರ್ಬಂಧಿತ ತೈಲವನ್ನು ಸಾಗಿಸುತ್ತಿದೆ ಎಂದು ಶಂಕಿಸಲಾಗಿದೆ ಎಂದು ಹೇಳಿದ್ದಾರೆ. ಇದು ಅಮೆರಿಕದ ಪಡೆಗಳಿಂದ ತಪ್ಪಿಸಿಕೊಳ್ಳಲು ವೆನೆಜುವೆಲಾದಿಂದ ಹೊರಟಿತ್ತು ಎಂದು ಅವರು ತಿಳಿಸಿದ್ದಾರೆ.

**ಇಡೀ ಜಗತ್ತಿಗೆ ಸಂದೇಶ ರವಾನೆ**

ಈ 'ಘೋಸ್ಟ್ ಫ್ಲೀಟ್' ಹಡಗುಗಳು ನ್ಯಾಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವೆನೆಜುವೆಲಾದ ಹಡಗು ಎಂದು ಹೇಳಿಕೊಳ್ಳುವ ಮೂಲಕ ನಿರ್ಬಂಧಿತ ತೈಲವನ್ನು ಸಾಗಿಸಲು ಇನ್ನು ಸಾಧ್ಯವಿಲ್ಲ ಎಂದು ನೋಮ್ ಅವರು 'ಎಕ್ಸ್' ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಈ ಪ್ರದೇಶದಲ್ಲಿ ಅಮೆರಿಕದ ಪಡೆಗಳಿಗೆ ಜವಾಬ್ದಾರರಾಗಿರುವ ಯುಎಸ್ ಸದರನ್ ಕಮಾಂಡ್ ಪ್ರಕಾರ, ಅಮೆರಿಕದ ನೌಕಾಪಡೆ ಮತ್ತು ಮೆರೈನ್ಸ್ ಕೂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದವು. ವಿಶ್ವದ ಅತಿದೊಡ್ಡ ವಿಮಾನವಾಹಕ ನೌಕೆಯಾದ ಯುಎಸ್ಎಸ್ ಜೆರಾಲ್ಡ್ ಆರ್. ಫೋರ್ಡ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿತ್ತೆಂದು ವರದಿಗಳು ಹೇಳಿವೆ.

**ವೆನೆಜುವೆಲಾ ತೈಲದ ಮೇಲೆ ಅನಿರ್ದಿಷ್ಟಾವಧಿ ನಿಯಂತ್ರಣ ಘೋಷಿಸಿದ ಅಮೆರಿಕ:** ವೆನೆಜುವೆಲಾ ಅಧ್ಯಕ್ಷರ ಬಂಧನದ ಬೆನ್ನಲ್ಲೇ ಅಮೆರಿಕ ಆ ದೇಶದ ತೈಲ ರಫ್ತಿನ ಮೇಲೆ ಅನಿರ್ದಿಷ್ಟಾವಧಿ ನಿಯಂತ್ರಣ ಹೇರಿದ್ದು, ಅದರ ಲಾಭವನ್ನು ತನ್ನ ಖಜಾನೆಗೆ ತುಂಬಿಸಿಕೊಳ್ಳಲು ಮುಂದಾಗಿದೆ. ಮಾನವನ ಅತಿಹಾಸೆಗೆ ಮಿತಿಯಿಲ್ಲ ಎಂಬಂತೆ ಅಮೆರಿಕ ರೂಪಿಸಿರುವ ಈ ತೈಲ ನೀತಿಯು ಜಾಗತಿಕ ಮಟ್ಟದಲ್ಲಿ ತೀವ್ರ ವಿರೋಧ ಎದುರಿಸುವ ಸಾಧ್ಯತೆಯಿದೆ. ಒಂದು ರಾಷ್ಟ್ರದ ಸಂಪನ್ಮೂಲವನ್ನು ತನ್ನ ಹಿತಾಸಕ್ತಿಗೆ ಬಳಸಿಕೊಳ್ಳುತ್ತಿರುವ ಅಮೆರಿಕದ ಈ ನಿರ್ಧಾರವು ಅಂತರಾಷ್ಟ್ರೀಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ.

### ಅಮೆರಿಕಕ್ಕೆ ಜಗತ್ತೇ ತನ್ನ ಸಾಮಂತರಾಗಬೇಕು ಎನ್ನುವ ಮಹದಾಸೆ


**ವೆನೆಜುವೆಲಾ ಮೇಲೆ ವೈಮಾನಿಕ ದಾಳಿ ನಡೆಸಿ ಅಲ್ಲಿನ ಅಧ್ಯಕ್ಷರನ್ನು ಸೆರೆಹಿಡಿದ ಅಮೆರಿಕದ ಕ್ರಮಕ್ಕೆ ಜಾಗತಿಕವಾಗಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ವಿಶ್ವಸಂಸ್ಥೆ ಮತ್ತು ಅಂತರಾಷ್ಟ್ರೀಯ ನ್ಯಾಯಾಲಯದ ನಿಯಮಗಳನ್ನು ಕಡೆಗಣಿಸಿ ಅಮೆರಿಕ ಏಕಪಕ್ಷೀಯವಾಗಿ ವರ್ತಿಸುತ್ತಿದೆ ಎಂಬ ಟೀಕೆಗಳು ಕೇಳಿಬರುತ್ತಿವೆ. ಈ ಹಿಂದೆಯೂ ಅಮೆರಿಕ ಇತರ ದೇಶಗಳ ಆಂತರಿಕ ವಿಷಯಗಳಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ಮಾಡಿದ ಉದಾಹರಣೆಗಳು ಸಾಕಷ್ಟಿವೆ. ಪ್ರಸ್ತುತ ಈ ಬೆಳವಣಿಗೆಯು ಅಮೆರಿಕದ ದರ್ಪದ ನೀತಿಗೆ ಸಾಕ್ಷಿಯಾಗಿದೆ.**

### ಭಾರತಕ್ಕೆ ವೆನೆಜುವೆಲಾ ಆಯಿಲ್ ಮಸಾಜ್

**ವೆನೆಜುವೆಲಾದ ತೈಲ ರಫ್ತಿನ ಮೇಲೆ ನಿಯಂತ್ರಣ ಸಾಧಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಆ ತೈಲವನ್ನು ಜಾಗತಿಕವಾಗಿ ಮಾರಾಟ ಮಾಡಲು ಹೊಸ ಯೋಜನೆ ರೂಪಿಸಿದ್ದಾರೆ. ಇದರ ಭಾಗವಾಗಿ ಭಾರತಕ್ಕೆ ತೈಲ ಖರೀದಿಯ ಆಹ್ವಾನ ನೀಡಲಾಗಿದ್ದು, ಮುಖೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಇದನ್ನು ಒಪ್ಪಿಕೊಂಡಿದೆ. ವೆನೆಜುವೆಲಾದ ರಾಜಕೀಯ ಬಿಕ್ಕಟ್ಟಿನ ಲಾಭ ಪಡೆಯುತ್ತಿರುವ ಟ್ರಂಪ್, ಅಲ್ಲಿನ ತೈಲ ವ್ಯವಹಾರವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಈ ಕ್ರಮವು ಅಮೆರಿಕದ ವ್ಯಾಪಾರೀ ಹಿತಾಸಕ್ತಿಯನ್ನು ಎತ್ತಿ ತೋರಿಸುತ್ತಿದೆ.**

# ಬಿಜೆಪಿ ಮುಸ್ಲಿಮರ ವಿರೋಧಿಯಲ್ಲ ; ನಿತಿನ್ ಗಡ್ಕರಿ

**ನಾಗ್ಪುರ:** ಬಿಜೆಪಿಯ ಸಿದ್ಧಾಂತವು ತನ್ನ ಅನುಯಾಯಿಗಳಿಗೆ ಜಾತಿ, ಧರ್ಮವನ್ನು ಲೆಕ್ಕಿಸದೆ ಎಲ್ಲರಿಗೂ ಕೆಲಸ ಮಾಡುವಂತೆ ಕಲಿಸುತ್ತದೆ, ಅದು ಮುಸ್ಲಿಮರ ವಿರುದ್ಧವಲ್ಲ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಜ. 15 ರಂದು ನಡೆಯಲಿರುವ ನಾಗ್ಪುರ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ-ಶಿವಸೇನೆ ಮೈತ್ರಿಕೂಟ ಪೂರ್ಣ ಬಹುಮತದೊಂದಿಗೆ ಗೆದ್ದರೆ ಜನರ ಆಶಯಗಳು ಮತ್ತು ಕನಸುಗಳು ಈಡೇರುತ್ತವೆ ಮತ್ತು ಅವರೇ ಅಭ್ಯರ್ಥಿಗಳ ಕಾರ್ಯಕ್ಷಮತೆಯನ್ನು ಖಚಿತಪಡಿಸುತ್ತಾರೆ ಎಂದು ಗಡ್ಕರಿ ನಗರದಲ್ಲಿ ಪ್ರಚಾರ ನಡೆಸುತ್ತಾ ಹೇಳಿದರು. ಮೂರು ಸಾರ್ವಜನಿಕ ಸಭೆಗಳನ್ನು ನಡೆಸಿದ ಹಿರಿಯ ಬಿಜೆಪಿ ನಾಯಕ, ತಮ್ಮ ಪಕ್ಷದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ನಾವು ಮುಸ್ಲಿಮರನ್ನು ವಿರೋಧಿಸುವುದಿಲ್ಲ, ಆದರೆ ನಾವು ಭಯೋತ್ಪಾದಕರು, ಪಾಕಿಸ್ತಾನವನ್ನು ವಿರೋಧಿಸುತ್ತೇವೆ. ಈ ದೇಶಕ್ಕಾಗಿ ತ್ಯಾಗ ಮಾಡುವ ಮುಸ್ಲಿಮರು ಹಿಂದೂಗಳಂತೆಯೇ ನಮಗೆ ಪ್ರಿಯರು. ಒಬ್ಬರು ಮಸೀದಿ, ಗುರುದ್ವಾರ ಅಥವಾ ಬೌದ್ಧ ವಿಹಾರಕ್ಕೆ ಹೋಗಬಹುದು. ಆದರೆ, ನಮ್ಮ ರಕ್ತ ಒಂದೇ ಎಂದು ನಾವು ಹೇಳುತ್ತೇವೆ, ನಾವು ಭಾರತೀಯರು ಮತ್ತು ನಾವು ಎಲ್ಲರಿಗೂ ಕೆಲಸ ಮಾಡುತ್ತೇವೆ ಎಂದು ಕೇಂದ್ರ ಸಚಿವರು ಹೇಳಿದರು.



ಬಿಜೆಪಿ-ಶಿವಸೇನೆ ಮೈತ್ರಿಕೂಟ ಪೂರ್ಣ ಬಹುಮತದೊಂದಿಗೆ ಆಯ್ಕೆಯಾದರೆ ನಿಮ್ಮ ಎಲ್ಲಾ ಆಶಯಗಳು, ಆಸೆಗಳು, ಕನಸುಗಳು ಈಡೇರುತ್ತವೆ ಎಂದು ಅವರು ಹೇಳಿದರು. ಬಿಜೆಪಿ ಅಭ್ಯರ್ಥಿಗಳ ಪರವಾಗಿ ನಾನು ಖಾತರಿದಾರನಾಗಿರುತ್ತೇನೆ ಎಂದು ಗಡ್ಕರಿ ಅವರು, ಮಹಾರಾಷ್ಟ್ರ ಸರ್ಕಾರ ಕೈಗೊಂಡ ಮೂಲಸೌಕರ್ಯ ಯೋಜನೆಗಳನ್ನು ಪಟ್ಟಿ ಮಾಡುತ್ತಾ ಹೇಳಿದರು.

ಉತ್ತರ ನಾಗ್ಪುರದಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂಸಾಚಾರ ನಡೆಯುತ್ತದೆ ಎಂದು ಕೆಲವು ವಿರೋಧ ಪಕ್ಷದ ನಾಯಕರು ತಪ್ಪು ಮಾಹಿತಿಯನ್ನು ಹರಡಿದ್ದಾರೆ ಎಂದು ಹೇಳಿದರು. ಆದರೆ ಬಿಜೆಪಿಯ ಸಿದ್ಧಾಂತವು ತನ್ನ ಕಾರ್ಯಕರ್ತರಿಗೆ ಯಾವುದೇ ಪಕ್ಷಪಾತವಿಲ್ಲದೆ ಎಲ್ಲರಿಗೂ ಕೆಲಸ ಮಾಡಲು ಕಲಿಸುತ್ತದೆ ಎಂದು ನಾಗ್ಪುರ ಸಂಸದ ಹೇಳಿದರು.

ಅವರು ಬಿಜೆಪಿಯ ಕಟ್ಟಾ ಕಾರ್ಯಕರ್ತ ಮತ್ತು ಅದರ ಸಿದ್ಧಾಂತದಲ್ಲಿ ನಂಬಿಕೆ ಇಡುತ್ತಾರೆ, ಆದರೆ ಅವರು ತಮಗೆ ಮತ ಹಾಕಿದವರ, ಮತ ಚಲಾಯಿಸದವರ ಚುನಾಯಿತ ಪ್ರತಿನಿಧಿ ಎಂದು ಗಡ್ಕರಿ ಹೇಳಿದರು, ಜಾತಿ, ಧರ್ಮ ಮತ್ತು ಭಾಷೆಯನ್ನು ಲೆಕ್ಕಿಸದೆ ಅವರು ಎಲ್ಲರಿಗೂ ಕೆಲಸ ಮಾಡುತ್ತಾರೆ ಎಂದು ಹೇಳಿದರು. ಕೇಸರಿ ಪಕ್ಷವು ಸಂವಿಧಾನವನ್ನು ಬದಲಾಯಿಸಲು ಬಯಸಿದೆ ಎಂಬ ತಪ್ಪು ಮಾಹಿತಿಯನ್ನು ಅವರು ತಳ್ಳಿಹಾಕಲು ಪ್ರಯತ್ನಿಸಿದರು. ಸಂವಿಧಾನವನ್ನು 80 ಬಾರಿ ಬದಲಾಯಿಸಲು ಪ್ರಯತ್ನಿಸಿದ್ದು ಕಾಂಗ್ರೆಸ್ ಎಂದರು.

## ಗ್ರೋಕ್ ಎಐಗೆ ತಾತ್ಕಾಲಿಕ ನಿರ್ಬಂಧ

**ಜಕಾರ್ತ:** ಉದ್ಯಮಿ ಇಲಾನ್ ಮಸ್ಕ್ ಅವರ ಗ್ರೋಕ್ ಚಾಟ್‌ಬಾಟ್‌ಗೆ ಇಂಡೋನೇಷ್ಯಾ ಸರ್ಕಾರ ತಾತ್ಕಾಲಿಕ ನಿರ್ಬಂಧ ಹೇರಿದೆ. ಕೃತಕ ಬುದ್ಧಿಮತ್ತೆ ತಂತ್ರಾಂಶ ಸೃಜಿಸುವ ಅಶ್ಲೀಲ ವಿಷಯಗಳಿಂದ ಉಂಟಾಗಬಹುದಾದ ಅಪಾಯವನ್ನು ಅರಿತು ಈ ಕ್ರಮ ಕೈಗೊಳ್ಳಲಾಗಿದೆ.

ಯುರೋಪ್‌ನಿಂದ ಏಷ್ಯಾವರೆಗೂ ಈ ವಿಷಯವಾಗಿ ಟೀಕೆಗಳನ್ನು ವ್ಯಕ್ತಪಡಿಸಿದ್ದರು. ತುಂಡುಡುಗೆ ತೊಟ್ಟ ಮಕ್ಕಳ ಚಿತ್ರಗಳು ಸೇರಿದಂತೆ ಲೈಂಗಿಕ ಆಸಕ್ತಿಯ ವಿಚಾರಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ, ಸುರಕ್ಷತಾ ದೋಷಗಳನ್ನು ಸರಿಪಡಿಸಲಾಗುತ್ತಿದೆ. ಚಿತ್ರಗಳನ್ನು ಸೃಜಿಸುವ, ಎಡಿಟ್ ಮಾಡುವ ಅವಕಾಶವನ್ನು ಚಂದಾದಾರರಿಗೆ ಮಾತ್ರವೇ ಸೀಮಿತಗೊಳಿಸುವುದಾಗಿ 'ಗ್ರೋಕ್' ಎಐ ಕಂಪನಿ xAI ತಿಳಿಸಿದೆ ಆದಾಗ್ಯೂ, ಇಂಡೋನೇಷ್ಯಾದಲ್ಲಿ ನಿರ್ಬಂಧ ಹೇರಲಾಗಿದೆ. ಈ ಕುರಿತು ಅಲ್ಲಿನ ಸಂವಹನ ಮತ್ತು ಡಿಜಿಟಲ್ ಸಚಿವ ಮೀತ್ಯಾ ಹಫೀದ್ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಸರ್ಕಾರದ ಅನುಮತಿ ಇಲ್ಲದೆ, ಡೀಪ್ ಫೇಕ್ ತಂತ್ರಜ್ಞಾನದ ಮೂಲಕ ಅಶ್ಲೀಲ ಚಿತ್ರ, ವಿಡಿಯೊಗಳನ್ನು ರೂಪಿಸುವ ಅಭ್ಯಾಸಗಳನ್ನು ಮಾನವ ಹಕ್ಕು, ವ್ಯಕ್ತಿ ಘನತೆ, ಡಿಜಿಟಲ್ ವೇದಿಕೆಗಳಲ್ಲಿ ಸುರಕ್ಷತೆಯ ಗಂಭೀರ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ. ಈ ವಿಚಾರವಾಗಿ ಚರ್ಚಿಸುವಂತೆ x ಅಧಿಕಾರಿಗಳಿಗೂ ಸಮನ್ಸ್ ನೀಡಿದೆ. ಗ್ರೋಕ್ ಬಳಸಿಕೊಂಡು ಕಾನೂನುಬಾಹಿರ ವಿಚಾರಗಳನ್ನು ರೂಪಿಸಲು ಯಾರಾದರೂ ಪ್ರಯತ್ನಿಸಿದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಮಸ್ಕ್ 'ಎಕ್ಸ್' ವೇದಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

# ಇಒಎಸ್ -ಎನ್‌ಒನ್ ಉಪಗ್ರಹ ಉಡಾವಣೆಗೆ ಇಸ್ರೋ ಸಜ್ಜು

**ಚೆನ್ನೈ:** ಹೊಸ ವರ್ಷದ ಆರಂಭದಲ್ಲಿ ತನ್ನ ಮೊದಲ ಕಾರ್ಯಾಚರಣೆಯಲ್ಲಿ ಇಸ್ರೋ ಜ. 12 ರಂದು ಪಿಎಸ್‌ಎಲ್‌ವಿ ಸಿ 62 ಮಿಷನ್ ಮೂಲಕ ಇಒಎಸ್-ಎನ್ 1 ಭೂ ವೀಕ್ಷಣಾ ಉಪಗ್ರಹ, ಇತರ 14 ಪೇಲೋಡ್‌ಗಳನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಲು ನಿರ್ಧರಿಸಿದೆ. ಇಸ್ರೋದ ವಾಣಿಜ್ಯ ವಿಭಾಗವಾದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಕೈಗೊಂಡಿರುವ 14 ಇತರ ಸಹ-ಪ್ರಯಾಣಿಕ ಉಪಗ್ರಹಗಳು ದೇಶೀಯ ಮತ್ತು ವಿದೇಶಿ ಗ್ರಾಹಕರಿಗೆ ಸೇರಿವೆ. ವಾಹನ ಮತ್ತು ಉಪಗ್ರಹಗಳ ಏಕೀಕರಣ ಪೂರ್ಣಗೊಂಡಿದೆ ಮತ್ತು ಉಡಾವಣಾ ಪೂರ್ವ ಪರಿಶೀಲನೆಗಳು ಪ್ರಗತಿಯಲ್ಲಿವೆ. ಪಿಎಸ್‌ಎಲ್‌ವಿ-ಸಿ 62 ಮಿಷನ್ ಜನವರಿ 12 ರಂದು ಬೆಳಿಗ್ಗೆ 10.17 ಗಂಟೆಗೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿರುವ ಮೊದಲ ಉಡಾವಣಾ ಪ್ಯಾಡ್‌ನಿಂದ ಉಡಾವಣೆಗೊಳ್ಳಲು



ಉದ್ದೇಶಿಸಲಾಗಿದೆ ಎಂದು ಇಸ್ರೋ ತಿಳಿಸಿದೆ. ಪಿಎಸ್‌ಎಲ್‌ವಿಯ 64ನೇ ಹಾರಾಟವಾಗಿರುವ ಈ ಕಾರ್ಯಾಚರಣೆಗಾಗಿ ಜನವರಿ 11 ರಂದು 25 ಗಂಟೆಗಳ ಕೌಂಟ್‌ಡೌನ್ ಪ್ರಾರಂಭವಾಗಲಿದೆ. ಭೂ ವೀಕ್ಷಣಾ ಉಪಗ್ರಹವನ್ನು ಥೈಲ್ಯಾಂಡ್ ಮತ್ತು ಯುನೈಟೆಡ್ ಕಿಂಗ್‌ಡಮ್ ಜಂಟಿಯಾಗಿ ನಿರ್ಮಿಸಿವೆ ಎಂದು ಇಸ್ರೋ ತಿಳಿಸಿದೆ. ಜನವರಿ 12 ರಂದು ಬೆಳಿಗ್ಗೆ 10.17 ಕ್ಕೆ ಉಡಾವಣೆಯಾದ ನಂತರ ಇಡೀ ಕಾರ್ಯಾಚರಣೆಯು ಎರಡು ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುವ ನಿರೀಕ್ಷೆಯಿದೆ. ಥೈಲ್ಯಾಂಡ್ ಮತ್ತು ಯುನೈಟೆಡ್ ಕಿಂಗ್‌ಡಮ್ ನಿರ್ಮಿಸಿದ ಪ್ರಾಥಮಿಕ ಪೇಲೋಡ್ ಭೂಮಿಯ ವೀಕ್ಷಣಾ ಉಪಗ್ರಹ, ಇತರ 13 ಸಹ-ಪ್ರಯಾಣಿಕ ಉಪಗ್ರಹಗಳೊಂದಿಗೆ ಪಿಗ್ಗಿಬ್ಯಾಕ್ ಹಾರುತ್ತದೆ, ಇವುಗಳನ್ನು ಉಡಾವಣೆಯಾದ ಸುಮಾರು 17 ನಿಮಿಷಗಳ ನಂತರ ಉದ್ದೇಶಿತ ಸೂರ್ಯ-ಸಿಂಕ್ರೊನಸ್ ಕಕ್ಷೆಗೆ ನಿಯೋಜಿಸಲಾಗುವುದು.

ಆದಾಗ್ಯೂ, ರಾಕೆಟ್‌ನ ನಾಲ್ಕನೇ ಹಂತದ ಬೇರ್ಪಡಿಕೆ ಮತ್ತು ಸ್ಪ್ಯಾನಿಷ್ ಸ್ಟಾರ್ಟ್‌ಅಪ್‌ಗೆ ಸೇರಿದ ಕೆಸ್ಟ್ರೆಲ್ ಇನಿಶಿಯಲ್ ಟೆಕ್ನಾಲಜಿ ಡೆಮಾನ್‌ಸ್ಟ್ರೇಟರ್ ಕ್ಯಾಪ್ಸುಲ್‌ನ ಪ್ರದರ್ಶನವು ಉಡಾವಣೆಯ ನಂತರ 2 ಗಂಟೆಗಳಿಗಿಂತ ಹೆಚ್ಚು ಸಮಯದ ನಂತರ ನಡೆಯುವ ನಿರೀಕ್ಷೆಯಿದೆ. ಕ್ಯಾಪ್ಸುಲ್ ಅನ್ನು ಭೂಮಿಯ ವಾತಾವರಣಕ್ಕೆ ಮರುಪ್ರವೇಶಿಸಲು ಪ್ರದರ್ಶಿಸಲು ವಿಜ್ಞಾನಿಗಳು ರಾಕೆಟ್‌ನ ನಾಲ್ಕನೇ ಹಂತವನ್ನು ಮರುಪ್ರಾರಂಭಿಸುತ್ತಾರೆ ಎಂದು ಹೇಳಿದೆ.

ಇದು ಸಂಭವಿಸಲು, ವಿಜ್ಞಾನಿಗಳು ನಾಲ್ಕನೇ ಹಂತವನ್ನು ಡಿ-ಬೂಸ್ಟ್ ಮಾಡಲು, ಮರು-ಪ್ರವೇಶ ಪಥವನ್ನು ಪ್ರವೇಶಿಸಲು ಮರು-ಪ್ರಾರಂಭಿಸುತ್ತಾರೆ ಮತ್ತು ಇದನ್ನು ಕ್ಯಾಪ್ಸುಲ್ ಬೇರ್ಪಡಿಕೆ ಅನುಸರಿಸುತ್ತದೆ. 4 ಹಂತ ಮತ್ತು ಕ್ಯಾಪ್ಸುಲ್ ಎರಡೂ ಭೂಮಿಯ ವಾತಾವರಣವನ್ನು ಮತ್ತೆ ಪ್ರವೇಶಿಸಿ ದಕ್ಷಿಣ ಪೆಸಿಫಿಕ್‌ಮಹಾಸಾಗರದಲ್ಲಿ ಸ್ಪ್ಲಾಶ್‌ಡೌನ್ ಮಾಡುತ್ತವೆ ಎಂದು ತಿಳಿಸಿದೆ.

ಇದುವರೆಗೆ 63 ಹಾರಾಟಗಳನ್ನು ಪೂರ್ಣಗೊಳಿಸಿದೆ, ಇದರಲ್ಲಿ ಮಹತ್ವಾಕಾಂಕ್ಷೆಯ ಚಂದ್ರಯಾನ-1, ಮಾರ್ಸ್ ಆರ್ಬಿಟರ್ ಮಿಷನ್ ಮತ್ತು ಆದಿತ್ಯ-1 ಮಿಷನ್ ಸೇರಿವೆ.

## ಮಿನಿ ನ್ಯೂಸ್

### ಇರಾನ್ ಹಿಂಸಾಚಾರದಲ್ಲಿ 200ಕ್ಕೂ ಹೆಚ್ಚು ಮಂದಿ ಬಲಿ

**ಟೆಹ್ರಾನ್:** ಹಿಂಸಾಚಾರ ಪೀಡಿತ ಇರಾನ್‌ನ ಗಲಭೆಗೆ 200ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ. ಇರಾನ್ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಈಗ 13 ದಿನಕ್ಕೆ ಕಾಲಿಟ್ಟಿದ್ದು, ಹಿಂಸಾಚಾರ ಮತ್ತಷ್ಟು ಹೆಚ್ಚಿದೆ. ಸರ್ಕಾರದ ಸೂಚನೆ ಮೇರೆಗೆ ಭದ್ರತಾಪಡೆಗಳು ಹಲವು ಸ್ಥಳಗಳಲ್ಲಿ ಗುಂಡು ಹಾರಿಸಿದ್ದು, 200 ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ರಾಜಧಾನಿ ಟೆಹ್ರಾನ್ ನಲ್ಲಿರುವ 6 ಆಸ್ಪತ್ರೆಗಳಲ್ಲಿ ಕನಿಷ್ಠ 217 ಪ್ರತಿಭಟನಾಕಾರರು ಸಾವನ್ನಪ್ಪಿದ್ದಾರೆ. ಈ ಪೈಕಿ ಹೆಚ್ಚಿನವರು ಗುಂಡಿನ ದಾಳಿಗೆ ಬಲಿಯಾಗಿದ್ದಾರೆ ಎಂದು ತಿಳಿಸಿದುಬಂದಿದೆ. ಅಲ್ಲದೇ ಉತ್ತರ ಟೆಹ್ರಾನ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಯುವ ಸಮೂಹದ ಮೇಲೆ ಏಕಾಏಕಿ ಗುಂಡಿನ ಮಳೆಗರೆದಿದ್ದು, 30 ಕ್ಕೂ ಹೆಚ್ಚು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಖಮೇನಿ ಸರ್ಕಾರದ ವಿರುದ್ಧ 2025ರ ಡಿ.28 ರಂದು ಶುರುವಾದ ಪ್ರತಿಭಟಗಳು ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ದೇಶಾದ್ಯಂತ ಇಂಟರ್‌ನೆಟ್, ಫೋನ್ ಸಂಪರ್ಕಗಳನ್ನ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಇರಾನ್‌ನಿಂದ ಗಡಿಪಾರು ಆಗಿರುವ ಯುವರಾಜ ರೇಜಾ ಪಹ್ಲವಿ ಅವರು ಸಾಮೂಹಿಕ ಪ್ರತಿಭಟನೆಗೆ ಕರೆ ನೀಡಿದ ಬೆನ್ನಲ್ಲೇ ತಡರಾತ್ರಿ ಟೆಹರಾನ್, ಇತರ ನಗರಗಳಲ್ಲಿ ಸಾವಿರಾರು ಜನರು ಬೀದಿಗಿಳಿದು ಖಮೇನಿ ವಿರುದ್ಧ ಘೋಷಣೆ ಕೂಗುತ್ತಿದ್ದಾರೆ. ಮುಲ್ಲಾಗಳೇ ದೇಶಬಿಟ್ಟು ತೊಲಗಿ ಎಂದು ಜನರು ಘೋಷಣೆ ಕೂಗಿ ಟೆಹರಾನ್‌ನಲ್ಲಿರುವ ಸರ್ಕಾರಿ ಕಚೇರಿಗೆ ಬೆಂಕಿ ಹಾಕಿ ಆಕ್ರೋಶ ಹೊರಹಾಕಿದ್ದಾರೆ. ಇಸ್ಲಾಮಿಕ್ ಗಣರಾಜ್ಯದ 47 ವರ್ಷಗಳ ಇತಿಹಾಸದಲ್ಲಿ ಅತಿ ದೊಡ್ಡ ಆಡಳಿತ ವಿರೋಧಿ ಪ್ರತಿಭಟನೆ ಇದಾಗಿದೆ. ಈ ಮಧ್ಯೆ ಸಾವು-ನೋವಿನ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲ್ ಖಮೇನಿ, ಇಸ್ಲಾಮಿಕ್ ಗಣರಾಜ್ಯವು ದಂಗೆಕೋರರಿಗೆ ತಲೆ ಬಾಗುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

### ವೆನೆಜುವೆಲಾ ಮಾದರಿಯಲ್ಲೇ ನೆತನ್ಯಾಹು ಅಪಹರಣಕ್ಕೆ ಪಾಕ್ ಸಲಹೆ

**ಇಸ್ಲಾಮಾಬಾದ್:** ವೆನೆಜುವೆಲಾ ಅಧ್ಯಕ್ಷರನ್ನು ಅಪಹರಿಸಿದ ಮಾದರಿಯಲ್ಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಕಿಡ್ನಾಪ್ ಮಾಡಬೇಕು ಎಂದು ಪಾಕ್ ಹೇಳಿದೆ. ನರ ರಾಕ್ಷಸ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಅಪಹರಿಸಬೇಕು ಎಂದು ಪಾಕಿಸ್ತಾನ ರಕ್ಷಣಾ ಸಚಿವ ಖವಾಜಾ ಆಸಿಫ್ ಅಮೆರಿಕ, ಟರ್ಕಿಗೆ ಒತ್ತಾಯಿಸಿದ್ದಾರೆ. ಪಾಕಿಸ್ತಾನದ ಮಾಧ್ಯಮವೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು, ಅಮೆರಿಕ ವೆನೆಜುವೆಲಾ ಅಧ್ಯಕ್ಷರನ್ನು ಅಪಹರಿಸಿದಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನೂ ಅಪಹರಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಬೆಂಜಮಿನ್ ನೆತನ್ಯಾಹು ಮಾನವೀಯತೆಯ ಅಪರಾಧಿಯಾಗಿದ್ದು, ಗಾಜಾ ಪಟ್ಟಿಯಲ್ಲಿ ಆತ ಮಾಡಿರುವ ನರಮೇಧಕ್ಕೆ ಕ್ಷಮೆಯೇ ಇಲ್ಲ. ಅಮೆರಿಕಕ್ಕೆ ಮಾನವೀಯತೆ ಮೇಲೆ ಗೌರವವಿದ್ದರೆ, ಈ ಕೂಡಲೇ ಇಸ್ರೇಲ್ ಪ್ರಧಾನಿಯನ್ನು ಅಪಹರಿಸಬೇಕು.

ನಾನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಇದನ್ನು ನಿರೀಕ್ಷಿಸುತ್ತೇನೆ ಎಂದು ಖವಾಜಾ ಆಸಿಫ್ ಹೇಳಿದ್ದಾರೆ. ಇಷ್ಟೇ ಅಲ್ಲದೇ ಟರ್ಕಿ ಕೂಡ ಬೆಂಜಮಿನ್ ನೆತನ್ಯಾಹು ಅವರನ್ನು ಅಪಹರಿಸಬಹುದು. ಪ್ರತಿಯೊಬ್ಬ ಪಾಕಿಸ್ತಾನಿ ಅದಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದಾನೆ. ಇಸ್ರೇಲ್ ಪ್ರಧಾನಿ ಪ್ಯಾಲೆಸ್ತೀನಿಯರ ಮೇಲೆ ನಡೆಸಿದ ದೌರ್ಜನ್ಯಕ್ಕೆ, ಮಾನವ ನಾಗರಿಕ ಇತಿಹಾಸದಲ್ಲಿ ಬೇರೆ ಉದಾಹರಣೆ ಸಿಗುವುದಿಲ್ಲ ಎಂದು ಖವಾಜಾ ಆಸಿಫ್ ವಾಗ್ದಾಳಿ ನಡೆಸಿದ್ದಾರೆ.

### ಕಟ್ಟಡದಲ್ಲಿ ಬೆಂಕಿ ಅವಘಡ : ಒಂದೇ ಕುಟುಂಬದ ಮೂವರು ಸಾವು

**ಮುಂಬೈ:** ಗೋರೆಗಾಂವ್ ಉಪನಗರದ ಭಗತ್‌ಸಿಂಗ್ ಪ್ರದೇಶದಲ್ಲಿ ಮುಂಜಾನೆ ವಸತಿ ಕಟ್ಟಡದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದಾರೆ. ಮೃತರನ್ನು ಹರ್ಷದಾ ಪವಾಸ್ಕರ್ (19), ಕುಶಾಲ್ ಪವಾಸ್ಕರ್ (12), ಸಂಜೋಗ್ ಪವಾಸ್ಕರ್ (48) ಎಂದು ಗುರುತಿಸಲಾಗಿದೆ. ರಾಜಾರಾಮ್‌ಲೇನ್‌ನಲ್ಲಿರುವ ಒಂದೇ ಅಂತಸ್ತಿನ ಕಟ್ಟಡದಲ್ಲಿ ಬೆಳಗಿನ ಜಾವ 3 ಗಂಟೆ ಸಂದರ್ಭದಲ್ಲಿ ಈ ದುರಂತ ಸಂಭವಿಸಿದೆ. ನೆಲಮಹಡಿ ಮೊದಲ ಮಹಡಿಯಲ್ಲಿದ್ದ ಬಹುತೇಖ ಗೃಹೋಪಯೋಗಿ ವಸ್ತುಗಳಿ ಹಾನಿ ಆಗಿದೆ. ಅಗ್ನಿಶಾಮಕ ಸಿಬ್ಬಂದಿ ಬರುವ ಮೊದಲೇ ಸ್ಥಳೀಯರು ನೀರಿನ ಬಕೆಟ್‌ಗಳನ್ನು ಬಳಸಿ ಬೆಂಕಿಯನ್ನು ನಂದಿಸಿದರು. ಸ್ಥಳಕ್ಕೆ ತಲುಪಿದ ಅಗ್ನಿಶಾಮಕ ಸಿಬ್ಬಂದಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಸಂಪೂರ್ಣವಾಗಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಸುಟ್ಟ ಗಾಯ, ಉಸಿರುಗಟ್ಟಿ ಅಸ್ವಸ್ಥಗೊಂಡಿದ್ದ ಕುಟುಂಬದ ಮೂವರೂರನ್ನು ಟ್ರಾಮಾ ಕೇರ್ ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ವೈದ್ಯರು ಅವರನ್ನು ಕೊನೆಯುಸಿರೆಳೆದಿದ್ದಾರೆ ಎಂದು ಘೋಷಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿಯ ಕಾರಣ ಇನ್ನೂ ತಿಳಿದುಬಂದಿಲ್ಲ. ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.



# ಮಮತಾ vs ಇಡಿ; ತಾರಕಕ್ಕೇರಿದ ಕಾನೂನು ಸಮರ


## ಇಡಿ ಕ್ರಮದ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಪಶ್ಚಿಮ ಬಂಗಾಳ ಸರ್ಕಾರ, ಏಕಪಕ್ಷೀಯ ತೀರ್ಪು ನೀಡದಂತೆ ಮನವಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಜಾರಿ ನಿರ್ದೇಶನಾಲಯ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಸಂಘರ್ಷ ತಾರಕಕ್ಕೇರಿದೆ ರಾಜಕೀಯ ತಂತ್ರಗಾರಿಕೆ ಸಂಸ್ಥೆ 'ಐ-ಪ್ಯಾಕ್', ಅದರ ನಿರ್ದೇಶಕ ಪ್ರತೀಕ್‌ಜೈನ್ ಅವರ ನಿವಾಸದ ಮೇಲೆ ನಡೆದ ಇಡಿ ದಾಳಿ ಈಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ 'ಕೇವಿಯಟ್' ಸಲ್ಲಿಸಿದ್ದು, ಈ ಪ್ರಕರಣದಲ್ಲಿ ರಾಜ್ಯ ಸರ್ಕಾರದ ವಾದವನ್ನು ಆಲಿಸದೆ ಯಾವುದೇ ಪ್ರತಿಕೂಲ ಆದೇಶ, ನಿರ್ದೇಶನ ನೀಡಬಾರದು ಎಂದು ಮನವಿ ಮಾಡಿದೆ. ಸಾಂವಿಧಾನಿಕ ನ್ಯಾಯಾಲಯಗಳಲ್ಲಿ, ಪ್ರತಿವಾದಿಯ ಅನುಪಸ್ಥಿತಿಯಲ್ಲಿ ಏಕಪಕ್ಷೀಯ ನಿರ್ಧಾರವಾಗುವುದನ್ನು ತಡೆಯಲು ಕೇವಿಯಟ್ ಸಲ್ಲಿಸಲಾಗುತ್ತದೆ.

- **ದಾಳಿಯ ವೇಳೆ ಮಧ್ಯ ಪ್ರವೇಶಿಸಿ, ಪ್ರಮುಖ ದಾಖಲೆ, ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ದೀದಿ ತೆಗೆದುಕೊಂಡು ಹೋಗಿದ್ದಾರೆ ಎಂದು ಇಡಿ ಆರೋಪ**
- **ಕಲ್ಲಿದ್ದಲು ಹಗರಣದ ಹಣ ಸುವೇಂದು ಅಧಿಕಾರಿಯ ಮೂಲಕ ಅಮಿತ್ ಶಾ ಅವರಿಗೆ ತಲುಪುತ್ತದೆ ಎಂದು ಬಾಂಬ್ ಸಿಡಿಸಿದ ಮಮತಾ**
- **ಸಿಎಂ ತನಿಖೆಗೆ ಅಡ್ಡಿಪಡಿಸಿದ್ದು ಸಂವಿಧಾನ ಬಾಹಿರ, ಅವರು ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದ್ದಾರೆ ಎಂದು ಟೀಕಿಸಿದ ಬಿಜೆಪಿ**
- **ನಾವು ವೃತ್ತಿಪರ ಸಂಸ್ಥೆಯಾಗಿದ್ದು, ಕಾನೂನಿಗೆ ಗೌರವ ನೀಡುತ್ತೇವೆ. ಎಲ್ಲಾ ಪಕ್ಷಗಳಿಗೂ ಕೆಲಸ ಮಾಡಿದ್ದೇವೆ ಎಂದು ಸ್ಪಷ್ಟನೆ ನೀಡಿದ ಐ ಪ್ಯಾಕ್**

**ಬಾಂಬ್ ಸಿಡಿಸಿದ ಮಮತಾ**

**ಇಡಿ ಆರೋಪ ಏನು?:** ಕೋಟ್ಯಂತರ ರೂಪಾಯಿ ಮೌಲ್ಯದ ಕಲ್ಲಿದ್ದಲು ಕಳ್ಳಸಾಗಣೆ, ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಕೋಲ್ಕತ್ತಾದಲ್ಲಿ ಐ-ಪ್ಯಾಕ್ ಕಚೇರಿ ಮೇಲೆ ದಾಳಿ ನಡೆಸಿತ್ತು. ಈ ದಾಳಿಯ ಸಂದರ್ಭದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸ್ಥಳಕ್ಕೆ ಆಗಮಿಸಿ, ತನಿಖಾಧಿಕಾರಿಗಳ ವಶದಲ್ಲಿದ್ದ ಪ್ರಮುಖ ಸಾಕ್ಷ್ಯಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಇ.ಡಿ ಗಂಭೀರ ಆರೋಪ ಮಾಡಿದೆ. ಈ ಸಂಬಂಧ ಇ.ಡಿ ಕಲ್ಕತ್ತಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಮುಖ್ಯಮಂತ್ರಿಗಳ ವಿರುದ್ಧ ಸಿಬಿಐ ತನಿಖೆಗೆ ಒತ್ತಾಯಿಸಿದೆ. ಅಲ್ಲದೆ, ಪಶ್ಚಿಮ ಬಂಗಾಳ ಪೊಲೀಸರು ಮುಖ್ಯಮಂತ್ರಿಗೆ ಸಹಾಯ ಮಾಡಿ, ಕಾನೂನು ಉಲ್ಲಂಘಿಸಿದ್ದಾರೆ ಎಂದು ಇಡಿ ದೂರಿದೆ.



**ಮಮತಾ ಬ್ಯಾನರ್ಜಿ ತಿರುಗೇಟು:** ಪ್ರತಿಭಟನಾ ರ‍್ಯಾಲಿಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದ್ದರು. ಕಲ್ಲಿದ್ದಲು ಹಗರಣದ ಹಣ ಯಾರಿಗೆ ಹೋಗುತ್ತದೆ? ಅದು ಸುವೇಂದು ಅಧಿಕಾರಿ ಮೂಲಕ ಅಮಿತ್ ಶಾಗೆ ಹೋಗುತ್ತದೆ, ಎಂದು ನೇರ ಆರೋಪ ಮಾಡಿದ್ದರು. ಮಮತಾ ನಡೆಯನ್ನು ಖಂಡಿಸಿರುವ ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್, ಇದು ಅನೈತಿಕ, ಬೇಜವಾಬ್ದಾರಿ ಮತ್ತು ಸಂವಿಧಾನ ಬಾಹಿರ ನಡೆ. ಖಾಸಗಿ ಕಂಪನಿಯ ತನಿಖೆಯಲ್ಲಿ ಮುಖ್ಯಮಂತ್ರಿ ಏಕೆ ಹಸ್ತಕ್ಷೇಪ ಮಾಡಿದರು? ತಮ್ಮನ್ನು ಮತ್ತು ತಮ್ಮ ಪಕ್ಷವನ್ನು ಸಿಕ್ಕಿಹಾಕಿಸುವ ಸೂಕ್ಷ್ಮ ದಾಖಲೆಗಳನ್ನು ಕಾಪಾಡಲು ಅವರು ಹೀಗೆ ಮಾಡಿದ್ದಾರೆ, ಎಂದು ವಾಗ್ದಾಳಿ ನಡೆಸಿದ್ದಾರೆ. ಇನ್ನೊಂದೆಡೆ ಐ-ಪ್ಯಾಕ್ ಸಂಸ್ಥೆ ಹೇಳಿಕೆ ಬಿಡುಗಡೆ ಮಾಡಿದ್ದು, ಇದು ಆತಂಕಕಾರಿ ಬೆಳವಣಿಗೆ. ನಾವು ವೃತ್ತಿಪರರು. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲಾ ಪಕ್ಷಗಳಿಗೂ ಸಲಹೆ ನೀಡಿದ್ದೇವೆ. ನಾವು ಕಾನೂನಿಗೆ ಸಹಕರಿಸುತ್ತೇವೆ, ಎಂದು ತಿಳಿಸಿದೆ.

ಇನ್ನು ಕಲ್ಕತ್ತಾ ಹೈಕೋರ್ಟ್‌ನಲ್ಲಿ ಈ ಪ್ರಕರಣದ ವಿಚಾರಣೆ ವೇಳೆ ವಕೀಲರ ನಡುವೆ ತೀವ್ರ ಗದ್ದಲ ಉಂಟಾಯಿತು. ನ್ಯಾಯಮೂರ್ತಿ ಸುವ್ರಾ ಘೋಷ್ ಅವರು ಜನಸಂದಣಿಯನ್ನು ನಿಯಂತ್ರಿಸಲು ಸಾಧ್ಯವಾಗದೇ ವಿಚಾರಣೆಯನ್ನು ಜನವರಿ 14ಕ್ಕೆ ಮುಂದೂಡಿದ್ದರು. ಒಟ್ಟಿನಲ್ಲಿ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವಂತೆಯೇ ಬಂಗಾಳದಲ್ಲಿ 'ದೀದಿ' ಮತ್ತು ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳ ನಡುವಿನ ಗುದ್ದಾಟ ಬೀದಿಯಿಂದ ಸುಪ್ರೀಂ ಕೋರ್ಟ್‌ವರೆಗೆ ತಲುಪಿದೆ.

**ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನನ್ನು ಕೊಲ್ಲಲು ಬಂದಿದ್ದೀರಾ? ನನಗೆ ನನ್ನ ರಕ್ಷಣೆ ಮಾಡಿಕೊಳ್ಳುವ ಹಕ್ಕಿದೆ. ಚುನಾವಣೆಗೆ ಸಂಬಂಧಿಸಿದ ಟಿಎಂಸಿಯ ಡೇಟಾವನ್ನು ಕದಿಯಲು ಇಡಿ ಬಂದಿತ್ತು, ಇಡಿ ಅಧಿಕಾರಿಗಳು ಮುಂಜಾನೆಯೇ ಬಂದಿದ್ದರು, ನಾನು ಹೋದಾಗ ತಡವಾಗಿತ್ತು, ಆಗಲೇ ಅವರು ಏನೇನೋ ದಾಖಲೆ ತೆಗೆದಿದ್ದರು.**

**- ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ**

### ಪಶ್ಚಿಮ ಬಂಗಾಳದಲ್ಲಿ ಹೈಡ್ರಾಮಾ ಸೃಷ್ಟಿ

**ರಾಜಕೀಯ ತಂತ್ರಗಾರಿಕೆ ಸಂಸ್ಥೆ 'ಐ-ಪ್ಯಾಕ್' ಮೇಲಿನ ಇಡಿ ದಾಳಿಯ ನಂತರ ಪಶ್ಚಿಮ ಬಂಗಾಳದಲ್ಲಿ ಹೈಡ್ರಾಮಾ ಸೃಷ್ಟಿಯಾಗಿದೆ. ಜಾರಿ ನಿರ್ದೇಶನಾಲಯವು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಸಾಕ್ಷ್ಯ ನಾಶದ ಆರೋಪ ಮಾಡಿದ ಬೆನ್ನಲ್ಲೇ, ಪಶ್ಚಿಮ ಬಂಗಾಳ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ 'ಕೇವಿಯಟ್' ಸಲ್ಲಿಸಿದೆ. ತನ್ನ ಅಹವಾಲನ್ನು ಕೇಳದೆ ಯಾವುದೇ ಆದೇಶ ನೀಡಬಾರದು ಎಂದು ಸರ್ಕಾರ ಮನವಿ ಮಾಡಿದೆ.**

# ಟಾಕ್ಸಿಕ್ ಟೀಸರ್ ಹಾಟ್ ಬೆಡಗಿ ನಟಾಲಿಯಾ ಬರ್ನ್ ಅಲ್ಲ.. ಬೀಟ್ರಿಜ್ ಬಾಚ್..!



ರಾಕಿಂಗ್‌ಸ್ಟಾರ್ ಯಶ್ ಹುಟ್ಟುಹಬ್ಬದಂದು ಬಿಡುಗಡೆಯಾದ ಟಾಕ್ಸಿಕ್ ಟೀಸರ್ ಸಕತ್ ಸೆನ್ಸೇಷನ್ ಕ್ರಿಯೇಟ್ ಮಾಡಿದೆ. ಚಿತ್ರದ ಟೀಸರ್‌ನಲ್ಲಿ ಕಾರ್ ಸನ್ನಿವೇಶ ಸಕತ್ ಹೈಲೈಟ್ ಆಗಿದೆ. ಅಲ್ಲದೇ ಚರ್ಚೆಯ ವಿಷಯವಾಗಿದ್ದು, ಈ ಬಗ್ಗೆ ಹಲವಾರು ಟೀಕೆ, ಟಿಪ್ಪಣಿಗಳು ಶುರುವಾಗಿವೆ. ಈ ಸನ್ನಿವೇಶದಲ್ಲಿ ಕಾಣಿಸಿಕೊಂಡ ಆ ನಟಿ ಯಾರು ಅನ್ನೋ ಕುತೂಹಲ ಕೂಡ ಜಾಸ್ತಿಯಾಗಿತ್ತು. ಆ ಸನ್ನಿವೇಶದಲ್ಲಿ ನಟಿಸಿದ ಆ ನಟಿ ನಟಾಲಿಯಾ ಬರ್ನ್ ಎಂದು ಹೇಳಲಾಗಿತ್ತು. ಅಸಲಿಗೆ ಆ ನಟಿ ಹೆಸರು ನಟಾಲಿಯಾ ಅಲ್ಲ. ಟಾಕ್ಸಿಕ್ ಚಿತ್ರದ ನಿರ್ದೇಶಕಿ ಗೀತು ಮೋಹನ್‌ದಾಸ್ ಆ ನಟಿಯ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಟಾಕ್ಸಿಕ್ ಟೀಸರ್‌ನಲ್ಲಿ ಕಾಣಿಸಿಕೊಂಡ ಆ ಸೆನ್ಸೇಷನಲ್ ಗರ್ಲ್ ಬೀಟ್ರಿಜ್ ಬಾಚ್ ಎಂದು ಟಾಕ್ಸಿಕ್ ಚಿತ್ರದ ನಿರ್ದೇಶಕಿ ಗೀತು ಮೋಹನ್ ದಾಸ್ ಬರೆದುಕೊಂಡಿದ್ದಾರೆ. ಫೋಟೋ ಜೊತೆಗೆ ಮಾಹಿತಿ ಹಂಚಿಕೊಂಡಿರುವ ನಿರ್ದೇಶಕಿ ಟೀಸರ್ ಬಗ್ಗೆ ಚರ್ಚೆಯಾಗ್ತಿರುವ ವಿಚಾರದ ಬಗ್ಗೆಯೂ ಪ್ರತಿಕ್ರಿಯೆ ನೀಡಿದ್ದಾರೆ. ಯಶ್ ಹುಟ್ಟುಹಬ್ಬಕ್ಕೆ ಬಿಡುಗಡೆಯಾದ ಕ್ಯಾರೆಕ್ಟರ್ ಇಂಟ್ರುಡಕ್ಷನ್ ಟೀಸರ್ ಜಾಲತಾಣದಲ್ಲಿ ಹಲ್‌ಚಲ್ ಎಬ್ಬಿಸಿದೆ. ಟೀಸರ್‌ಗೆ ಸಿಕ್ಕ ಪ್ರತಿಕ್ರಿಯೆಗೆ ಸೋಶಿಯಲ್ ಮೀಡಿಯಾದಲ್ಲಿ ಹಲವಾರು ದಾಖಲೆಗಳನ್ನ ನಿರ್ಮಿಸಿದೆ. ಜಾಗತಿಕ ಮಟ್ಟದಲ್ಲಿ ಯಶ್ ಟಾಕ್ಸಿಕ್ ಸದ್ದು ಮಾಡ್ತಿದೆ.

# ಸಿಸಿಎಲ್ 2026 ವೇಳಾಪಟ್ಟಿ ಬಿಡುಗಡೆ






**ಸುದೀಪ್ ಆಡುತ್ತಾರಾ ಇಲ್ಲವಾ?**

ಭಾರತದಲ್ಲಿ ಕ್ರಿಕೆಟ್ ಮತ್ತು ಸಿನಿಮಾ ಅತಿ ದೊಡ್ಡ ಎಂಟರ್ಟೈನರ್‌ಗಳು. ಅತಿ ದೊಡ್ಡ ಉದ್ಯಮಗಳೂ ಸಹ ಹೌದು. ಕ್ರಿಕೆಟ್ಟಿಗರು ಸಿನಿಮಾ ರಂಗದವರನ್ನು ಮದುವೆ ಆಗುವುದು, ಸಿನಿಮಾಗಳಲ್ಲಿ ನಟಿಸುವುದು ಸಾಮಾನ್ಯ. ಸಿನಿಮಾ ರಂಗದವರು ತಮ್ಮ ಸಿನಿಮಾ ಪ್ರಚಾರಕ್ಕೆ ಕ್ರಿಕೆಟ್ಟಿಗರನ್ನು ಅವಲಂಬಿಸುವುದು ಸಾಮಾನ್ಯ. ಸಿನಿಮಾದವರೇ ಕ್ರಿಕೆಟ್ಟಿಗರಾಗಿಬಿಟ್ಟರೆ ಇದೇ ಆಲೋಚನೆಯಿಂದ ಹುಟ್ಟಿದ್ದೆ ಸಿಸಿಎಲ್. ಸೆಲೆಬ್ರಿಟಿ ಕ್ರಿಕೆಟ್ ಲೀಗ್, ಭಾರತದಲ್ಲಿ ನಡೆಯುವ ಪ್ರಮುಖ ಕ್ರಿಕೆಟ್ ಲೀಗ್‌ಗಳಲ್ಲಿ ಒಂದಾಗಿ ಗುರುತಿಸಿಕೊಂಡಿದ್ದು, 11 ಸೀಸನ್ ಮುಗಿಸಿ ಇದೀಗ 12ನೇ ಸೀಸನ್‌ಗೆ ಕಾಲಿಟ್ಟಿದೆ. ಭಾರತದ ಬೇರೆ ಬೇರೆ ಚಿತ್ರರಂಗದವರೆಲ್ಲ ಸೇರಿ ಕ್ರಿಕೆಟ್ ಆಡುವ ಜೊತೆಗೆ ಪ್ರೇಕ್ಷಕರಿಗೆ ಮನೊರಂಜನೆ ಕೊಡುವುದೇ ಸಿಸಿಎಲ್. ಕರ್ನಾಟಕದಿಂದ 'ಕರ್ನಾಟಕ ಬುಲ್ಡೋಜರ್ಸ್' ತಂಡ ಸಿಸಿಎಲ್‌ನಲ್ಲಿ ಭಾಗವಹಿಸುತ್ತಾ ಬಂದಿದ್ದು, ಈ ತಂಡವನ್ನು ಕಿಚ್ಚ ಸುದೀಪ್ ಮುನ್ನಡೆಸುತ್ತಿದ್ದಾರೆ. ನಮ್ಮ ತಂಡಕ್ಕೆ ಕ್ರೇಜ್ ಜಾಸ್ತಿನೇ ಇರುತ್ತೆ. ಕೆಲವು ಸೀಸನ್‌ಗಳನ್ನು ಗೆದ್ದು ಚಾಂಪಯನ್ ಸಹ ಆಗಿದ್ದಾರೆ. ಇದೀಗ ಸಿಸಿಎಲ್‌ನ 12ನೇ ಸೀಸನ್ ಪ್ರಾರಂಭ ಆಗುತ್ತಿದ್ದು, ಶೆಡ್ಯೂಲ್ ಬಿಡುಗಡೆ ಆಗಿದೆ. ಈ ಬಾರಿ ಸಹ 8 ತಂಡಗಳು ಸಿಸಿಎಲ್ ಟೂರ್ನಿಯಲ್ಲಿ ಭಾಗವಹಿಸುತ್ತಿವೆ. ಕರ್ನಾಟಕ ಬುಲ್ಡೋಜರ್ಸ್, ಚೆನ್ನೈ ಕಿಂಗ್ಸ್, ಕೇರಳ ಸ್ಟ್ರೈಕರ್ಸ್, ಮುಂಬೈ ಹೀರೋಸ್, ತೆಲುಗು ವಾರಿಯರ್ಸ್, ಭೋಜ್‌ಪುರಿ ಡಬ್ಬಂಗ್ಸ್, ಪಂಜಾಬ್ ಡಿ ಶೇರ್ ಮತ್ತು ಬೆಂಗಾಲ್ ಟೈಗರ್ಸ್ ತಂಡಗಳು ಕ್ರಿಕೆಟ್ ಆಡಿ ರಂಜಿಸಲಿದ್ದಾರೆ. ಕಳೆದ ವರ್ಷ ಪಂಜಾಬ್ ಡಿ ಶೇರ್ ತಂಡ ಚಾಂಪಿಯನ್ ಆಗಿತ್ತು. ಕರ್ನಾಟಕದಲ್ಲಿ ಸುದೀಪ್, ಡಾರ್ಲಿಂಗ್ ಕೃಷ್ಣ, ಗಣೇಶ್, ಜೆಕೆ, ಪೆಟ್ರೋಲ್ ಪ್ರಸನ್ನ ಇನ್ನೂ ಕೆಲವು ಅದ್ಭುತ ಆಟಗಾರರಿದ್ದಾರೆ. 2026ರ ಸಿಸಿಎಲ್ 16 ಜನವರಿಯಿಂದ ಪ್ರಾರಂಭ ಆಗಲಿದ್ದು ಫೆಬ್ರವರಿ 1ಕ್ಕೆ ಮುಕ್ತಾಯ ಆಗಲಿದೆ. ಮೊದಲ ಪಂದ್ಯ ಕರ್ನಾಟಕ ಬಿಲ್ಡೋಜರ್ಸ್ ಮತ್ತು ಪಂಜಾಬ್ ನಡುವೆ ಇರಲಿದೆ. ವೈಜಾಗ್, ಮಧುರ ಮತ್ತು ಹೈದರಾಬಾದ್‌ನಲ್ಲಿ ಪಂದ್ಯಗಳು ನಡೆಯಲಿವೆ. ಪ್ರತಿ ತಂಡಗಳಿಗೆ ಆರಂಭಿಕ ಹಂತದಲ್ಲಿ ತಲಾ ಮೂರು ಪಂದ್ಯಗಳು ಇರಲಿವೆ. ಫೆಬ್ರವರಿ 1ರಂದು ಫೈನಲ್ ನಡೆಯಲಿದೆ. ಕರ್ನಾಟಕ ಬುಲ್ಡೋಜರ್ಸ್ ತಂಡ ಈಗಾಗಲೇ ತಯಾರಿ ಆರಂಭ ಮಾಡಿದೆ. ಆದರೆ ತಂಡದ ಪ್ರಮುಖ ಆಟಗಾರ ಆಗಿರುವ ಸುದೀಪ್ ಅವರು ಇನ್ನೂ ತಂಡವನ್ನು ಸೇರಿಕೊಂಡಂತಿಲ್ಲ. ಅಲ್ಲದೆ ಮುಂದಿನ ವಾರ ಬಿಗ್‌ಬಾಸ್ ಫಿನಾಲೆ ಬೇರೆ ಇದೆ.

# ಕಡಲ ಅಲೆಯಲ್ಲಿ ಗುಲಾಬಿ ದಳದಂತೆ ತೇಲಿದ ನಿವೇದಿತಾ!



**ರೀಲ್ಸ್‌ನಿಂದ ಖ್ಯಾತಿ ಗಳಿಕೆ**

ಕಿರುತೆರೆ ಹಾಗೂ ರಿಯಾಲಿಟಿ ಶೋ ಮೂಲಕ ಖ್ಯಾತಿ ಪಡೆದಿರುವ ನಿವೇದಿತಾ ಗೌಡ ಸದಾ ರೀಲ್ಸ್ ಮಾಡುತ್ತಾ ಫುಲ್ ಆಯಕ್ಟಿವ್ ಆಗಿರ್ತಾರೆ. ಅದೇ ರೀತಿ ಈಗ ಫ್ಲೋರಿಡಾದ ಪಾಮ್ ಬೀಚ್‌ನಲ್ಲಿ ನಿವೇದಿತಾ ಸಕತ್ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ. ಗುಲಾಬಿ ಬಣ್ಣದ ಸ್ವಿಮ್ ಸೂಟ್‌ನಲ್ಲಿ ನಿವೇದಿತಾ ಕಡಲ ಅಲೆಗಳಲ್ಲಿ ತೇಲಾಡಿದ್ದಾರೆ. ಈ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ನಟಿ, Sea Level Calm ಎಂದು ಬರೆದುಕೊಂಡಿದ್ದಾರೆ. ಕಡಲ ಅಲೆಯಲ್ಲಿ ನಿವಿಯ ಕ್ಯೂಟ್ ಕ್ಯೂಟ್ ನಗುವಿನ ಅಲೆ ಸೇರಿ ಗುಲಾಬಿ ದಳವೇ ತೇಲುವಂತೆ ಭಾಸವಾಗುತ್ತಿದೆ. ಈ ಫೋಟೋಗೆ ಅಭಿಮಾನಿಗಳು ಬೆಂಕಿ ಕಾಮೆಂಟ್ ಮಾಡುತ್ತಿದ್ದಾರೆ. ಕೊನೆಯಲ್ಲಿ ಪುಟ್ಟ ಸೀ ಬರ್ಡ್ ಫೋಟೋವನ್ನು ಸಹ ಹಂಚಿಕೊಂಡು ಸಂಭ್ರಮಿಸಿದ್ದಾರೆ.ನಿವೇದಿತಾ ಗೌಡ ಬಿಗ್‌ಬಾಸ್ ಹಾಗೂ ಕಿರುತೆರೆಯ ರಿಯಾಲಿಟಿ ಶೋ ಮೂಲಕ ಎಷ್ಟು ಖ್ಯಾತಿ ಪಡೆದಿದ್ದರೋ ಅದಕ್ಕಿಂತ ಹೆಚ್ಚು ಅವರ ರೀಲ್ಸ್‌ನಿಂದ ಖ್ಯಾತಿ ಗಳಿಸಿದ್ದಾರೆ ಎಂದರೆ ತಪ್ಪಾಗ್ಲಿಕ್ಕಿಲ್ಲ. ತಮ್ಮ ವೈಯಕ್ತಿ ಜೀವನದಲ್ಲಿ ಆದ ಎಲ್ಲಾ ತೊಡಕುಗಳನ್ನ ಬದಿಗೊತ್ತಿ ಜಾಲಿಯಾಗಿ ರೀಲ್ಸ್ ಮಾಡುತ್ತಾ ದೇಶ ವಿದೇಶ ಸುತ್ತುತ್ತಾ ಕಾಲ ಕಳೆಯುತ್ತಿದ್ದಾರೆ.

# ಭಾರತದ ಟಾಪ್ 10 ಶ್ರೀಮಂತರು ಇವರು






ಭಾರತದ ಅನೇಕ ಕಲಾವಿದರು ನಟನೆ, ನಿರ್ಮಾಣ ಹಾಗೂ ಉದ್ಯಮಗಳಲ್ಲಿ ತೊಡಗಿ ಸಾವಿರಾರು ಕೋಟಿ ರೂ. ಆಸ್ತಿ ಹೊಂದಿದ್ದಾರೆ. ಅವರಲ್ಲಿ ಭಾರತದ ಟಾಪ್ 10 ಶ್ರೀಮಂತ ನಟರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಶಾರುಖ್ ಖಾನ್ 12,931 ಕೋಟಿ ರೂ. ಆಸ್ತಿಯೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ. ಅಕ್ಕಿನೇನಿ ನಾಗಾರ್ಜುನ, ಸಲ್ಮಾನ್ ಖಾನ್, ಹೃತಿಕ್ ರೋಷನ್ ಸೇರಿದಂತೆ ಇತರ ನಟರ ಸಂಪತ್ತು ಮತ್ತು ಯಶಸ್ಸಿನ ಕುರಿತು ಈ ಲೇಖನದಲ್ಲಿದೆ ವಿವರ. ಭಾರತದ ಅನೇಕ ಕಲಾವಿದರು ಸಾವಿರಾರು ಕೋಟಿ ರೂಪಾಯಿಯ ಒಡೆಯರು. ಅವರ ಬಳಿ ಕೋಟಿ ಕೋಟಿ ರೂಪಾಯಿ ಹಣ ಇದೆ. ಸಿನಿಮಾದಲ್ಲಿ ನಟಿಸೋದಕ್ಕೆ ದೊಡ್ಡ ಸಂಭಾವನೆ ಪಡೆಯುವ ಕಲಾವಿದರು, ನಟನೆಯ ಜೊತೆಗೆ ನಿರ್ಮಾಣದಲ್ಲಿ ತೊಡಗಿಕೊಳ್ಳುತ್ತಾರೆ. ಇನ್ನು, ಸಾಕಷ್ಟು ಉದ್ಯಮಗಳಲ್ಲಿ ಹೂಡಿಕೆ ಮಾಡುತ್ತಾರೆ. ಭಾರತದ ಟಾಪ್ 10 ಶ್ರೀಮಂತ ನಟರ ಪಟ್ಟಿ ಇಲ್ಲಿದೆ ನೋಡಿದೆ.

ಈ ಪಟ್ಟಿಯಲ್ಲಿ ಶಾರುಖ್ ಖಾನ್ ಅವರು ಮೊದಲ ಸ್ಥಾನದಲ್ಲಿ ಇದ್ದಾರೆ. ಅವರ ಆಸ್ತಿ 12,931 ಕೋಟಿ ರೂಪಾಯಿ ಎಂದು ವರದಿ ಆಗಿದೆ. ಅಂದರೆ ಅವರೆಷ್ಟು ಶ್ರೀಮಂತರು ಎಂಬುದನ್ನು ನೀವೇ ಲೆಕ್ಕ ಹಾಕಿ. ವಿಶ್ವ ಶ್ರೀಮಂತ ಹೀರೋಗಳ ಪಟ್ಟಿಯಲ್ಲೂ ಶಾರುಖ್ ಖಾನ್ ಅವರಿಗೆ ಸ್ಥಾನ ಇದೆ. ಅನೇಕ ಖ್ಯಾತ ನಾಮರನ್ನು ಅವರು ಹಿಂದಿಕ್ಕುತ್ತಾರೆ. ಎರಡನೇ ಸ್ಥಾನದಲ್ಲಿ ತೆಲುಗಿನ ಅಕ್ಕಿನೇನಿ ನಾಗಾರ್ಜುನ ಇದ್ದಾರೆ. ಇವರು ಮೊದಲಿನಿಂದಲೂ ಶ್ರೀಮಂತ ಕುಟುಂಬದ ಹಿನ್ನೆಲೆ ಹೊಂದಿರುವವರು. ಅವರ ಅಪ್ಪ ಮಾಡಿಟ್ಟು ಹೋದ ಆಸ್ತಿ ಇದೆ. ಅನೇಕ ಪ್ರಾಪರ್ಟಿ ಅವರ ಹೆಸರಲ್ಲಿ ಇದೆ. ಅವರ ಆಸ್ತಿ 5 ಸಾವಿರ ಕೋಟಿ ರೂಪಾಯಿ. ಮೂರನೇ ಸ್ಥಾನದಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ಇದ್ದಾರೆ. ಇವರ ಆಸ್ತಿ 3225 ಕೋಟಿ ರೂಪಾಯಿ ಆಸುಪಾಸಿನಲ್ಲಿದೆ. ನಾಲ್ಕನೇ ಸ್ಥಾನದಲ್ಲಿ ಬಾಲಿವುಡ್ ನಟ ಹೃತಿಕ್ ರೋಷನ್ ಇದ್ದಾರೆ, ಅವರು ತಮ್ಮ ಸ್ಪೋರ್ಟ್ಸ್ ಬ್ರ್ಯಾಂಡ್ ಎಚ್ ಆರ್‌ಎಕ್ಸ್ ಮೂಲಕ ಸಾಕಷ್ಟು ದುಡಿಯುತ್ತಾರೆ.

# ರಾಜಾ ಸಾಬ್ ಚಿತ್ರದಿಂದ ಭರ್ಜರಿ ಕಲೆಕ್ಷನ್

**ಹೀನಾಯ ವಿಮರ್ಶೆ ನೀಡಿದ ಜನರು**



ಪ್ರಭಾಸ್ ಅವರು ಕಥೆಯನ್ನು ಒಪ್ಪಿಕೊಳ್ಳುವಾಗ ಸಾಕಷ್ಟು ಗಮನ ಹರಿಸುತ್ತಾರೆ. ಅವರು 'ರಾಜಾ ಸಾಬ್' ಚಿತ್ರವನ್ನು ಒಪ್ಪಿಕೊಂಡಾಗ ಎಲ್ಲರಿಗೂ ಅಚ್ಚರಿ ಆಗಿದ್ದಂತೂ ಸುಳ್ಳಲ್ಲ. ಈ ಸಿನಿಮಾ ಹಾರರ್ ಕಾಮಿಡಿ ಶೈಲಿಯಲ್ಲಿ ಮೂಡಿ ಬಂದಿದೆ. ಈ ಚಿತ್ರ ನೋಡಿದ ಅನೇಕರು ನೆಗೆಟಿವ್ ಆಗಿ ವಿಮರ್ಶೆ ನೀಡಿದ್ದಾರೆ. ಅಭಿಮಾನಿಗಳಿಗೂ ಸಿನಿಮಾ ಇಷ್ಟ ಆಗಿಲ್ಲ ಎಂದೇ ಹೇಳಬಹುದು.

ಪ್ರಭಾಸ್ ಅವರು ಕೊನೆಯದಾಗಿ ಕಾಣಿಸಿಕೊಂಡಿದ್ದು 'ಕಲ್ಕಿ 2898 ಎಡಿ' ಸಿನಿಮಾದಲ್ಲಿ. ಇದಾದ ಬಳಿಕ ಹೀರೋ ಆಗಿ ಅವರು ಯಾವ ಸಿನಿಮಾದಲ್ಲೂ ನಟಿಸಿಲ್ಲ. ಅವರು ಕೆಲವು ಚಿತ್ರಗಳಲ್ಲಿ ಅತಿಥಿ ಪಾತ್ರಗಳನ್ನು ಮಾಡಿದರು. ಈಗ ಪ್ರಭಾಸ್ ಅವರು 'ರಾಜಾ ಸಾಬ್' ಚಿತ್ರದ ಮೂಲಕ ಪ್ರೇಕ್ಷಕರ ಎದುರು ಬಂದಿದ್ದಾರೆ. ಈ ಸಿನಿಮಾದ ಮೊದಲ ದಿನದ ಕಲೆಕ್ಷನ್ ಹೇಗಿದೆ ಎಂಬುದರ ಲೆಕ್ಕ ಸಿಕ್ಕಿದೆ. ಈ ಚಿತ್ರ ಉತ್ತಮ ವಿಮರ್ಶೆ ಪಡೆದ ಹೊರತಾಗಿಯೂ ಮೊದಲ ದಿನ ಒಳ್ಳೆಯ ಗಳಿಕೆ ಮಾಡಿದೆ ಎಂಬುದು ವಿಶೇಷ. ಪ್ರಭಾಸ್ ಅವರು ಕಥೆಯನ್ನು ಒಪ್ಪಿಕೊಳ್ಳುವಾಗ ಸಾಕಷ್ಟು ಗಮನ ಹರಿಸುತ್ತಾರೆ. ಅವರು 'ರಾಜಾ ಸಾಬ್' ಚಿತ್ರವನ್ನು ಒಪ್ಪಿಕೊಂಡಾಗ ಎಲ್ಲರಿಗೂ ಅಚ್ಚರಿ ಆಗಿದ್ದಂತೂ ಸುಳ್ಳಲ್ಲ. ಈ ಸಿನಿಮಾ ಹಾರರ್ ಕಾಮಿಡಿ ಶೈಲಿಯಲ್ಲಿ ಮೂಡಿ ಬಂದಿದೆ. ಈ ಚಿತ್ರ ನೋಡಿದ ಅನೇಕರು ನೆಗೆಟಿವ್ ಆಗಿ ವಿಮರ್ಶೆ ನೀಡಿದ್ದಾರೆ. ಅಭಿಮಾನಿಗಳಿಗೂ ಸಿನಿಮಾ ಇಷ್ಟ ಆಗಿಲ್ಲ ಎಂದೇ ಹೇಳಬಹುದು. ಈ ಸಿನಿಮಾ ಮೊದಲ ದಿನ ಕೇವಲ 45 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಪ್ರೀಮಿಯರ್ ಶೋಗಳಿಂದ ಚಿತ್ರಕ್ಕೆ 9.15 ಕೋಟಿ ರೂಪಾಯಿ ಹರಿದು ಬಂದಿದೆ. ಎಲ್ಲವೂ ಸೇರಿದರೆ ಸಿನಿಮಾ ಕಲೆಕ್ಷನ್ 54 ಕೋಟಿ ರೂಪಾಯಿ ಅಷ್ಟು ಆಗಿದೆ.

'ರಾಜಾ ಸಾಬ್' ಚಿತ್ರವನ್ನು ಏಕೆ ಮಾಡಿದಿರಿ ಎಂದು ಕೇಳಿದಾಗ ಪ್ರಭಾಸ್ ಇದಕ್ಕೆ ಸ್ಪಷ್ಟನೆ ನೀಡಿದ್ದರು. ಕಾಮಿಡಿ ಸಿನಿಮಾಗಳನ್ನು ತಾವು ಮಾಡಬಲ್ಲರು ಎಂಬುದನ್ನು ತೋರಿಸಲು ಅವರು ಈ ಚಿತ್ರವನ್ನು ಒಪ್ಪಿಕೊಂಡಿದ್ದರಂತೆ. ಇದು ಅನೇಕರಿಗೆ ಅಚ್ಚರಿ ಮೂಡಿಸಿತ್ತು. ಈಗ ಅವರು ಈ ವಿಷಯದಲ್ಲಿ ಸೋತಿದ್ದಾರೆ. ಮುಂದಿನ ದಿನಗಳಲ್ಲಿ ಸಿನಿಮಾ ಅಂದುಕೊಂಡ ಮಟ್ಟದಲ್ಲಿ ಪ್ರದರ್ಶನ ಕಾಣದೆ ಇರಬಹುದು ಎಂದು ಹೇಳಲಾಗುತ್ತಾ ಇದೆ. 'ರಾಜಾ ಸಾಬ್' ನೋಡಿದ ಮೊದಲ ದಿನವೇ ಜನರು ಹೀನಾಯ ವಿಮರ್ಶೆ ನೀಡಿದರು. ಅನೇಕರು ಈ ಚಿತ್ರವನ್ನು 'ರಾಧೆ ಶ್ಯಾಮ್' ಚಿತ್ರದ ದುರಂತಕ್ಕೆ ಹೋಲಿಸಿದರು. ರಾಜಾ ಸಾಬ್ ಚಿತ್ರವನ್ನು ಮಾರುತಿ ನಿರ್ದೇಶನ ಮಾಡಿದ್ದಾರೆ. ಸಿನಿಮಾ ಇಷ್ಟ ಆಗಿಲ್ಲ ಎಂದರೆ ಮನೆಗೆ ಬನ್ನಿ ಎಂದು ಅಡ್ರೆಸ್ ಕೊಟ್ಟಿದ್ದರು.

# ತಂಡದಿಂದ ಕೈಬಿಟ್ಟ ಬಗ್ಗೆ ಮೌನ ಮುರಿದ ಗಿಲ್



2026ರ ಟಿ20 ವಿಶ್ವಕಪ್ ತಂಡದಿಂದ ಕೈಬಿಟ್ಟ ಬಗ್ಗೆ ಶುಭ್‌ಮನ್ ಗಿಲ್ ಮೌನ ಮುರಿದಿದ್ದಾರೆ. ಆಯ್ಕೆದಾರರ ನಿರ್ಧಾರವನ್ನು ಗೌರವಿಸುವುದಾಗಿ ತಿಳಿಸಿದ ಗಿಲ್, ತಂಡಕ್ಕೆ ಶುಭ ಹಾರೈಸಿದರು. ಅವರ ಕಳಪೆ ಟಿ20 ಫಾರ್ಮ್ ಮತ್ತು ತಂಡದ ಸಂಯೋಜನೆಯಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್ ಸ್ಪಷ್ಟಪಡಿಸಿದ್ದಾರೆ. ಟೆಸ್ಟ್ ಮತ್ತು ಏಕದಿನ ತಂಡದ ನಾಯಕ ಶುಭ್‌ಮನ್ ಗಿಲ್ 2026 ರ ಟಿ20 ವಿಶ್ವಕಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆಯದಿರುವ ಬಗ್ಗೆ ಮೊದಲ ಬಾರಿಗೆ ಮೌನ ಮುರಿದಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಆರಂಭಕ್ಕೂ ಮೊದಲು ನಡೆದ ಪೂರ್ವ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಗಿಲ್, ಆಯ್ಕೆದಾರರ ನಿರ್ಧಾರವನ್ನು ಸಂಪೂರ್ಣವಾಗಿ ಗೌರವಿಸುವುದಾಗಿ ಮತ್ತು ಪಂದ್ಯಾವಳಿಯಲ್ಲಿ ತಂಡದ ಯಶಸ್ಸನ್ನು ಹಾರೈಸುವುದಾಗಿ ಹೇಳಿದರು. ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೂ ಮುನ್ನ ಟಿ20 ವಿಶ್ವಕಪ್ ತಂಡದ ಆಯ್ಕೆಯ ಕುರಿತು ಮಾತನಾಡಿದ ಶುಭಮನ್ ಗಿಲ್, 'ನಾನು ಆಯ್ಕೆದಾರರ ನಿರ್ಧಾರವನ್ನು ಗೌರವಿಸುತ್ತೇನೆ. ಟಿ20 ವಿಶ್ವಕಪ್‌ಗಾಗಿ ತಂಡಕ್ಕೆ ಶುಭ ಹಾರೈಸುತ್ತೇನೆ.

ನನ್ನ ಹಣೆಬರಹದಲ್ಲಿ ಬರೆದಿರುವುದನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ. ಒಬ್ಬ ಆಟಗಾರ ಯಾವಾಗಲೂ ದೇಶಕ್ಕಾಗಿ ತನ್ನ ಕೈಲಾದಷ್ಟು ಮಾಡಲು ಬಯಸುತ್ತಾನೆ ಎಂದಿದ್ದಾರೆ.

ವಾಸ್ತವವಾಗಿ ಗಿಲ್‌ಗೆ ಟಿ20 ಮಾದರಿಯಲ್ಲಿ ಸಾಕಷ್ಟು ಅವಕಾಶಗಳನ್ನು ನೀಡಲಾಯಿತು. ಆದರೆ ಈ ಮಾದರಿಯಲ್ಲಿ ಗಿಲ್‌ಗೆ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ವಿಶೇಷವಾಗಿ ದಕ್ಷಿಣ ಆಫ್ರಿಕಾ ವಿರುದ್ಧದ ತವರು ಟಿ20 ಸರಣಿಯಲ್ಲಿ ಗಿಲ್ ಅವರ ಪ್ರದರ್ಶನ ನಿರಾಶಾದಾಯಕವಾಗಿತ್ತು, ಈ ಸರಣಿಯಲ್ಲಿ ಗಿಲ್ ಕ್ರಮವಾಗಿ 4, 4, 0 ಮತ್ತು 28 ರನ್ ಕಲೆಹಾಕಿದರು.

ಇದಲ್ಲದೆ 2025 ರಲ್ಲಿ ಆಡಿದ ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗಿಲ್‌ಗೆ ಒಂದೇ ಒಂದು ಅರ್ಧಶತಕ ಬಾರಿಸಲು ಸಾಧ್ಯವಾಗಲಿಲ್ಲ. ವರ್ಷದುದ್ದಕ್ಕೂ 15 ಅಂತರರಾಷ್ಟ್ರೀಯ ಟಿ20ಪಂದ್ಯಗಳನ್ನು ಆಡಿದ ಶುಭ್‌ಮನ್ ಗಿಲ್ 24.25 ರ ಸರಾಸರಿಯಲ್ಲಿ ಕೇವಲ 219 ರನ್ ಕಲೆಹಾಕಿದರು. ಅವರ ಸ್ಟ್ರೈಕ್ ರೇಟ್ ಕೂಡ ಕೇವಲ 137.26 ಆಗಿತ್ತು.

ಇನ್ನು ಶುಭ್‌ಮನ್ ಗಿಲ್ ಅವರನ್ನು ಟಿ20 ವಿಶ್ವಕಪ್ ತಂಡದಿಂದ ಕೈಬಿಟ್ಟ ಬಗ್ಗೆ ಮಾತನಾಡಿದ್ದ ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್, 'ಗಿಲ್ ಅವರ ಇತ್ತೀಚಿನ ಫಾರ್ಮ್ ಮತ್ತು ತಂಡದ ಸಂಯೋಜನೆಯ ದೃಷ್ಟಿಯಿಂದ ಅವರನ್ನು ಹೊರಗಿಡಲಾಗಿದೆ. ಗಿಲ್ ಎಂತಹ ಗುಣಮಟ್ಟದ ಆಟಗಾರ ಎಂದು ನಮಗೆ ತಿಳಿದಿದೆ, ಆದರೆ ಅವರ ಪ್ರಸ್ತುತ ಫಾರ್ಮ್ ತಂಡದಿಂದ ಹೊರಗಿಡುವಂತೆ ಮಾಡಿದೆ. ಅಲ್ಲದೆ ಟಿ20 ವಿಶ್ವಕಪ್‌ಗೆ 15 ಆಟಗಾರರನ್ನು ಆಯ್ಕೆ ಮಾಡಬೇಕಿರುವ ಕಾರಣ ಗಿಲ್‌ರನ್ನು ಆಯ್ಕೆಗೆ ಪರಿಗಣಿಸಲು ಸಾಧ್ಯವಾಗಲಿಲ್ಲ ಎಂದಿದ್ದರು.

# ಭರ್ಜರಿ ದಾಖಲೆ ತಪ್ಪಿಸಿಕೊಂಡ ಲಾರೆನ್



ಇಂಗ್ಲೆಂಡ್ ತಂಡದ ವೇಗದ ಬೌಲರ್ ಲಾರೆನ್ ಬೆಲ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಪಾದಾರ್ಪಣೆ ಮಾಡಿದ್ದಾರೆ. ಪಾದಾರ್ಪಣೆ ಪಂದ್ಯದಲ್ಲೇ ಮಾರಕ ದಾಳಿ ಸಂಘಟಿಸುವ ಮೂಲಕ ಲಾರೆನ್ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಆದರೆ ಕೇವಲ ಒಂದು ಎಸೆತದಿಂದಾಗಿ ಶಬ್ನಿಮ್ ಇಸ್ಮಾಯಿಲ್ ಹೆಸರಿನಲ್ಲಿರುವ ದಾಖಲೆ ಮುರಿಯುವಲ್ಲಿ ವಿಫಲರಾಗಿದ್ದಾರೆ. ಇಂಗ್ಲೆಂಡ್ ವೇಗಿ ಲಾರೆನ್ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಹೊಸ ಇನಿಂಗ್ಸ್ ಆರಂಭಿಸಿದ್ದಾರೆ. ಅದು ಸಹ ರಾಯಲ್ ಅಭಿಮಾನಿಗಳನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಕಣಕ್ಕಿಳಿಯುವ ಮೂಲಕ ಎಂಬುದು ವಿಶೇಷ. ಈ ಹಿಂದೆ ಯುಪಿ ವಾರಿಯರ್ಸ್ ಪರ ಕಣಕ್ಕಿಳಿದಿದ್ದ ಲಾರೆನ್ ಬೆಲ್ ಆರ್‌ಸಿಬಿ ಪರ ಆಡಿದ ಚೊಚ್ಚಲ ಪಂದ್ಯದಲ್ಲೇ ಎಲ್ಲರ ಗಮನ ಸೆಳೆದಿದ್ದಾರೆ. ಅದರಲ್ಲೂ ಮೊದಲ ಓವರ್ ಮೇಡನ್ ಮಾಡುವ ಮೂಲಕ. ಅಂದರೆ ವುಮೆನ್ಸ್ ಪ್ರೀಮಿಯರ್ ಲೀಗ್ 2026 ಅನ್ನು ಬೆಲ್ ಮೇಡನ್ ಓವರ್‌ನೊಂದಿಗೆ ಆರಂಭಿಸಿದ್ದಾರೆ. ಅಷ್ಟೇ ಅಲ್ಲದೆ ಬೆಲ್ 2ನೇ ಓವರ್‌ನಲ್ಲಿ ನೀಡಿದ್ದು ಕೇವಲ ಒಂದು ರನ್ ಮಾತ್ರ. ಇನ್ನು ತನ್ನ ಮೂರನೇ ಓವರ್‌ನಲ್ಲಿ 6 ರನ್ ನೀಡಿದ್ದರು. ಹಾಗೆಯೇ ಕೊನೆಯ ಓವರ್‌ನಲ್ಲಿ ಕೇವಲ 7 ರನ್ ಮಾತ್ರ ಬಿಟ್ಟು ಕೊಟ್ಟಿದ್ದರು. ಈ ಮೂಲಕ 4 ಓವರ್‌ಗಳಲ್ಲಿ ಕೇವಲ 14 ರನ್ ನೀಡಿ 1 ವಿಕೆಟ್ ಪಡೆದಿದ್ದರು. ವಿಶೇಷ ಎಂದರೆ ಲಾರೆನ್ ಬೆಲ್ 24 ಎಸೆತಗಳಲ್ಲಿ 19 ಎಸೆತಗಳನ್ನು ಡಾಟ್ ಮಾಡಿದ್ದರು. ಅಂದರೆ 19 ಎಸೆತಗಳಲ್ಲಿ ಯಾವುದೇ ರನ್ ನೀಡಿರಲಿಲ್ಲ. ಆದರೆ ಉಳಿದ 6 ಎಸೆತಗಳಲ್ಲಿ ರನ್ ನೀಡುವ ಮೂಲಕ ಭರ್ಜರಿ ದಾಖಲೆಯೊಂದನ್ನು ತಪ್ಪಿಸಿಕೊಂಡರು. ಅದರಲ್ಲೂ ಒಂದೇ ಒಂದು ಎಸೆತವನ್ನು ಡಾಟ್ ಮಾಡಿದ್ರೆ ಲಾರೆನ್ ಹೆಸರಿಗೆ ದಾಖಲೆಯೊಂದು ಸೇರ್ಪಡೆಯಾಗುತ್ತಿತ್ತು. ಹೌದು, ವುಮೆನ್ಸ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ 4 ಓವರ್‌ಗಳನ್ನು ಎಸೆದು ಅತ್ಯಧಿಕ ಡಾಟ್ ಬಾಲ್ ಮಾಡಿದ ಭರ್ಜರಿ ದಾಖಲೆ ಮುಂಬೈ ಇಂಡಿಯನ್ಸ್ ತಂಡದ ವೇಗಿ ಶಬ್ನಿನ್ ಇಸ್ಮಾಯಿಲ್ ಹೆಸರಿನಲ್ಲಿದೆ. 2025 ರಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಶಬ್ನಿಮ್ 4 ಓವರ್‌ಗಳಲ್ಲಿ 20 ಡಾಟ್ ಬಾಲ್ ಎಸೆದಿದ್ದರು. ಈ ಭರ್ಜರಿ ದಾಖಲೆ ಮುರಿಯುವ ಅವಕಾಶ ಲಾರೆನ್ ಬೆಲ್‌ಗಿತ್ತು. ಆದರೆ ತನ್ನ ಕೊನೆಯ ಓವರ್‌ನ ಅಂತಿಮ 4 ಎಸೆತಗಳಲ್ಲಿ ರನ್ ನೀಡುವ ಮೂಲಕ ಬೆಲ್ ಡಾಟ್ ಬಾಲ್ ದಾಖಲೆ ಬರೆಯುವ ಅವಕಾಶವನ್ನು ಕೈಚೆಲ್ಲಿಕೊಂಡರು. ಇದಾಗ್ಯೂ ಆರ್‌ಸಿಬಿ ಪರ ಒಂದು ಪಂದ್ಯದಲ್ಲಿ ಅತ್ಯಧಿಕ ಡಾಟ್ ಬಾಲ್ ಎಸೆದ ಬೌಲರ್ ಎಂಬ ದಾಖಲೆ ಲಾರೆನ್ ಬೆಲ್ ಪಾಲಾಗಿದೆ.

# ಅಭ್ಯಾಸ ಪಂದ್ಯದಲ್ಲೇ ಅಬ್ಬರಿಸಿದ ವೈಭವ್



**7 ಸಿಕ್ಸರ್ 96 ರನ್..!**

ಅಂಡರ್-19 ವಿಶ್ವಕಪ್ ಸಿದ್ಧತೆಯಲ್ಲಿ ಭಾರತ ಯುವ ತಂಡದ ಆಟಗಾರ ವೈಭವ್ ಸೂರ್ಯವಂಶಿ ಸ್ಕಾಟ್ಲೆಂಡ್ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಅಬ್ಬರಿಸಿದ್ದಾರೆ. ಕೇವಲ 50 ಎಸೆತಗಳಲ್ಲಿ 96 ರನ್ ಬಾರಿಸಿ ಶತಕದಿಂದ ವಂಚಿತರಾದರೂ, ವೈಭವ್ ತಮ್ಮ ಸ್ಫೋಟಕ ಫಾರ್ಮ್ ಮುಂದುವರಿಸಿದ್ದಾರೆ. ಅವರ ಭರ್ಜರಿ ಬ್ಯಾಟಿಂಗ್ ಭಾರತ ತಂಡದ ವಿಶ್ವಕಪ್ ಗೆಲುವಿನ ಭರವಸೆಯನ್ನು ಹೆಚ್ಚಿಸಿದೆ.

ನಾಯಕ ಆಯುಷ್ ಮತ್ತು ವಿಹಾನ್ ಕೂಡ ತಂಡ ಸೇರಿರುವುದು ಬಲ ತಂದಿದೆ. 2026 ರ ಅಂಡರ್-19 ವಿಶ್ವಕಪ್ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ಹೀಗಾಗಿ ಎಲ್ಲಾ ತಂಡಗಳು ಅಭ್ಯಾಸ ಪಂದ್ಯದಲ್ಲಿ ನಿರತವಾಗಿವೆ. 2026 ರ ಅಂಡರ್-19 ವಿಶ್ವಕಪ್ ಜನವರಿ 15 ರಂದು ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ ಆರಂಭವಾಗುತ್ತದೆ. ಅದಕ್ಕೂ ಮೊದಲು, ಎಲ್ಲಾ ತಂಡಗಳು ಇಂದು ಅಂದರೆ ಜನವರಿ 10 ರಿಂದ ಅಭ್ಯಾಸ ಪಂದ್ಯಗಳನ್ನು ಆಡುತ್ತಿವೆ. ಆ ಪ್ರಕಾರ ಭಾರತ ಯುವ ತಂಡ ತನ್ನ ಮೊದಲ ಅಭ್ಯಾಸ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು ಎದುರಿಸಿದೆ. ಈ ಪಂದ್ಯದಲ್ಲಿ ಟೀಂ ಇಂಡಿಯಾ ಪರ ಕಣಕ್ಕಿಳಿದಿದ್ದ ವೈಭವ್ ಸೂರ್ಯವಂಶಿ ಅಬ್ಬರದ ಇನ್ನಿಂಗ್ಸ್ ಆಡಿದರು. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾದಂತಹ ತಂಡಗಳ ವಿರುದ್ಧ ವೈಭವ್ ಹೇಗೆ ಮಿಂಚಿದ್ದರೋ ಅದೇ ರೀತಿ ಸ್ಕಾಟ್ಲೆಂಡ್ ವಿರುದ್ಧವೂ ಸಿಕ್ಸರ್‌ಗಳ ಮಳೆಗರೆದಿದ್ದಾರೆ. ಪ್ರಸ್ತುತ ಟೀಂ ಇಂಡಿಯಾದ ಯುವ ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ ಸ್ಫೋಟಕ ಫಾರ್ಮ್‌ನಲ್ಲಿದ್ದಾರೆ. ಮೊದಲ ಬಾರಿಗೆ ವಿಶ್ವಕಪ್‌ನಲ್ಲಿ ಭಾಗವಹಿಸುತ್ತಿರುವ ವೈಭವ್ ಮೇಲೆ ಭಾರತ ತಂಡ ಹೆಚ್ಚಿನ ಭರವಸೆಯನ್ನು ಹೊಂದಿದೆ. ಆ ಪ್ರಕಾರ 14 ವರ್ಷದ ವೈಭವ್, ಸ್ಕಾಟ್ಲೆಂಡ್ ವಿರುದ್ಧ ಬೌಂಡರಿ ಮತ್ತು ಸಿಕ್ಸರ್‌ಗಳ ಮಳೆಗರೆದರು. ಆದರೆ ಕೇವಲ 4 ರನ್‌ಗಳ ಅಂತರದಿಂದ ಶತಕದಿಂದ ವಂಚಿತರಾದರು.

ಇತ್ತೀಚೆಗೆ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಎರಡು ಸ್ಫೋಟಕ ಇನ್ನಿಂಗ್ಸ್‌ಗಳನ್ನು ಆಡಿದ್ದ ವೈಭವ್, ಸ್ಕಾಟ್ಲೆಂಡ್ ವಿರುದ್ಧವೂ ಬೌಂಡರಿ ಮತ್ತು ಸಿಕ್ಸರ್‌ಗಳ ಮಳೆಗರೆದರು. ಕೇವಲ 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ವೈಭವ್ ಬಹುತೇಕ ಪ್ರತಿ ಓವರ್‌ನಲ್ಲಿಯೂ ಬೌಂಡರಿ ಅಥವಾ ಸಿಕ್ಸರ್ ಬಾರಿಸಿದರು. ಇದರ ಪರಿಣಾಮವಾಗಿ ಶತಕದ ಸನಿಹಕ್ಕೂ ಬಂದರು.

# ಹೊಸ ಇತಿಹಾಸ ಆರ್‌ಸಿಬಿಯಂತೆ ಈವರೆಗೆ ಯಾವುದೇ ತಂಡ ಗೆದ್ದಿಲ್ಲ!

**ಅತ್ಯಧಿಕ ರನ್ ಚೇಸ್ ಮಾಡಿ ಗೆದ್ದ ತಂಡ**




ಮುಂಬೈನ ಡಿವೈ ಪಾಟೀಲ್ ಸ್ಟೇಡಿಯಂನಲ್ಲಿ ನಡೆದ ವುಮೆನ್ಸ್ ಪ್ರೀಮಿಯರ್ ಲೀಗ್‌ನ ಮೊದಲ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 154 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತುವ ಮೂಲಕ ಆರ್‌ಸಿಬಿ ತಂಡವು 20ನೇ ಓವರ್‌ನ ಕೊನೆಯ ಎಸೆತದಲ್ಲಿ ಜಯ ಸಾಧಿಸಿದೆ.

ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಹೊಸ ಇತಿಹಾಸ ನಿರ್ಮಾಣವಾಗಿದೆ. ಅದು ಕೂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್‌ಗಳಿಂದ. ಅಂದರೆ ಮುಂಬೈ ಇಂಡಿಯನ್ಸ್ ವಿರುದ್ಧ ಭರ್ಜರಿ ಗೆಲುವು ದಾಖಲಿಸುವ ಮೂಲಕ ಆರ್‌ಸಿಬಿ ಪಡೆ ಹೊಸ ದಾಖಲೆ ನಿರ್ಮಿಸಿದ್ದಾರೆ.

ನವಿ ಮುಂಬೈನ ಡಿವೈ ಪಾಟೀಲ್ ಸ್ಟೇಡಿಯಂನಲ್ಲಿ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕಿ ಸ್ಮೃತಿ ಮಂಧಾನ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 154 ರನ್ ಕಲೆಹಾಕಿದ್ದರು. 155 ರನ್‌ಗಳ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ 10 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಕಲೆಹಾಕಿದ್ದು ಕೇವಲ 75 ರನ್‌ಗಳು ಮಾತ್ರ. ಇನ್ನುಳಿದ 10 ಓವರ್‌ಗಳಲ್ಲಿ 82 ರನ್ ಗಳಿಸುವ ಮೂಲಕ ಆರ್‌ಸಿಬಿ ತಂಡವು ರೋಚಕ ಜಯ ಸಾಧಿಸಿದೆ.

ಈ ಮೂಲಕ ವುಮೆನ್ಸ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲೇ 5 ವಿಕೆಟ್ ಕಳೆದುಕೊಂಡ ಬಳಿಕ ಕೊನೆಯ 10 ಓವರ್‌ಗಳಲ್ಲಿ ಅತ್ಯಧಿಕ ರನ್ ಚೇಸ್ ಮಾಡಿ ಗೆದ್ದ ತಂಡವೆಂಬ ಶ್ರೇಷ್ಠ ದಾಖಲೆಯೊಂದನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನದಾಗಿಸಿಕೊಂಡಿದೆ. ಈ ಮೂಲಕ ಆರ್‌ಸಿಬಿ ತಂಡವು ಡಬ್ಲ್ಯೂಪಿಎಲ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದೆ. ಮೊದಲ ಪಂದ್ಯದಲ್ಲಿ ಬಲಿಷ್ಠ ಮುಂಬೈ ಇಂಡಿಯನ್ಸ್ ತಂಡವನ್ನು ಬಗ್ಗು ಬಡಿದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ದ್ವಿತೀಯ ಪಂದ್ಯದಲ್ಲಿ ಯುಪಿ ವಾರಿಯರ್ಸ್ ತಂಡವನ್ನು ಎದುರಿಸಲಿದೆ. ಈ ಪಂದ್ಯವು ಜನವರಿ 12 ರಂದು ಡಿವೈ ಪಾಟೀಲ್ ಸ್ಟೇಡಿಯಂನಲ್ಲಿ ನಡೆಯಲಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966